ಅಂಕಿತಪದಮುಕ್ತಾವಳಿ

(ಶ್ರೀ ತಂದೆ ಮುದ್ದುಮೋಹನ ವಿಠಲದಾಸ ವಿರಚಿತ ಕೀರ್ತನೆಗಳು, ಅಂಕಿತಪದಗಳು ಇತ್ಯಾದಿ)



ಭೋಗಾಲಕ್ಷ್ಮೀನರಸಿಂಹ, ದೇವರಾಯನದುರ್ಗ



ತಂದೆ ಮುದ್ದುಮೋಹನ ವಿಠಲದಾಸರಿಂದ ಪ್ರತಿಷ್ಠಿತ ಶ್ರೀ ಸುಂದರೇಶ ಪ್ರಾಣದೇವರು,
ದಾಸರಕೊಪ್ಪಲು, ದೇವರಾಯನ ದುರ್ಗ

ಪ್ರಕಾಶಕರು
ದಾಸಕೂಟ ಸಭಾ, ದೇವರಾಯನದುರ್ಗ
ಮತ್ತು
ಶ್ರೀ ಗುರು ಕೃಪಾ ಗ್ರಂಥಮಾಲಾ
1423, ಕೃಷ್ಣಮೂರ್ತಿಪುರಂ, ಮೈಸೂರು - 4

ಅಂಕಿತಪದಮುಕ್ತಾವಳಿ

(ಶ್ರೀ ತಂದೆ ಮುದ್ದುಮೋಹನವಿಠಲದಾಸ ವಿರಚಿತ ಕೀರ್ತನೆಗಳು
ಅಂಕಿತಪದಗಳು ಇತ್ಯಾದಿ)

ಪ್ರಕಾಶಕರು
ದಾಸಕೂಟ ಸಭಾ, ದೇವರಾಯನದುರ್ಗ
ಮತ್ತು
ಶ್ರೀ ಗುರು ಕೃಪಾ ಗ್ರಂಥಮಾಲಾ
1423, ಕೃಷ್ಣಮೂರ್ತಿಪುರಂ, ಮೈಸೂರು - 4

ANKITAPADAMUKTAVALI : Sri Tande Muddumohana Vittaladasa Virachita Kirtanegalu, Ankitapadagalu etc., First Edition : 2009. Published by : Dasakoota Sabha, Devarayanadurga & Sri Guru Krupa Granthamala, Mysore -570 004. Pages : 116

ಮೊದಲನೆಯ ಮುದ್ರಣ : 2009

ಮುದ್ರಕರು : ಎ. ಜಿ. ಸುವ್ರತೀಂದ್ರ, ವಾಣೀಪ್ರೆಸ್
ಗೀತಾರಸ್ತೆ, ಚಾಮರಾಜಪುರಂ, ಮೈಸೂರು - 570 005
ದೂರವಾಣಿ - 2330295

ಪ್ರಕಾಶಕರ ನುಡಿ

ಶ್ರೀ ತಂದೆ ಮುದ್ದುಮೋಹನ ವಿಠಲಾಂಕಿತ ಪರಮಪ್ರಿಯ ಶ್ರೀ ಸುಬ್ಬರಾಯದಾಸರು ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ದಕ್ಷಿಣ ಕರ್ನಾಟಕ ಮತ್ತು ಸುತ್ತಮುತ್ತಲಿನ ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಆಂದೋಲನವನ್ನುಂಟು ಮಾಡಿದ ಒಬ್ಬ ಕ್ರಾಂತಿಕಾರಕ ಹರಿದಾಸರು. ಅವರ ಸೂಕ್ಷ್ಮ ಪರಿಚಯವನ್ನು ಮುಂದಿನ ಪುಟಗಳಲ್ಲಿ ಕಾಣಬಹುದು.

ಶ್ರೀ ಸುಬ್ಬರಾಯದಾಸರು ಜಾತಿ, ಮತ ಇತ್ಯಾದಿಗಳನ್ನು ಲೆಕ್ಕಿಸದೆ ಸಜ್ಜನರೆನಿಸಿದ 1165 ಜನರಿಗೆ ಅಂಕಿತೋಪದೇಶ ಮಾಡಿದ್ದಾರೆ. ಅವುಗಳಲ್ಲಿ 1006 ಅಂಕಿತಗಳು ಮಾತ್ರ ದಾಖಲೆಗೆ ದೊರೆತಿವೆ. ಆದರೆ ಅಂಕಿತಪದಗಳು ದೊರೆತಿರುವುದು ಕೇವಲ 106 ಮಾತ್ರ ಎಂಬುದು ಬಹಳ ವಿಷಾದಕರವಾಗಿದೆ. ಇದರ ಬಗ್ಗೆ ಅವಜ್ಞೆಗಾಗಿ ನಮ್ಮನ್ನು ನಾವೇ ನಿಂದಿಸಿಕೊಳ್ಳಬೇಕಾಗಿದೆ. ದೊರೆತಿರುವುದಷ್ಟಕ್ಕಾದರೂ ಸಹ ದಿವಂಗತ ಪೂಜ್ಯ ಶ್ರೀ ಗುರುಗೋವಿಂದ ವಿಠಲದಾಸರ ಕಳಕಳಿ, ಚಾರಿತ್ರಿಕ ಪ್ರಜ್ಞೆ, ಶ್ರಮ ಇವುಗಳೇ ಕಾರಣವಾಗಿವೆ. ಇದಕ್ಕಾಗಿ ನಾವು ಅವರಿಗೆ ಎಷ್ಟು ಕೃತಜ್ಞರಾದರೂ ಸಾಲದೆನ್ನಿಸುತ್ತದೆ. ಯಾರಲ್ಲಾದರೂ ಶ್ರೀ ಸುಬ್ಬರಾಯದಾಸರಿಂದ ಕೊಡಲ್ಪಟ್ಟ ಅಂಕಿತ-ಅಂಕಿತಪದಗಳ ಬಗ್ಗೆ ಹೆಚ್ಚಿನ ಮಾಹಿತಿ ಇದ್ದಲ್ಲಿ ಅದನ್ನು ನಮಗೆ ಒದಗಿಸಬೇಕಾಗಿ ಈ ಮೂಲಕ ಪ್ರಾರ್ಥಿಸುತ್ತೇವೆ. ಕೃತಜ್ಞತೆಯಿಂದ ಅವುಗಳನ್ನು ಸ್ವೀಕರಿಸಿ ಮುಂದಿನ ಆವೃತ್ತಿಗಳಲ್ಲಿ ಸೇರಿಸುವ ಪ್ರಯತ್ನ ಮಾಡುತ್ತೇವೆ.

ಈ ಹೊತ್ತಿಗೆಯಲ್ಲಿ ಸಮಗ್ರತೆಯ ದೃಷ್ಟಿಯಿಂದ ಶ್ರೀದಾಸರ ಸೂಕ್ಷ್ಮ ಪರಿಚಯ, ಭಾವಚಿತ್ರ, ಅಂಕಿತ ನೀಡುತ್ತಿದ್ದ ಮುದ್ರಿತ ಹಾಳೆಯ ಪಡಿಯಚ್ಚು, ಅವರು ರಚಿಸಿದ ದೇವರನಾಮಗಳು, ಉಗಾಭೋಗಗಳು ಇತ್ಯಾದಿ ಮತ್ತು ದೊರಕಿರುವ ಅಂಕಿತ ಪದಗಳು ಹಾಗೂ ನೀಡಿದ ಅಂಕಿತ ಪದಗಳ ಪಟ್ಟಿ ಮೊದಲಾದವುಗಳನ್ನು ಅಳವಡಿಸಲಾಗಿದೆ. ಅಲ್ಲದೆ ಶ್ರೀದಾಸರ ಸೂಚನೆಯಂತೆ ಅವರ ನಂತರ ಅವರ ಪುತ್ರರೂ, ಶ್ರೀ ವರದರಾಜವಿಠಲಾಂಕಿತರಾದ ಶ್ರೀ ವೆಂಕಟರಾಯದಾಸರಿಂದ ಶ್ರೀ ತಂದೆಮುದ್ದುಮೋಹನವಿಠಲದಾಸರ ಹೆಸರಿನಲ್ಲಿಯೇ ಕೊಡಲ್ಪಟ್ಟ ಅಂಕಿತ-ಅಂಕಿತ ಪದಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ಈ ಹೊತ್ತಿಗೆಯನ್ನು ಶ್ರೀದಾಸರ ಪರಂಪರೆಯವರೂ ಹಾಗು ಹರಿದಾಸ ಪಂಥದ ಇತರ ಅಭಿಮಾನಿಗಳೆಲ್ಲರೂ ಸಹ ಆದರದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇವೆ.

ಈ ಪುಸ್ತಕವನ್ನು "ಗುರುಕೃಪಾ ಗ್ರಂಥಮಾಲಾ" ಮೈಸೂರು ಮತ್ತು "ದಾಸಕೂಟ ಸಭಾ", ದೇವರಾಯನ ದುರ್ಗ ಇವರುಗಳ ಸಹಯೋಗದಲ್ಲಿ ಪ್ರಕಾಶಪಡಿಸಲಾಗುತ್ತಿದೆ. ಇದಕ್ಕಾಗಿ ಶ್ರಮಿಸಿದ, ಸಹಕಾರವಿತ್ತ ಎಲ್ಲರಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಈ ಪುಸ್ತಕದ ಪ್ರಕಟಣೆಗೆ ಅತ್ಯಂತ ಶ್ರಮವಹಿಸಿ ಶ್ರೀಯುತ ಎ. ಜಿ. ಸುವ್ರತೀಂದ್ರ ಹಾಗೂ ಅವರ ಪರಿವಾರ ಸುಂದರವಾಗಿ ಮುದ್ರಣ ಮಾಡಿರುವುದಕ್ಕೆ (ವಾಣೀ ಪ್ರೆಸ್) ಪ್ರಕಾಶಕರುಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಎಮ್.ಜಿ. ಮಾಧವರಾವ್
ಎನ್.ವಿ. ಸುಂದರರಾವ್
ಪ್ರಕಾಶಕರುಗಳ ಪರವಾಗಿ

ಪರಮಪ್ರಿಯ ಶ್ರೀಸುಬ್ಬರಾಯದಾಸರ
(ಶ್ರೀ ತಂದೆಮುದ್ದುಮೋಹನವಿಠಲದಾಸರ) ಕಿರುಪರಿಚಯ

ಶ್ರೀ ಸುಬ್ಬರಾಯದಾಸರು ಬೆಂಗಳೂರು ಜಿಲ್ಲೆ ಡಾಬಸಪೇಟೆ ಬಳಿ ನರಸೀಪುರ ಎಂಬ ಗ್ರಾಮದಲ್ಲಿ ಕ್ರಿ.ಶ. 1865 ಕ್ರೋಧನ ಸಂವತ್ಸರ ಶ್ರಾವಣ ಶುದ್ಧ ಚೌತಿ (ಇದು ಚತುರ್ದಶಿ, ಕ್ರಿ.ಶ. 6-8-1865 ಇರಬೇಕೆನ್ನಿಸುತ್ತದೆ) ರವಿವಾರ ಶ್ರವಣ ನಕ್ಷತ್ರದಲ್ಲಿ ಭಾರದ್ವಾಜಗೋತ್ರದವರಾದ ಶೇಷಪ್ಪ ಹಾಗೂ ಲಕ್ಷ್ಮೀದೇವಮ್ಮ ಎಂಬ ದಂಪತಿಗಳಲ್ಲಿ ಜನ್ಮ ತಾಳಿದರು. ಘಾಟಿ ಸುಬ್ರಹ್ಮಣ್ಯಾಂತರ್ಗತ ಶ್ರೀಜಯಾಸಂಕರ್ಷಣನ ವರಪ್ರಸಾದದಿಂದ ಹುಟ್ಟಿದ್ದರಿಂದ ಸುಬ್ಬರಾಯ ಎಂಬ ಹೆಸರಿಡಲಾಯಿತು. ಅಕ್ಷರಾಭ್ಯಾಸ ಹಾಗೂ 8ನೇ ವಯಸ್ಸಿನಲ್ಲಿ ಬ್ರಹ್ಮೋಪದೇಶ ಕುಂದಾಪುರ ಶ್ರೀ ವ್ಯಾಸರಾಯಮಠದ ಶ್ರೀಲಕ್ಷ್ಮೀಪ್ರಿಯತೀರ್ಥರಿಂದ ನಡೆಯಿತು. ನರಸೀಪುರ ಹಾಗೂ ಕಾನಕಾನಹಳ್ಳಿಯಲ್ಲಿ ತಕ್ಕ ಮಟ್ಟಿನ ಲೌಕಿಕ ವಿದ್ಯಾಭ್ಯಾಸ ಪಡೆದರು. ಎರಡು ವರ್ಷಗಳು ಉಪಾಧ್ಯಾಯ ವೃತ್ತಿಯನ್ನು ನಡೆಸಿದರು. ಹದಿನಾಲ್ಕನೇ ವಯಸ್ಸಿನಲ್ಲಿ ಶ್ರೀ ವೆಂಕಟನಾರಾಯಣಾಚಾರ್ಯ ಹಾಗೂ ಶ್ರೀಮತಿ ಲಕ್ಷ್ಮೀನರಸಮ್ಮ ದಂಪತಿಗಳ ಸುಪುತ್ರಿ 6-7 ವರ್ಷದ ಅಚ್ಚಮ್ಮನೊಂದಿಗೆ ವಿವಾಹವಾಯಿತು.

ಶ್ರೀ ಸುಬ್ಬರಾಯರು ಬಾಲ್ಯದಿಂದಲೇ ವಿಷಯ ವೈರಾಗ್ಯ ಮತ್ತು ಆಧ್ಯಾತ್ಮಚಿಂತನೆ ಯನ್ನು ಮೈಗೂಡಿಸಿಕೊಂಡಿದ್ದರು. ಬೆಂಗಳೂರಿನಲ್ಲಿ ಆ ದಿನಗಳಲ್ಲಿ ಪ್ರಖ್ಯಾತರಾದ ಬ್ರ|| ಶ್ರೀ|| ವೇ|| ಚಿಂಚೋಳಿ ವೆಂಕಣ್ಣಾಚಾರ್ಯರಲ್ಲಿ ಶ್ರೀಮದಾಚಾರ್ಯರ ಮೂಲ 37 ಗ್ರಂಥಗಳ ವ್ಯಾಸಂಗವನ್ನು ಶಾಂತಿಪೂರ್ವಕ ಸುಮಧ್ವವಿಜಯ ಪ್ರಾಥಮಿಕ ಪಾಠದ ಮೂಲಕ ನಡೆಸಿದರು. ನರಸೀಪುರದಲ್ಲಿ ಅದ್ದೂರಿಯಿಂದ ಮಂಗಳ ಮಹೋತ್ಸವವನ್ನು ನಡೆಸಿದರು. ಶ್ರೀ ವಿಜಯದಾಸ ಪ್ರಭೃತಿಗಳ ಚರಿತ್ರಾವಲೋಕನದಿಂದ ತಾವೂ ದಾಸರಾಗಬೇಕೆಂಬ ಹಂಬಲವುಂಟಾಯಿತು. ತಂಬೂರಿ ದೊರಕಿಸಿಕೊಂಡರು. ಶ್ರೀ ಕರಿಗಿರಿನರಸಿಂಹನ ಸನ್ನಿಧಿಯಲ್ಲಿ ಭಜನೆ ಮಾಡಿದರು. ಶ್ರೀ ನರಸಿಂಹಾಚಾರ್ಯ ರೆಂಬುವರು ಇವರಿಗೆ ಗುರುವಿನ ಇರವನ್ನು ಸೂಚಿಸಿದರು. ಶ್ರೀ ವಿಜಯದಾಸರ ಶಿಷ್ಯರಾದ ಶ್ರೀ ವೇಣುಗೋಪಾಲದಾಸರ ಪೀಳಿಗೆಯಲ್ಲಿ ಬಂದ ಶ್ರೀ ಶ್ರೀವರವಿಠಲದಾಸರ ಕರಜರಾದ ದೊಡ್ಡಬಳ್ಳಾಪುರದ ಶ್ರೀ ಮುದ್ದುಮೋಹನವಿಠಲದಾಸರು ಶಿಷ್ಯಾನ್ವೇಷಣೆ ಮಾಡುತ್ತ ನರಸೀಪುರಕ್ಕೆ ಬಂದಿದ್ದರು. ಶ್ರೀ ಸುಬ್ಬರಾಯರನ್ನು ಪರೀಕ್ಷಿಸಿ ತುಮಕೂರಿಗೆ ಬರಲಿಕ್ಕೆ ಹೇಳಿ, ಅಲ್ಲಿ ಶ್ರೀ ವ್ಯಾಸರಾಯಮಠದಲ್ಲಿ ಒಂದು ಸುಮುಹೂರ್ತದಲ್ಲಿ 'ತಂದೆಮುದ್ದುಮೋಹನವಿಠಲ' ಎಂಬ ಅಂಕಿತವನ್ನು ಕೊಟ್ಟು, ಶಿರದಲ್ಲಿ ಹಸ್ತವನ್ನಿಟ್ಟು ಉಪದೇಶ ನೀಡಿದರು.

ಹೀಗೆ ಶ್ರೀ ತಂದೆಮುದ್ದುಮೋಹನವಿಠಲದಾಸರು ವ್ಯಾಸ-ದಾಸ ಉಭಯ ಪಂಥಗಳಲ್ಲಿ ದೀಕ್ಷಿತರಾಗಿ ನಾನಾ ಕಡೆ ಸಂಚರಿಸಿ ಜಾತಿಮತಭೇದವಿಲ್ಲದೆ ಯೋಗ್ಯ ಸುಜೀವಿಗಳಿಗೆ ಅಂಕಿತ ಪ್ರದಾನ ಮಾಡಿದ್ದಾರೆ. ಅಂಕಿತಸ್ಥರಲ್ಲಿ ಮೊದಲಿಗರು ಶ್ರೀ ಪ್ರಾಣನಾಥ ವಿಠಲಾಂಕಿತರಾದ ಶ್ರೀ ಬಾಗೇಪಲ್ಲಿ ಶೇಷದಾಸರು. ಕೊನೆಯವರು ಶ್ರೀ ಗುರುಗೋವಿಂದ ವಿಠಲಾಂಕಿತ ಮೈಸೂರಿನ ಶ್ರೀ ಎಂ. ಆರ್. ಗೋವಿಂದರಾಯರು. ಇವರಿಬ್ಬರ ಮಧ್ಯೆ ಪ್ರಧಾನ ಅಂಕಿತಸ್ಥರು ಶ್ರೀ ಪದ್ಮನಾಭವಿಠಲದಾಸರು. ಶ್ರೀ ಉರಗಾದ್ರಿವಾಸವಿಠಲದಾಸರು, ಶ್ರೀ ರಮಾಕಾಂತವಿಠಲದಾಸರು, ಶ್ರೀ ಗೋಪಾಲಕೃಷ್ಣವಿಠಲದಾಸರು (ಶ್ರೀಮತಿ ಅಂಬಾಬಾಯಿ), ಶ್ರೀ ನಿತ್ಯಾನಂದವಿಠಲದಾಸರು ಮುಂತಾದವರು. ಶ್ರೀ ದಾಸರಾಯರು 1165 ಜನಗಳಿಗೆ ಅಂಕಿತವನ್ನು ನೀಡಿದ್ದಾರೆ. ದಾಸಪಂಥದಲ್ಲಿ ಇಷ್ಟು ಬೃಹತ್ ಪ್ರಮಾಣದಲ್ಲಿ ಅಂಕಿತ ನೀಡಿದವರಲ್ಲಿ ಇವರದೆ ದಾಖಲೆ ಎನ್ನಬಹುದು. ಆತುರದಲ್ಲಿ ಸನ್ಯಾಸ ಸ್ವೀಕರಿಸಿ ಪುನರ್ನಿವೃತ್ತಿ ಹೊಂದಿದ ದೋಷ ಪರಿಹಾರಕ್ಕಾಗಿ ಶ್ರೀದಾಸರನ್ನು ಮೊರೆ ಹೊಕ್ಕು ಅನುಗ್ರಹೀತರಾಗಿ ಪಶ್ಚಾತ್ತಾಪ ರೂಪದಿಂದ ಶ್ರೀ ಹರಿಕಥಾಮೃತಸಾರಕ್ಕೆ ಭಾವಪ್ರಕಾಶಿಕಾ ಎಂಬ ವ್ಯಾಖ್ಯಾನವನ್ನು ಬರೆದ ಶ್ರೀ ಪದ್ಮನಾಭವಿಠಲಾಂಕಿತ ಪಲ್ಲಡಂ ಶ್ರೀ ಮಾಧವಾಚಾರ್ಯರು ಒಬ್ಬ ಪ್ರಧಾನ ಅಂಕಿತಸ್ಥರು. ದಾಸರಾಯರ ಅಚ್ಚುಮೆಚ್ಚಿನ ಪ್ರಶಿಷ್ಯರು ಶ್ರೀ ಉರಗಾದ್ರಿವಾಸವಿಠಲದಾಸರ ಶಿಷ್ಯರಾದ ಶ್ರೀ ತಂದೆವೆಂಕಟೇಶವಿಠಲಾಂಕಿತರಾದ ಚಿತ್ರದುರ್ಗದ ಶ್ರೀ ಆರ್. ರಾಮಚಂದ್ರರಾವ್ ಅವರು.

ಶ್ರೀ ದಾಸರು ನರಸಿಂಹನ ಪ್ರಸಾದದಿಂದ ಕರಿಗಿರಿಯಲ್ಲಿ ದೊರೆತ ಖಾಲಿ ನಿವೇಶನದಲ್ಲಿ ದಾಸಕೂಟಸಭಾವನ್ನು ಕ್ರಿ.ಶ. 1900ರಲ್ಲಿ ಸ್ಥಾಪನೆ ಮಾಡಿದರು. ರಥೋತ್ಸವ ಸಮಯಕ್ಕೆ ಪ್ರತಿವರ್ಷವೂ ಬಂದು ಸಭಾಜ್ಞಾನಕಾರ್ಯ ಹಾಗೂ ಅನ್ನಸಂತರ್ಪಣೆಗಳನ್ನು ನಡೆಸಿದರು ಶಿಷ್ಯರ ಆಧಿ-ವ್ಯಾಧಿಗಳನ್ನು 'ಎನ್ನ ಭಿನ್ನಪ ಕೇಳೋ ಧನ್ವಂತ್ರಿ ದಯಮಾಡೋ.....' ಎಂಬ ದೇವರನಾಮದ ಆವರ್ತನೆ ಮೂಲಕ ಹಾಗೂ ವಾಯುಸ್ತುತಿ ಪುನಶ್ಚರಣೆ ಮೂಲಕ ಪರಿಹಾರ ಮಾಡಿದರು. ದೂರಸ್ಥರಿಗಾಗಿ ತಮ್ಮ ಪ್ರವಚನ ಲಾಭವಾಗಲೆಂದು ಪರಮಾರ್ಥಚಂದ್ರೋದಯ ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಮುಳುಬಾಗಿಲು ಶ್ರೀ ಶ್ರೀಪಾದರಾಜರ ಸನ್ನಿಧಿಯಲ್ಲಿ, ಚಾಮರಾಜಪೇಟೆ ಪ್ರಾಣದೇವರ ಗುಡಿಯಲ್ಲಿ ಮತ್ತು 10 ತಿಂಗಳ ಕಾಲ ಪಾಠಕ್ರಮದಲ್ಲಿ ಮಲ್ಲೇಶ್ವರದ ಎಂ.ಮೂರ್ತಿರಾಯರ ಶ್ರೀಹರಿಕೃಪಾ ನಿವಾಸದಲ್ಲಿ, ಹರಿಕಥಾಮೃತಸಾರ ಪ್ರವಚನವನ್ನು ಮಾಡಿದರು. ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಧರ್ಮಬೋಧಕರಾಗಿ ಸರ್ಕಾರದಿಂದ ನೇಮಿಸಲ್ಪಟ್ಟು ಖೈದಿಗಳಿಗೆ ವಾರಕ್ಕೊಮ್ಮೆ ತತ್ತ್ವೋಪದೇಶ ಮಾಡುತ್ತಿದ್ದರು. ಅನೇಕ ಖೈದಿಗಳನ್ನು ಸನ್ಮಾರ್ಗಾವಲಂಬಿ ಗಳನ್ನಾಗಿಸಿದ್ದಾರೆ.

ತಿರುಪತಿಯಲ್ಲಿ ಶ್ರೀ ಶ್ರೀ ಸತ್ಯಧ್ಯಾನತೀರ್ಥರು ದಾಸರ ಪ್ರವಚನ ಕೇಳಿ ಆನಂದಪಟ್ಟು ಮಧ್ವಸಿದ್ಧಾಂತೋನ್ನಾಹಿನಿ ಸಭೆಗೆ ಧರ್ಮದರ್ಶಿಗಳನ್ನಾಗಿಯೂ ದಾಸಸಾಹಿತ್ಯ ಪರೀಕ್ಷೆಗೆ ಅಧ್ಯಕ್ಷರನ್ನಾಗಿಯೂ ಮಾಡಿದರು. ಶ್ರೀ ದಾಸರು ಪುತ್ತಿಗೆ ಮಠದ ಶ್ರೀಗಳವರಿಂದ ಪರಮಪ್ರಿಯ ಎಂಬ ಬಿರುದು ಪಡೆದರು. ದಾಸರಾಯರ ಆಜಾನುಬಾಹು ವ್ಯಕ್ತಿತ್ವ, ವೈದುಷ್ಯ, ನಿಷ್ಕಾಪಟ್ಯ ಮತ್ತು ಸರಳ ಸಂಭಾಷಣೆಗಳಿಂದ ಪ್ರಭಾವಿತರಾಗಿ ಅನೇಕ ಗಣ್ಯವ್ಯಕ್ತಿಗಳು-ಶ್ರೀ ವಾಯಿಕರ್ ಕೃಷ್ಣಾಚಾರ್ಯರು, ರಾಜಸಭಾಭೂಷಣ ಶ್ರೀ ಕರ್ಪೂರ ಶ್ರೀನಿವಾಸರಾಯರು, ಶ್ರೀ ಸುಬೋಧ ರಾಮರಾಯರು, ಶ್ರೀ ಬೇಲೂರು ಕೇಶವದಾಸರು, ಶ್ರೀ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು, ಶ್ರೀ ಹೊಸಕೆರೆ ಚಿದಂಬರಯ್ಯನವರು, ಶ್ರೀ ಡಿ.ಕೆ. ಭಾರದ್ವಾಜರು, ಶ್ರೀ ದೇಶಮುಖಿ ಶಾಮರಾಯರು, ಶ್ರೀ ಬಿ.ಡಿ. ರಾಘವೇಂದ್ರರಾಯರೇ ಮೊದಲಾದವರು ಇವರನ್ನು ಗೌರವಿಸಿದ್ದಾರೆ.

ಕರಿಗಿರಿಗೆ ಬರುವವರಿಗೆ ನರಸಿಂಹನನ್ನು ಪ್ರಾಣಪ್ರತೀಕದಲ್ಲಿ ಉಪಾಸನೆಯನ್ನು ಮಾಡಿಸಬೇಕೆಂಬ ಉದ್ದೇಶದಿಂದ ಕದರುಮಂಡಲಗಿಯಿಂದ ತಂದ ಪ್ರಾಣದೇವರನ್ನು ಅಲ್ಲೇ ಇದ್ದ ಶ್ರೀಕೃಷ್ಣದಾಸ ಯತಿಗಳ ಮೂಲಕ ಪ್ರಮಾಥಿನಾಮ ಸಂವತ್ಸರ ಫಾಲ್ಗುಣ ಬಹುಳ ಪಂಚಮಿಯಂದು (28-03-1940) ವೈಭವದಿಂದ ಪ್ರತಿಷ್ಠಾಪನೆ ಮಾಡಿ, ಪೂಜಾ ವ್ಯವಸ್ಥೆಯನ್ನು ಮಾಡಿದರು. ಕೆಲವೇ ದಿನಗಳ ನಂತರ ದಾಸರಾಯರು ತಾವು ಬಂದ ಕಾರ್ಯ ಮುಗಿಯಿತೆನ್ನುವಂತೆ ವಿಕ್ರಮ ಸಂವತ್ಸರ ಚೈತ್ರ ಶುದ್ಧ ಶ್ರೀರಾಮನವಮಿ (16-04-1940) ಮಂಗಳವಾರದಂದು ಲಯಚಿಂತನೆ ಮಾಡಿ ಮಧ್ಯಾಹ್ನ 12ಗಂಟೆಗೆ ಇಹಲೋಕ ತ್ಯಜಿಸಿ ಶ್ರೀಲಕ್ಷ್ಮೀನರಸಿಂಹ ಪಾದವನ್ನು ಸೇರಿದರು.

ಇಂದಿಗೂ ಅವರ ಅನುಗ್ರಹದಿಂದ ದಾಸಕೂಟಸಭಾ ಕಾರ್ಯ ನಡೆಯುತ್ತಿದೆ. ಪ್ರಾಣದೇವರ ಪೂಜಾ, ಬಂದ ಅತಿಥಿಗಳಿಗೆ ಅನ್ನದಾನ, ರಥೋತ್ಸವ, ರಾಮನವಮಿ, ನರಸಿಂಹಜಯಂತಿ ಮುಂತಾದ ವಿಶೇಷ ದಿನಗಳಲ್ಲಿ ವಿದ್ವಾಂಸರಿಂದ ಉಪನ್ಯಾಸ, ಹರಿದಾಸ ದಾಸಿಯರಿಂದ ಭಜನಾ ಕಾರ್ಯಕ್ರಮಗಳೂ ನಡೆಯುತ್ತಿವೆ.

ಶ್ರೀ ದಾಸರ ಬಗ್ಗೆ ವಿಶೇಷ ವಿವರಗಳಿಗಾಗಿ-ಶ್ರೀ ಗುರುಗೋವಿಂದವಿಠಲದಾಸರ 'ಪರಮಪ್ರಿಯ ಸುಬ್ಬರಾಯದಾಸರು' ಮತ್ತು ಶ್ರೀ ಜಯಸಿಂಹರವರ 'ತಂದೆಮುದ್ದು ಮೋಹನದರ್ಶನ' ಈ ಪುಸ್ತಕಗಳನ್ನು ನೋಡಬಹುದು.

* * *




ತಂದೆಮುದ್ದು ಮೋಹನವಿಠ್ಠಲದಾಸರು


(ದೇವರಾಯನದುರ್ಗದ ಪರಮಪ್ರಿಯ ಸುಬ್ಬರಾಯದಾಸರು)




ಅಂಕಿತ ಪದದ ಹಾಳೆಯ ಪಡಿಯಚ್ಚು - ಪುಟ 1



ಅಂಕಿತ ಪದದ ಹಾಳೆಯ ಪಡಿಯಚ್ಚು - ಪುಟ 2



ಅಂಕಿತ ಪದದ ಹಾಳೆಯ ಪಡಿಯಚ್ಚು - ಪುಟ 3



ಅಂಕಿತ ಪದದ ಹಾಳೆಯ ಪಡಿಯಚ್ಚು - ಪುಟ 4

ಶ್ರೀ ಶ್ರೀ ವರವಿಠಲದಾಸರಿಂದ ಕೊಡಲ್ಪಟ್ಟ ಮುದ್ದುಮೋಹನವಿಠಲದಾಸರ ಅಂಕಿತಪದ

ಮುದ್ದುಮೋಹನವಿಠ್ಠಲ ಸಲಹೋ ಇವನಾ || ಪ ||
ಸಿರಿ ಮನೋಹರ ನಿನ್ನ ಪ್ರಾರ್ಥಿಸುವೆ ನಿರುತ || ಅ.ಪ. ||
ಶಿರಿ ಬೊಮ್ಮ ಮೊದಲಾದ ಸುರರಿಂದ ಸೇವಿತನೆ |
ಪರಮ ಕರುಣಾಳು ಹರಿ ಕರಿವರದನೇ ||
ನಿರುತದಲಿ ನಿಮ್ಮ ನಾಮಸ್ಮರಣೆಯನಿತ್ತು |
ಕರುಣದಲಿ ರಕ್ಷಿಸೋ ಪರಮ ಪಾವನನೇ || ೧ ||
ಗುರು ಹಿರಿಯರಲಿ ಭಕುತಿ ವಿಷಯದಲಿ ವಿರಕುತೀ |
ಹರಿದಾಸ ಪಂಚಭೇದವನು ಅರುಪೀ ||
ಕರಿವರದನೇ ನಿನ್ನ ನಾಮಾಮೃತಸಾರ ಉಣಿಸೀ |
ದುರಿತಗಳ ಪರಿಹರಿಸೋ ಪರಮ ಪಾವನನೇ || ೨ ||
ನಾನು ನನ್ನದು ಎಂಬ ದುರಭಿಮಾನವನು ಬಿಡಿಸೀ |
ಸಾನುರಾಗದಲಿ ತಾರತಮ್ಯಗಳ ತಿಳಿಸೋ ||
ಮಾನನಿಧಿ ನೀನೆ ಸರ್ವೋತ್ತಮಾನೆಂಬಂಥ |
ಜ್ಞಾನದಾಯಕನಾಗೋ ಶ್ರೀ ವರವಿಠ್ಠಲಾ || ೩ ||

* * *

ಶ್ರೀ ತಂದೆಮುದ್ದುಮೋಹನ ವಿಠಲಾಂಕಿತರಾದ ನರಸೀಪುರದ ಪರಮಪ್ರಿಯ ಸುಬ್ಬರಾಯದಾಸರವರಿಗೆ ದೊಡ್ಡಬಳ್ಳಾಪುರದ ಶ್ರೀ ಮುದ್ದುಮೋಹನವಿಠಲದಾಸವರ್ಯರು ಅನುಗ್ರಹಿಸಿದ ಅಂಕಿತನಾಮಪದವು

ತಂದೆ ಮುದ್ದುಮೋಹನ್ನವಿಠಲ ಸಲಹಬೇಕಿವರ || ಪ ||
ಕುಂದುಗೊರಳನೆ ಪ್ರಿಯನೆ ಅಭಿನಂದಿಪೆನು ಸತತಾ || ಅ.ಪ. ||
ಶೋಕನಾಶನೆ ವಿಗಶೋಕನಯ್ಯನೆ ವೇಗ
ವಾಕು ಮೊದಲಾದ ಸರ್ವೇಂದ್ರಿಯಗಳಲಿ ನಿಂತು
ಲೋಕದೊಳಗೆ ಇವಗೆ ಬೇಕಾದ ವರಗಳನಿತ್ತು
ಲೌಕಿಕಾ ಮಾರ್ಗವನು ಬಿಡಿಸೋ ನಾಕಜನಪಿತನೆ || ೧ ||
ಜ್ಞಾನಭಕುತಿವೈರಾಗ್ಯಗಳೆಲ್ಲವೂ ಇತ್ತು

ಜ್ಞಾನಿಗಳ ಸಹವಾಸದೊಳಗೆ ರತಿಯನೇ ಕೊಟ್ಟು
ಹಾನಿವೃದ್ಧಿಗಳು ಏನೇನು ಬಂದರೂ
ಆನಂದವನೆ ಇತ್ತು ರಕ್ಷಿಸೋ ನರಹರಿಯೇ || ೨ ||
ಕಾಮಕ್ರೋಧ ಮದಮತ್ಸರಗಳನೇ ತರಿದು
ನಾಮೋಚ್ಚಾರಣೆಯೆಂಬ ವಜ್ರಕವಚವನೆ ತೊಡಿಸಿ
ತಾಮರಸಭವ ವಂದ್ಯ ಶಿರಿ ಮುದ್ದುಮೋಹನ ವಿಠಲ
ಕಾಮಿತಾರ್ಥವ ಕೊಡು ಹೃತ್ಪದ್ಮದೊಳು ಪೊಳೆದು || ೩ ||

* * *

ಭಾಗ - ೧

ಶ್ರೀ ತಂದೆಮುದ್ದುಮೋಹನವಿಠಲದಾಸರ ಕೀರ್ತನೆಗಳು

೧

ಉಗಾಭೋಗ

ಮಾಪತೇ ಶ್ರೀ ಪತೇ
ತಂದೆ ಮುದ್ದುಮೋಹನ ವಿಠಲ
ಭೂಪತೇ ಮಾಂ ಪಾಹಿ ರಮಾಪತೇ.

೨

ಶ್ರೀ ಗೋವಿಂದ ಭಜನಾವಳಿ

ಶ್ರೀ ನಾರಾಯಣ ಜಯಗೋವಿಂದ
ಸದ್ಗುರು ಸಿಂಧೋ ಜಯಗೋವಿಂದ
ವೈಕುಂಠಾಲಯ ಜಯಗೋವಿಂದ
ಆಶ್ರಿತಬಂಧೋ ಜಯಗೋವಿಂದ
ಲಕ್ಷ್ಮೀನಾಯಕ ಜಯಗೋವಿಂದ
ದೋಷವಿದೂರ ಜಯಗೋವಿಂದ
ಬ್ರಹ್ಮೇಶಾರ್ಚಿತ ಜಯಗೋವಿಂದ
ಮತ್ಸ್ಯಶರೀರ ಜಯಗೋವಿಂದ
ಕಚ್ಛಪರೂಪೀ ಜಯಗೋವಿಂದ
ಮ್ಲೇಂಛ ಕುಠಾರ ಜಯಗೋವಿಂದ
ಆದಿವರಾಹ ಜಯಗೋವಿಂದ
ಚಿನ್ಮಯದೇಹ ಜಯಗೋವಿಂದ
ಶ್ರೀ ನರಸಿಂಹ ಜಯಗೋವಿಂದ
ವೇದಸುವೇದ್ಯ ಜಯಗೋವಿಂದ
ವಾಮನರೂಪೀ ಜಯಗೋವಿಂದ
ವೆಂಕಟನಾಥ ಜಯಗೋವಿಂದ
ಭಾರ್ಗವರಾಮಾ ಜಯಗೋವಿಂದ
ವೃದ್ಧಿವಿನೋದ ಜಯಗೋವಿಂದ
ರಾವಣಶತ್ರು ಜಯಗೋವಿಂದ

ಸಪ್ತಗಿರೀಶ ಜಯಗೋವಿಂದ
ರಾಕ್ಷಸಶತ್ರು ಜಯಗೋವಿಂದ
ಅದ್ಭುತಚರ್ಯ ಜಯಗೋವಿಂದ
ಗೋಕುಲಚಂದ್ರ ಜಯಗೋವಿಂದ
ನಾರದಗೇಯಾ ಜಯಗೋವಿಂದ
ಸೀತೆಸಹಾಯ ಜಯಗೋವಿಂದ
ಮಾರುತಿ ಸೇವ್ಯ ಜಯಗೋವಿಂದ
ಬುದ್ಧಶರೀರ ಜಯಗೋವಿಂದ
(ಕಲ್ಕ್ಯಾವತಾರ) ಜಯಗೋವಿಂದ
ಕೇಶವವಿಷ್ಣೋ ಕೃಷ್ಣಮುಕುಂದ
ವಾರಿಜನಾಭ ಶ್ರೀಧರ ರೂಪ
ತಾರ್ಕ್ಷ್ಯತುರಂಗ ಶ್ರೀದಶುಭಾಂಗ
ಸಜ್ಜನ ಸಂಗೇ ಚಂಚಲಪಾಂಗ
ದುರ್ಜನಭಂಗಂ ಸಜ್ಜನ ಸಂಗಂ
ದೇಹಿ ಸದಾ ಮೇ ದೇವವರೇಣ್ಯ
ಪಾಪವಿನಾಶಂ ಪುಣ್ಯಸಮೃದ್ಧಿಂ
ಕಾಯವಿರಕ್ತಿ ಕರ್ಮಸುರಕ್ತಿಂ
ಪಾಯುಗೇ ತೇ ಪಾವನದಾಸ್ಯಂ
ನಿರ್ಮಲಭಕ್ತಿಂ ನಿಶ್ಚಲಬುದ್ಧಿಂ
ನಿಸ್ತುಲ ಸೇವಾಂ ದೇಹಿ ಸದಾ ಮೇ
ದೇವ ನಮಸ್ತೇ
ಪ್ರಸ್ತುತಿ ದಿವ್ಯಂ ಸ್ವೀಕುರು ತಂದೆ
ಮುದ್ದೂ ಮೋಹನ ವಿಠಲಂ ವಂದೇ.

೩

ಉಗಾಭೋಗ

ಶ್ರೀ ರಾಮನಾಮಕೆ ಸರಿ ಇಲ್ಲ
ಶ್ರೀ ಕೃಷ್ಣನಾಮಕೆ ಬೆಲೆ ಇಲ್ಲ
ಶ್ರೀ ನರಹರಿನಾಮಕೆ ಮಿಗಿಲಿಲ್ಲ
ಶ್ರೀ ತಂದೆಮುದ್ದುಮೋಹನ ವಿಠಲನ
ದಾಸರ ದಾಸರಿಗೆ ಭಯವಿಲ್ಲ

೪

ಚೂರ್ಣಿಕೆ

ಶ್ರೀಹರಿಯೇ ನಿನ್ನುಪಕೃತಿಯು ಮರೆಯದಂತಿರಿಸೆಮ್ಮ
ಉರಗಾಧಿಶಯನಾ ಕೃಷ್ಣಾ ದ್ವಿಜರಾಜಗಮನಾ
ಕಾಳಿಯ ದಮನಾ ಭುವನತ್ರಯಾಕ್ರಮಣ
ಪದ್ಮಾಲಯಾ ರಮಣ. ೧
ಧನದ ಮಾತಿರಲಿ ಗೋಧನದ ಮಾತಿರಲಿ
ಭೂಧನದ ಮಾತಿರಲಿ ಶೌರೀ
ಧನವೆಲ್ಲವೂ ಕರ್ಮವನು ಬೆನ್ಹಿಡಿದು
ಬಹದೆನುತಾಡುವರೊ ಮುರಾರಿ
ತನುವು ನಿನ್ನಯ ಸೇವೆಯನು ಮಾಡುತಿರಲಿ ಕಂಸಾರಿ
ಮನವು ನಿನ್ನಯ ರೂಪವನು ನೆನೆಯುತಿರಲಿ ದುರಿತಾರಿ
ಈ ಕೃಪೆಯ ಭೂರೀ ದುರ್ಜನವಿದಾರೀ
ಸುಜನೋಪಕಾರೀ ಗಿರಿನಾಥಧಾರೀ
ಪಾಪಹಾರಿ ದಿತಿಜಾರಿ ನಿರ್ವಿಕಾರಿ ಉದಾರಿ. ೨
ನಾಕದೊಳಗಿರಲಿ ಭೂಲೋಕದೊಳಗಿರಲಿ
ಅಧೋಲೋಕದೊಳಗಿರಲಿ ನಾನೂ
ಶ್ರೀಕಾಂತ ನಿನಗೆ ಬೇಕಾವನೆನುತ್ತ
ಸಾಕಬೇಕೆನ್ನ ನೀನೂ ಭಕ್ತಜನಕಾಮಧೇನು
ಹೇಳಬೇಕಾದುದಿನ್ನೇನು. ೩
ಬಿದ್ದಿರುವನ್ಯೆ ರಜೋಗುಣದಿ
ಒದ್ದಾಡುತಿಹೆನೊ ಸಂಕಟದಿ
ಇದ್ದು ಫಲವೇನೊ ಈ ಭವದಿ
ಉದ್ಧರಿಸು ಕೃಪಾಜಲಧಿ. ೪
ಬದ್ಧನಾನಯ್ಯ ಈ ಜಗದಿ
ಶುದ್ಧಬುದ್ಧಿಯನೀಯೋ ಮುದದಿ
ಕೃದ್ಧನಾಗದಿರೆನ್ನ ದುಷ್ಕೃತದಿ
ಎದ್ದು ಬಾರೆನ್ನಡಿಗೆ ದಯದಿ
ಶ್ರೀ ತಂದೆಮುದ್ದುಮೋಹನ್ನವಿಠಲ ಭಾಗ್ಯನಿಧಿ. ೫

ಆತ್ಮನಿವೇದನೆ

೫೫

ಉಗಾಭೋಗ

ಅಪ್ಪಾನನಾಮವನು
ಒಪ್ಪೊತ್ತಾದರು ಭಜಿಸಿ
ಒಪ್ಪೊತ್ತುಂಬೇನಯ್ಯ
ತಂದೆಮುದ್ದುಮೋಹನವಿಠಲಾ

೬

ಉಗಾಭೋಗ

ಎನ್ನೊಡೆಯನೆ ಹನುಮ
ಹನುಮನೇ ಎನ್ನೊಡೆಯ
ಘನ್ನ ಕದರುಮಂಡಲಗಿ ಹನುಮಯ್ಯ
ಎನ್ನ ಒಡೆಯ
ಎನ್ನಯ್ಯ ಶ್ರೀ ತಂದೆ
ಮುದ್ದುಮೋಹನವಿಠಲಭಕ್ತ
ಘನ್ನ ಹನುಮಯ್ಯನೇ ಎನ್ನ ಒಡೆಯಾ.

೭

ಉಗಾಭೋಗ

ನಾನು ನನ್ನದು ಎಂಬುದಾವ ಕಾಲಕು ಬೇಡ
ನೀನು ನಿನ್ನದು ಎಂಬ ದಿವ್ಯಮಂತ್ರವೇ ಇರಲಿ
ಅನುಗಾಲನುಡಿಸಿದನು ಎನ್ನಿಂದ
ಶ್ರೀ ತಂದೆಮುದ್ದುಮೋಹನವಿಠಲಾ.

೮

ಉಗಾಭೋಗ

ಪರಮಪ್ರಿಯನೇ ಗುರುವೆಂದ ಮಾತ್ರದಿಂ
ವರ ತಂದೆಮುದ್ದುಮೋಹನವಿಠಲ ಒಲಿವ.

೯

ಉಗಾಭೋಗ

ಕರಿಗಿರಿ ಯಾತ್ರೆ ಮಾಡದವ ಭವ
ಕರಿಕರಿಯ ಪಡುವ
ತಂದೆಮುದ್ದುಮೋಹನವಿಠಲ

೧೦

ಉಗಾಭೋಗ

ರಾಮಕೃಷ್ಣ ಹರಿ ವಿಠಲ
ರಾಮಕೃಷ್ಣ ನರಹರಿ ವಿಠಲ
ತಂದೆ ಮುದ್ದುಮೋಹನ ವಿಠಲ
ದಾಸೋಽಹಂ ತವ ದಾಸೋಽಹಂ.

೧೧

ಉಗಾಭೋಗ

ಹರಿದಾಸರ ಸಂಗದಿಂದ
ಹರಿ ನಿನ್ನ ಸಂಗವಾಯಿತೋ ಎನಗೆ
ತಂದೆಮುದ್ದುಮೋಹನವಿಠಲಾ.

ಲೋಕನೀತಿ

೧೨

ಉಗಾಭೋಗ

ಕಲಿ ಇಲ್ಲದ ಸ್ಥಳವಿಲ್ಲ
ಕಲಹವಿಲ್ಲದ ಮನೆ ಇಲ್ಲ
ಕಲಿಭಂಜನ ಭೀಮನೊಡೆಯ
ತಂದೆಮುದ್ದುಮೋಹನವಿಠಲ ಬಲ್ಲ.

೧೩

ಉಗಾಭೋಗ

ಗುರುಲೀಲೆಯನ್ನು ಪಾಡುತ್ತ
ಹರಸುರಬ್ರಹ್ಮಾದಿಗಳು

ಲಕುಮೀಪತಿಯ ಕೂಗುವರ್ರೈಯಾ
ತಂದೆಮುದ್ದುಮೋಹನವಿಠಲಾ.

೧೪

ಗುರುವಿನ ಮರೆಯಾದಿರಮ್ಮ. ಪ
ಅಂಕಿತವನೆ ಇತ್ತ ಸಿರಿ ಗುರುವಿನ ನೀನು
ಮನದೊಳು ನೆನೆಯಬೇಕಮ್ಮ ತಂಗಿ. ಅ.ಪ.
ಗುರುವಿನ ಮರೆತರೆ ನಿನಗೆ ಥರಥರ ನರಕ
ಥರಥರ ನರಕವ ಅನುಭವಿಸಬೇಕಮ್ಮ ತಂಗೀ. ೧
ಜ್ಞಾನಾನಂದಾತ್ಮಕನಾದ ಶ್ರೀಹರಿಯನ್ನು ಗುರು
ವಿನ ದ್ವಾರಾ ನೀ ತಿಳಿ ಮಂಗಳಾಂಗಿ. ೨
ಗುರುವೆ ತಂದೆಯು ಬಂಧು ಬಳಗಾವೆಂದು ಅ
ಕ್ಕರೆಯಿಂದ ನೀ ನೆನೆಯಬೇಕಮ್ಮಾ. ೩
ಗುರುವಿನ ಸೇವೆಯ ಮಾಡುತ್ತಾ ಗುರುಗಳ
ಕೃಪೆಗೆ ಪಾತ್ರರಾಗಿ ಬಾಳಬೇಕಮ್ಮಾ. ೪
ಮಂಗಳ ಮಹಿಮ ಶ್ರೀ ತಂದೆಮುದ್ದುಮೋಹನ್ನವಿಠಲ ದಾಸರೆ
ನಿನಗೆ ಸದ್ಗುರು ಎಂದು ತಿಳಿಯಮ್ಮ ತಂಗಿ
ಈ ಮಾತು ಪುಸಿಯಲ್ಲ ಮರೆಯಬೇಡಮ್ಮ ತಂಗೀ. ೫

೧೫

ನಿಜವಿರಬೇಕು ಸಜ್ಜನರಿಗೆ ಒಂದು. ಪ
ಅಜಜನಕಾನೆ ಈ ತ್ರಿಜಗಕೆ ಒಡೆಯನೆಂದು. ಅ.ಪ.
ಉದಯಾಸ್ತಮಾನ ಮಾಡುವ ವ್ಯಾಪಾರವು
ಪದುಮಾಕ್ಷ ಕೃಷ್ಣನ ಸೇವೆಯೆಂದು
ಸುದತಿಯೊಡನೆ ಕೂಡಿ ಮಧುರ ಮಾತುಗಳಾಡಿ
ಮಧುವೈರಿ ಚರಿತೆಯ ಮುದದಿ ಕೇಳುವಂಥ. ೧
ಮಡದಿ ಮಕ್ಕಳು ತನ್ನ ಒಡಹುಟ್ಟಿದವರೆಲ್ಲ
ಒಡೆಯನ ಅಡಿಗೆ ಸೇವಕರು ಎಂದು
ದೃಢದಿ ತಿಳಿದು ಮೃಡನೊಡೆಯನ ಪಾದವ
ಬಿಡದೆ ಭಜಿಸುವಂಥ ದೃಢ ಬುದ್ಧಿ ಎಂಬುವ. ೨

ಮಾತಾಪಿತರು ಸುತ ಭ್ರಾತರಿಷ್ಟಾಬಂಧು
ವ್ರಾತರೆಲ್ಲರು ಹರಿಗೆ ದೂತರೆಂದು
ಮಾತುಳಾಂತಕ ತಂದೆಮುದ್ದುಮೋಹನವಿಠಲ
ಖ್ಯಾತಾನೆಂದು ಪ್ರೀತಿ ಪೊಂದುವುದಕ್ಕೆ. ೩

೧೬

ಪತ್ಯಂತರ್ಗತ ನಾರಸಿಂಹ ಎನುತಾ
ಸಕ್ತಿಯಿಂ ಜಪಿಸಬೇಕಮ್ಮ. ಪ
ಬತ್ತಿಯ ಮಾಳ್ಪಾಗ ಬಾಲರಾಡಿಸುವಾಗ
ಪ್ರತ್ಯಾಹದಲಿ ಗೃಹ ಕೃತ್ಯವಾಚರಿಸುವಾಗ. ಅ.ಪ.
ಪೊಡವಿಯೊಳ್ ನರಜನ್ಮ ಪಡೆದೂ ಕೆಟ್ಟ
ನಡತೆಯವರ ಕೂಟ ಮರೆದೂ
ದೃಢಭಕ್ತಿಯಿಂ ಲಜ್ಜೆ ತೊರೆದೂ
ನುಡಿನುಡಿಗ್ಹರಿ ಎಂದು ಬಾಯ್ದೆರೆದು
ಅಡುಗೆಯ ಮಾಡಿ ಕಾರೊಡೆಯಗರ್ಪಿಸುವಾಗ
ಒಡೆಯಾದಿಗಳಿಗನ್ನ ಬಡಿಸುವಾಗಲು ನಿತ್ಯ. ೧
ಪತಿದೈವವೆಂದು ಭಾವಿಸುವ ಸತಿ
ಗತಿಶಯ ಗತಿ ಸಲ್ಲಿಸುವ
ಪತಿತರ ಪಾವನಗೈವ ಲಕ್ಷ್ಮೀ
ಪತಿಯೆ ಸದ್ಭಕ್ತರ ಕಾವ
ಅತಿಹಿತದಿಂದ ಸಂತತ ಹರಿದಾಸರಿ
ಗತಿ ಸೇವಾರತಿಯಿಂದ ಕೃತಕೃತ್ಯಳಾಗುತ. ೨
ಪದ್ಮಸಂಭವೆ ಪದ್ಮಜಾತ ವಾತ
ಪದ್ಮಜ ವಲ್ಲಭ ಎನುತ
ಕದ್ರುಜ ರುದ್ರಾದಿ ವಿನುತ ತಂದೆ
ಮುದ್ದುಮೋಹನವಿಠಲನೀತಾ
ಅದ್ವಿತೀಯನು ಎಂದು ಬುದ್ಧ್ಯಾದಿಂದ್ರಿಯದಲ್ಲಿ
ನಿದ್ರೆಯೊಳಾದರು ನೀ ಮರೆಯ ಬ್ಯಾಡ. ೩

* * *

ಭಾಗ - ೨

ಪೂಜ್ಯರಾದ ತಂದೆ ಮುದ್ದು ಮೋಹನ ವಿಠಲದಾಸರು ರಚಿಸಿ ಕೊಟ್ಟ ಅಂಕಿತಪದಗಳು

1. ಬಾಗೇಪಲ್ಲಿ ಶೇಷದಾಸರು ಅಂಕಿತ - ಪ್ರಾಣನಾಥ ವಿಠಲ

ಪ್ರಾಣನಾಥ ವಿಠಲನೇ ಸಲಹೊ ಇವನಾ ||ಪ||
ಮಾನಾಭಿಮಾನಕೆ ವಡೆಯನೆಂದೆನಿಸಿ ಶಿರಿ ||ಅ.ಪ||
ಮಾಡಬಾರದ ಕಾರ್ಯಮಾಡಿ ಇದ್ದರು ಇವನ
ರೂಢಿಯೊಳ್ ಕೈಬಿಡದೆ ಸಲಹಬೇಕೊ |
ಕಾಡಬ್ಯಾಡಿವನನ್ನ | ವಡೆಯ ಶಿರಿ ನರಹರಿಯೇ |
ಜೋಡಿಸೀ ಕರಗಳನು ಬೇಡಿಕೊಂಬುವೆ ನಿನಗೆ ||೧||

ಹರಿಗುರುಗಳಲಿ ಸದ್ಭಕ್ತಿ ಹಿರಿದಾಗಿಯಿರಲೆಂದು |
ಹರಸಬೇಕಿವನ ನೀ ಹರುಷದಿಂದ ||
ಶಿರಿಯರಸ ಈ ಕಾರ್ಯಭರದಿಂದ ಮಾಡಲು |
ಕರುಣವಾರಿಧಿ ಎಂಬೊನುಡಿ ಸಿದ್ಧವಾಗುವುದೊ ||೨||
ಹೀಗೆಂದು ಪ್ರಾರ್ಥಿಸುವೆ ಭೋಗಿಶಯನನೆ ನಿನಗೆ |
ಬಾಗಿ ಕರಗಳ ಮುಗಿವೆ ಭಾಗ್ಯಪುರುಷ ||
ಯೋಗಿವಂದಿತ ತಂದೆ ಮುದ್ದು ಮೋಹನ ವಿಠಲ
ಜಾಗುಮಾಡದೆಯಿವನ ಈಗ ಕರುಣಿಸೊ ಸ್ವಾಮಿ ||೩||

2. ಕಮಲನಾಭಸ್ವಾಮಿ ವಿಠಲ (ಬಿ. ಕೆ. ಶ್ರೀನಿವಾಸ ರಾವ್)

ಕಮಲನಾಭಸ್ವಾಮಿ ವಿಠಲನೇ ಮಮಕುಲಸ್ವಾಮಿ ನೀನೊಲಿದು
ಕೃಪೆ ಮಾಡಿ ಸಲಹಬೇಕೂ ಹರಿಯೆ || ಅ ಪ||

ಅಗಣಿತ ಸುಗುಣಾರ್ಣವನೆ ನೀನಿವನ | ಅಗಣಿತ ಪಾಪವನೆ
ಹರಿಸಿ ಕಾಪಾಡೊ ಹರಿಯೇ || ಅ ||

ಮಂಗಳಾಂಗನೆ ಸ್ವಾಮಿ ಸು | ಮಂಗಳವನೆಕೊಟ್ಟು ರಂಗನಾಥನೆ
ನೀನು ಇಹಪರದಿ ಸಲಹ ಬೇಕೊ ಹರಿಯೇ || ಅಂಗಜಪಿತಶ್ರೀ
ಹರಿಯೆ ನಿನ್ನ ಸುಮಂಗಳಮೂರ್ತಿಯನೆ ತೋರಿಸೈ ಸತತ ಹರಿಯೇ ||
ಹರಿವಾಯುಗಳಲಿ ಭಕ್ತಿ ದುರ್ವಿಷಯದಲಿ ವೈರಾಗ್ಯ ಭಾಗ್ಯ
ವನೆ ಇತ್ತು ಸತತ ಕಾಪಾಡ ಬೇಕೂ ಹರಿಯೆ ||೧|| ಪರಮ ಭಕ್ತರ

ಸಂಗ ಸುಖವನೆ ಕೊಟ್ಟು। ನಿರಂತರ ನಿನ್ನ ನಾಮ ಸ್ಮರಣೆಯನೆ
ಇತ್ತು ಸತತ ಕಾಪಾಡೊ ಹರಿಯೇ ।। ಸರಸಿಜೋದ್ಭವನಯ್ಯ
ಪರಮ ಪುರುಷನೆ ಸ್ವಾಮಿ ಪಂಚಭೇದ ಜ್ಞಾನವನೆ ಕೊಟ್ಟು
ವರತಂದೆ ಮುದ್ದು ಮೋಹನ್ನ ವಿಠಲನೆ ನಿನ್ನ ಸೇವೆಯನೆ
ಇತ್ತು ಸತತ ಕಾಪಾಡಬೇಕೋ ಹರಿಯೇ ।।

3. **ಶ್ರೀ ಸುಖಮಯ ವಿಠಲ ಪ್ರಸನ್ನ** (ಶ್ರೀ ಕೆ. ಎಸ್. ರಾಘವೇಂದ್ರರಾವ್)

ಸುಖಮಯವಿಠಲನೆ । ನೀನಿವನ ದುಃಖಗಳ ಪರಿಹರಿಸಿ
ನೀನಿವನ ಪಾಲಿಸಲಿ ಬೇಕೊ ಹರಿಯೇ ।।ಪ।।

ಕರಿರಾಜವರದ ಶ್ರೀ ಹರಿಯೇ । ಹಗಲಿರಳು ಕೈ ಬಿಡದೆ
ಪಾಲಿಸಲಿ ಬೇಕೊ ಹರಿಯೇ ।।ಅ.ಪ।।

ಸಾಕಿಸಲಹುವೊಭಾರ ಶ್ರೀ ಕಾಂತ ನಿನಗೊಪ್ಪಿಸಿದೆನೊ ।
ಜೋಕೆಯಿಂದಲಿ, ನೀನಿವನ ಉದ್ಧರಿಸ ಬೇಕೊ ಹರಿಯೇ ।।
ಮಾಕಮಲಾಸನಾದಿ ವಿನುತ । ಶ್ರೀಕಳತ್ರನೆ ಸಕಲ
ಕಾಲಗಳಲ್ಲಿ ನೀನಿವನ ಸಲಹ ಬೇಕೊ ಹರಿಯೆ ।।೧।।
ಗಾನಲೋಲನೆ ಕೃಷ್ಣಾ ನಿನ್ನ ಪದ । ಧ್ಯಾನವನೆ ಕೊಟ್ಟು
ಮುನ್ನಿವನ ಸಲಹಬೇಕೊ ಹರಿಯೇ ।। ಜ್ಞಾನಗಮ್ಯನೆ
ಸ್ವಾಮಿಯನ್ನಮಾತನು ಲಾಲಿಸಿ । ನೀನಿವನ ಪಾಪಗಳ
ಪರಿಹರಿಸಿ ಕಾಪಾಡೊ ಹರಿಯೇ ।।೨।। ಮಂಗಳಾಂಗನೆ
ಸ್ವಾಮಿ ಜಗದೊಳಗೆ । ಮಂಗಳವನಿತ್ತು ನೀನಿವನ ಕಾಪಾಡೊ ಹರಿಯೆ ।।
ಅಂಗಜಾಪಿತ ಕಮಲಾಕಾಂತ ತ್ರಿಗುಣ ವರ್ಜಿತ ತಂದೆ
ಮುದ್ದು ಮೋಹನ್ನ ವಿಠಲನೇ ನೀನಿವನ ಕಾಪಾಡೊ ಹರಿಯೇ ।।

4. **ಸುಖಮಯ ಶ್ರೀಶವಿಠಲ** (ಕೆ. ಎಸ್. ರಾಘವೇಂದ್ರರಾಯರ ಧರ್ಮಪತ್ನಿ)

ಸುಖಮಯ ಶ್ರೀಶವಿಠಲನೆ ನೀನಿವರಿಗೇ ಸಕಲ । ಸೌಖ್ಯ
ವನೆಕೊಟ್ಟು ಅನುಗಾಲ ಸಲಹಬೇಕೊ ಹರಿಯೇ ।।ಪ।।

ಸುಖೇಶ ರಮೇಶ ನರಹರಿಯೆ ಕರಮುಗಿದು ಬೇಡುವೆನು ।
ಅಖಿಲಸೌಖ್ಯವನೆ ಕೊಟ್ಟು ಕಾಪಾಡು ಹರಿಯೇ ।।ಅ.ಪ।।

ಹರಿಯೆ ಸರ್ವೋತ್ತಮ । ಹರಿಯೆ ಸಕಲಗುಣ ಪೂರ್ಣನು ।
ಹರಿಯೆ ಮಮಸ್ವಾಮಿ ಎಂಬ ದಿವ್ಯ ಜ್ಞಾನವನೆ ಕೊಟ್ಟು
ಕಾಪಾಡು ಹರಿಯೇ ॥ ಹರಿಯೆ ನಿನ್ನ ಶೇವಕರ ಸೇವಕಳು
ನಾನೆಂಬ ಪರಮ ಸುಜ್ಞಾನವನೆ ಕೊಟ್ಟು ಪರಿಪರೀ ಪಾಪಗಳ
ಪರಿಹರಿಸಿ ಕಾಪಾಡೋ ಹರಿಯೇ ॥೧॥ ದೇವದೇವನೆ
ಸ್ವಾಮಿ ನೀನಿವರ ಹೃನ್ಮನದಿ ಸರ್ವತ್ರನೆಲಶಿದ್ದು ಆವ
ಬಗೆಯ ಭಯವು ಬರದಂತೆ ಕಾಪಾಡೊ ಹರಿಯೇ ॥
ಆವಬಗೆಯಿಂದಾದರೂ ನೀನೆ ರಕ್ಷಿಸಬೇಕೊ ಹರಿಯೇ ।
ವಾಸುದೇವನೆ ಸ್ವಾಮಿ ಕಾಪಾಡೊ ಹರಿಯೇ ॥ ೨ ॥
ರಂಗನಾಥನೇ ಕೃಷ್ಣ । ಮಂಗಳವನೇ ಕೊಟ್ಟು ಸತತ
ಕಾಪಾಡೊ ಬೇಕೊ ಹರಿಯೇ ॥ ಅಂಗಜಜನಕ ಶುಭಾಂಗ
ತಂದೆ ಮುದ್ದು ಮೋಹನ್ನ ವಿಠಲನೇ ಹರಿಗುರುಗಳಲಿ
ಭಕ್ತಿಯನೆ ಕೊಟ್ಟು ಕಾಪಾಡೊ ಹರಿಯೇ ॥ ೨ ॥

5. **ಸಿ. ಕೃಷ್ಣರಾವ್ - ರಮಾಕಾಂತವಿಠಲದಾಸ** ಬೆಂಗಳೂರು.

ರಮಾಕಾಂತ ವಿಠಲನೆ ನೀನಿವನ ಸಲಹ ಬೇಕೊ ಹರಿಯೇ ।
ದೀನನಾಥನೆ ಕೈಪಿಡಿದು ಉದ್ಧರಿಸಿ ಕಾಪಾಡೊ ಹರಿಯೇ ॥

ಮನ್ಮನೋರಥದಾತ ಸ್ವಾಮಿ ಶ್ರೀ ಹರಿಯೆ ಕಾಪಾಡ ಬೇಕಿವರ ॥ಅ.ಪ॥
ಹರಿಗುರು ಭಕ್ತಿ ಮೊದಲಾದ ಸದ್ಗುಣವನೇ ಕೊಟ್ಟು ಪರಮ
ದಯದಿಂದ ಇಹಪರದಿ ಕಾಪಾಡೊ ಹರಿಯೇ । ಕರಿವರದ
ಕಾಮಿತಾರ್ಥವನಿತ್ತು ಕಾಪಾಡೊ ಹರಿಯೇ ॥೧॥ ದೋಷ
ದೂರನೆ ಕೃಷ್ಣ ಶೇಷಗಿರಿವಾಸ ಕೃಪಾಸಾಂದ್ರ ನೀ ಸಲಹ
ಬೇಕೊ ಹರಿಯೇ ॥ ಶೇಷ ಪರಿಯಂಕಶಯನ ಶ್ರೀ ಹರಿಯೆ
ಸಂತೋಷವನೆ ಕೊಟ್ಟು ಕಾಪಾಡೊ ಹರಿಯೇ ॥೨॥ ಧರ್ಮ
ಕಾಮಾರ್ಥ ಮೊದಲಾದ ಪುರುಷಾರ್ಥವನೆ ಕೊಟ್ಟು ಸನ್ಮ-
ದದಿ ಕಾಯೋ ಹರಿಯೇ ॥ ಮಮಸ್ವಾಮಿ ಕೈವಲ್ಯದಾಯಕ ತಂದೆ
ಮುದ್ದು ಮೊಹನ ವಿಠಲನೇ ನೀನಿವರ ನಿರ್ಮಲ ಮನದಿ
ನಿಂತು ಧರ್ಮಪ್ರೇರಕನಾಗಿ ಸಲಹೋ ಹರಿಯೇ ॥೩॥

6. ಸಿ. ಕೃಷ್ಣರಾವ್‌ರವರ ಕುಟುಂಬ ಸುಂದರಮ್ಮ - **ಸುರೇಶ ವಿಠಲ ದಾಸಿ**

ಸುರೇಶವಿಠಲನೆ ನೀನಿವರ ಪರಮಸಂತೋಷದಲಿ ಕಾಪಾಡ
ಬೇಕೊ ಹರಿಯೇ । ಪಾರ್ಥಸಾರಥಿ ಕೃಷ್ಣಾ ಪ್ರಾರ್ಥನೆಯನು
ಮಾಳ್ಪೆ ನೀನಿವರ ಕಾಪಾಡಬೇಕೊ ಹರಿಯೇ ॥ಪ॥

ಶಮದಮಾದಿ ಸದ್ಗುಣವನೇ ಕೊಟ್ಟು । ಮಮಕುಲಸ್ವಾಮಿ
ನೀನಿವರ ದಯದಿಸಂತೈಸ ಬೇಕೆಂದು ಬೇಡಿಕೊಂಬೆನೊ
ಹರಿಯೆ । ಕಮಲನಾಭನೆ ಸ್ವಾಮಿ ನೀನಿವರಿಗೆ ಭಕ್ತಿ
ಜ್ಞಾನವನೆ ಕೊಟ್ಟು ಕಾಪಾಡ ಬೇಕು ಹರಿಯೆ ॥೧॥
ಜ್ಞಾನದಾಯಕ ನಿನ ಕೃಪೆಗೆ ಪಾತ್ರರಾದವರು ಇವರೊಳು
ನಿನ್ನ ಕರುಣಸಂಪೂರ್ಣವಿರಲೆಂದು ಬೇಡುವೆನೊ ಹರಿಯೇ ॥
ಜ್ಞಾನಗಮ್ಯನೆ ಕೃಷ್ಣ ನೀನಿವರಿಗೆ ಬೇಕಾದವರಗಳ
ನಿನ್ನ । ಆಧೀನವೆಂತೆಂಬ ದಿವ್ಯ ಮತಿಯನೆ ಕೊಟ್ಟು
ಸತತ ಕಾಪಾಡ ಬೇಕೊ ಹರಿಯೇ ॥ ಶ್ರಿನಿಧೆ ಕೃಷ್ಣ
ತಂದೆ ಮುದ್ದು ಮೋಹನ ವಿಠಲನೆ ನೀನಿವರ ಸನ್ಮೋ
ದವನೆಪಡಿಸಿ ಸತತ ಕಾಪಾಡೊ ಬೇಕೊ ಹರಿಯೇ ॥೩॥

7. ಸಿ. ಕೃಷ್ಣರಾವ್ ಮತ್ತು ಸುಂದರಮ್ಮ ಅವರ ಮಗ
"ವಿಠಲ"ರ ಅಂಕಿತ - ಕಾಂತೇಶ ಪ್ರಿಯವಿಠಲ

ಶ್ರೀ **ಕಾಂತೇಶಪ್ರಿಯ**ವಿಠಲನೆ ನಿನ್ನೆದುರಿಗೆ ಕರಮುಗಿದು
ನಿಂತಿರುವ ಚಿನ್ನನಿಗೆ ಶ್ರೀ ಕಾಂತೇಶನ ಸನ್ನಿಧಿಯಲ್ಲಿ ಹರಿ
ಪ್ರೇರಣೆಯಿಂದ ಇವನಿಗೆ ಅಂಕಿತವ ಕೊಟ್ಟೆ ನೀನಿವನ ಸಲಹ
ಬೇಕೊ ಹರಿಯೇ ॥ಪ॥ ಹನುಮಭೀಮ ಮಧ್ವ ಮೂರವ
ತಾರದಿಂದ ಆರಾಧನೆಯ ಕೈಗೊಂಡ ರಾಮಕೃಷ್ಣ ವೇದ
ವ್ಯಾಸರೂಪನೆ ನೀನಿವನ ಸಲಹ ಬೇಕೊ ಹರಿಯೇ ॥ಅ.ಪ॥
ಕರುಣಾಕರ ಶ್ರೀ ಹರಿಯೆ ತರಳನಿಗೆ ದಿವ್ಯ ಆಯುರಾ
ರೋಗ್ಯವನೆ ಕೊಟ್ಟು ನಿರಂತರದಿ ಕಾಪಾಡೊ ಹರಿಯೆ ॥
ಪರಮಪುರುಷ ಸರ್ವೋತ್ತಮ ಶ್ರೀಹರಿಯೇ ಭಕ್ತಿ
ಜ್ಞಾನ ಮೊದಲಾದ ಸಾಧುಗುಣವನೆ ಕೊಟ್ಟು ಕಾಪಾಡೊ
ಹರಿಯೇ ॥೧॥ ಶ್ರೀಶನ ಕೃಪೆಯಿಂದ ಜನಿಸಿದ ಕೂಸಿಗೆ

ಕ್ಲೇಶಗಳು ಬರದಂತೆ ಕಾಪಾಡೊ ಹರಿಯೆ । ಈಶನೆ
ಸರ್ವಸ್ವಾತಂತ್ರವ್ಯಾಪ್ತನು ನೀನಿರಲು ಭಯವೆಲ್ಲಿಹ
ದೊ ಹರಿಯೇ ।।೨।।
ವಿಜಯರಾಯರ ಪ್ರೀಯ ಮಮಗುರುಗಳಂತ-
ರ್ಯಾಮಿ ನೀನಿವನ ಪಾಪರಾಶಿಗಳ ಪರಿಹರಿಸಿ
ನಿತ್ಯದಲಿ ಕಾಪಾಡೊ ಹರಿಯೇ । ವಿಜಯಸಾರಥಿ
ಕೃಷ್ಣ ತಂದೆ ಮುದ್ದು ಮೋಹನ್ನ ವಿಠಲನೆ ನೀನಿವನ
ಸನ್ಮೋದವನೆ ಪಡಿಸಿ ಸತತ ಕಾಪಾಡೊ ಹರಿಯೋ ।।೩।।

8. ಸಿ. ಕೃಷ್ಣರಾವ್ ಮತ್ತು ಸುಂದರಮ್ಮ ಅವರ ಮಗ ಅಂಕಿತ, **ಜಯಮಾರುತೀಶ ವಿಠಲ**

ಜಯಮಾರುತೀಶವಿಠಲ ನೀನಿವರ ಸಕಲಭಯವ
ಪರಿಹರಿಸಿ ನಿತ್ಯದಲಿ ಕಾಪಾಡೋ ಹರಿಯೇ ।।ಪ।।

ಹಯವದನನೇ ನಿನ್ನ ಚರಣ ಸೇವೆಯನು ದಯದಿ
ಕೊಟ್ಟು ಕಾಪಾಡೋ ಹರಿಯೇ ।।ಅ.ಪ.।।

ತರಳನಿವನೆಂದುಪೇಕ್ಷೆಯನು ಮಾಡದಲೆ ಪರಿಪರಿಯ
ವರವನೆ ಕೊಟ್ಟು ಇಹಪರದಿಸಲಹ ಬೇಕೊ ಹರಿಯೆ
ಪರಮ ಸಂಭ್ರಮದಿಂದ ನೀನಿವನ ಕರಕಮಲವನೆ
ಪಿಡಿದು ನಿನ್ನ ವರಹಸ್ತವನು ಮಸ್ತಕದೊಳಿರಿಸಿ
ಕಾಪಾಡೊ ಹರಿಯೆ ।।೧।।

ಪದ್ಮಾಕ್ಷ ಪದ್ಮಸಂಭವಾದಿ ವಿನುತ ನಿನ್ನ ಪದ
ಪದ್ಮಾರಾಧನೆಯ ಕೊಡಿಸಿ ಕಾಪಾಡೊ ಹರಿಯೇ ।।
ಪದ್ಮನಾಭನೆಸ್ವಾಮಿ ನಿನ್ನ ಪದಪದ್ಮ ಪರಾಗದಲಿ
ಮಜ್ಜನಗೈಸಿ ಕಾಪಾಡೊ ಹರಿಯೆ ।।೨।।
ಹರಿ-ಗುರುಗಳಲಿ ಭಕ್ತಿವಿಜ್ಞಾನ ಮೊದಲಾದ ಸದ್ಗುಣ
ವನ್ನೇ ಕೊಟ್ಟು ಕಾಪಾಡೊ ಹರಿಯೇ ।। ನರ-ಹರಿಯೆ
ಶ್ರೀ ಕೃಷ್ಣ ಸಕಲ ಪಾಪವ ಪರಿಹರಿಸಿ । ತಂದೆಮುದ್ದು
ಮೋಹನವಿಠಲನೆ ಇನ್ನಿವನ ಸಲಹುವೋ ಭಾರ
ನಿನಗೊಪ್ಪಿಸಿದೆನೊ ಹರಿಯೇ ।।೩।।

9. ಸಿ. ವಿ. ಬಾಬುರಾವ್, ವಿಜಯವಾಡ ಅಂಕಿತನಾಮ ಸೀತಾರಾಮವಿಠಲ

ಸೀತಾರಾಮ ವಿಠಲನೆ । ನೀನಿವನ । ಪಾತಕಗಳೆಲ್ಲವನು
ಪರಿಹರಿಸಿ ಕಾಪಾಡೊ । ಹರಿಯೇ ॥ಪ॥ ಮಾತುಳಾಂತಕ
ಕೃಷ್ಣ । ಮಾತು ಮಾತಿಗೆ ನಿನ್ನ ನಾಮಸ್ಮರಣೆಯನೆ ಕೊಟ್ಟು
ಕಾಪಾಡೊ ಹರಿಯೇ ॥ಅ.ಪ॥ ಮಂದರೋದ್ಧರ ಕೃಷ್ಣ
ಮಂದಮತಿಯನೆ ಬಿಡಿಸಿ ಕಂದರ್ಪಜನಕ ಕಾಪಾ
ಡೊ ಹರಿಯೇ ॥ ಸುಂದರಾಂಗನೆ ಸ್ವಾಮಿ । ಕರಪಿಡಿದು
ನೀನಿವನ । ಸಂದೇಹವನೆ ಪರಿಹರಿಸಿ ಕಾಪಾಡೊ ಹರಿಯೇ ॥೧॥
ತಂದೆ-ತಾಯಿಗಳು ತಮ್ಮ ಕಂದನನು ಸಲಹುವಂದದಿ
ನೀನಿವನ ಮುದದಿ ಸಲಹಬೇಕೋ ಹರಿಯೇ ॥ ಇಂದಿ
ರಾಪತಿ ವಾರಿಜೋದ್ಭವನಯ್ಯ । ತಂದೆ ನೀನಿವನ ಪರಿ
ಪಾಲಿಸಲಿ ಬೇಕೊ ಹರಿಯೇ ॥೨॥ ಹರಿಗುರುಗಳಲಿ ಭಕ್ತಿ
ವಿಷಯದಲಿ ವೈರಾಗ್ಯವನೆ ಕೊಟ್ಟು । ಇಹಪರದಿ ನೀನಿವನ
ಸಲಹಬೇಕೊ ಹರಿಯೇ। ಪರಮಪುರುಷನೆ ತಂದೆ
ಮುದ್ದು ಮೋಹನ ವಿಠಲನೇ । ಪರದೈವವೆಂಬ ಸನ್ಮತಿ
ಯನೆ ಕೊಟ್ಟು ಕಾಪಾಡೋ ಹರಿಯೇ ॥೩॥

10. ಸಿ. ವಿ. ಬಾಬು ರಾವ್‌ರವರ ಪತ್ನಿ ಸುಂದರಾ ಬಾಯಿ, ಅಂಕಿತ ನಾಮ **ಮಂಗಳಾತ್ಮಕ ರಾಮ ವಿಠಲ**

ಮಂಗಳಾತ್ಮಕರಾಮ ವಿಠ್ಠಲನೇ । ನೀನಿವರ ಪರಮಾದರದಿ
ಕಾಪಾಡಬೇಕೋ ಹರಿಯೇ ॥ಪ॥ ಮೋದದಾಮನೆ ಶ್ರೀ
ಹರಿ ಕೃಪೆಮಾಡಿ ನೀನಿವರ ಸಲಹಬೇಕೋ ಹರಿಯೇ ॥ಅ.ಪ॥
ಮಂಗಳಾಂಗನೆ ಸ್ವಾಮಿ । ಕಂಗಳಿಗೆ ನಿನ್ನ ರೂಪವ ತೋರಿ
ಕಾಪಾಡಬೇಕೋ ಹರಿಯೇ ॥ ಅಂಗಜಾಪಿತ ಪರಮಪುರು-
ಷನೆ ಕೃಷ್ಣ ರಂಗನಾಥನೆ ನಿನ್ನ ಚರಣವ ತೋರಿ ಕಾಪಾಡ
ಬೇಕೋ ಹರಿಯೇ ॥೧॥ ಹರಿಗುರಿಗಳಲಿ ಭಕ್ತಿ ಗರುಡಗಮನನೆ
ಕೊಟ್ಟು ಪರಿಪಾಲಿಸಲಿಬೇಕೋ ಹರಿಯೇ ॥ ನರನಸಾರಥಿ
ಕೃಷ್ಣ ಪರಿಪರಿಯ ಪಾಪಗಳ ಪರಿಹರಿಸಿ ಕಾಪಾಡೊ ಹರಿಯೇ ।
ನೀಪೊರೆಯೊ ದೊರೆಯೇ ॥೨॥ ಜ್ಞಾನ ಗಮ್ಯನೆ ದೇವ ನೀನೊಲಿದು

ಕೃಪೆ ಮಾಡಿ ದಿವ್ಯಜ್ಞಾನವನೆ ಕೊಟ್ಟು ನೀನಿವರ ಸಲಹಬೇಕೊ
ಹರಿಯೇ ದೀನಜನ ಮಂದಾರ ತಂದೆಮುದುಮೋಹನ
ವಿಠ್ಠಲನೇ ನೀನಿವರ ಹೃದಯಕಮಲದಲಿ ನಿನ್ನ ರೂಪ
ವತೋರಿ ಕಾಪಾಡಬೇಕೋ ಹರಿಯೇ ॥೩॥

11. ತುಳಸಿ ಬಾಯಿ ಅಂಕಿತನಾಮ **ರಮಾಧವ ರಾಮವಿಠಲ**

ರಮಾಧವರಾಮ ವಿಠ್ಠಲನೆ ನೀನಿವಳ ಕರಪಿಡಿದು ಉದ್ಧರಿಸ
ಬೇಕೋ । ಕಾಮಜನಕಸ್ವಾಮಿ ಕಾಮಿತಾರ್ಥವನಿತ್ತು ಕಾಪಾಡೊ
ಬೇಕೋ ಹರಿಯೆ । ಕರಿರಾಜವರದನೆ ತಂದೆ ಮುದ್ದು ಮೋ
ಹನ್ನ ವಿಠ್ಠಲನೆ ನೀನಿವಳ ದುರಿತರಾಶಿಯ ತರಿದು
ಕಾಪಾಡ ಬೇಕೊ ಹರಿಯೇ ।
(ವೇಣು ಗಾನ ವಿಠಲಾತ್ಮಕ ರಮಾಧವರಾಮ ವಿಠ್ಠಲ ತವದಾಸೋಹಂ.)

12. ಸೀತಾಬಾಯಿ, ಹರಿದಾಸರ ಪತ್ನಿ ಅಂಕಿತನಾಮ **ಪರಮಾನಂದ ವಿಠಲ**

ಪರಮಾನಂದ ವಿಠಲನೆ ನೀನಿವಳ ಹೃದಯ ಕಮಲದಿನೆಲಸಿ
ಕ್ಷಿಪ್ರದಲಿ ಸಕಲ ತಾಪತ್ರಯಗಳನೆ ಪರಿಹರಿಸಿ ಕಾಪಾಡ
ಬೇಕೊ ಹರಿಯೆ ॥ಪ॥ ಕರಿಗಿರಿವಾಸ ಶ್ರೀ ನರಸಿಂಹ
ಸರ್ವಪಾಪಗಳ ನಿರ್ಮೂಲಗೈಸಿ ಸುಖವಿತ್ತು ಕಾಪಾ
ಡೊ ಹರಿಯೆ ॥ಅ॥ ಹರಿಗುರುಗಳಲಿ ಭಕ್ತಿ
ಹರಿಧ್ಯಾನಪತಿಸೇವೆ ಮೊದಲಾದ ಸದ್ಗುಣವನೆ ಕೊಟ್ಟು
ನೀನಿವರ ಕರಪಿಡಿದು ಉದ್ಧಾರವನೆ ಮಾಡಿ ಸಲಹ
ಬೇಕೊ ಹರಿಯೆ ॥ ಪರಮಪಾವನಮೂರ್ತಿ ಕರಣ
ಶುದ್ಧಿಯಗೈಸಿ ನಿನ್ನ ನಾಮಸ್ಮರಣೆಯನೆ ಕೊಟ್ಟು
ಕಾಪಾಡೊ ಹರಿಯೆ ॥೧॥ ಪರಮಪುರುಷನೆ ಕೃಷ್ಣ
ನಿನ್ನ ಭಕ್ತಳ ಮೇಲೆ ಕರುಣಾಮೃತದ ಮಳೆಗರೆದು
ನಿತ್ಯದಲಿ ಪೋಷಿಸಲಿಬೇಕೊ ಹರಿಯೇ ॥ ವರಮಧ್ವ
ತತ್ವಸಾರಮತವನೆ ತಿಳಿಸಿ ಕಾಪಾಡ ಬೇಕೊ ಹರಿಯೆ ॥೨॥
ಮಂಗಳಾಂಗನೆ ಸ್ವಾಮಿ ಮದನಜನಕನೆ ದೇವ
ಆಯುರಾರೋಗ್ಯ ಮೊದಲಾದ ಮಂಗಳವನೆ ಕೊಟ್ಟು
ಅಂತರಂಗದಲಿ ನೆಲಸಿ ಕಾಪಾಡೊ ಹರಿಯೇ ।
ರಂಗನಾಥನೆಸ್ವಾಮಿ ನಿನ್ನ ಭೃತ್ಯಳ ಸೇವೆಯನೆ ಕೈ ಕೊಂಡು

ತಂದೆ ಮುದ್ದು ಮೋಹನ್ನ ವಿಠಲನೆ ಸಕಲ ಆದಿವ್ಯಾ
ಧಿಗಳ ಪರಿಹರಿಸಿ ಸಲಹ ಬೇಕೊ ಹರಿಯೆ ||೩||

13. ಹರಿದಾಸರು, ಅಂಕಿತನಾಮ ನಿತ್ಯಾನಂದ ವಿಠಲ

ನಿತ್ಯಾನಂದ ವಿಠಲನೇ ನೀನಿವರ ನಿತ್ಯದಲಿ ಸಲಹಬೇಕೊ
ಹರಿಯೇ ||ಪ|| ನಿತ್ಯಾನಿತ್ಯವಿವೇಕ ಮತಿಯನೆ ಇತ್ತು
ಕೃಪೆಮಾಡಿ ಸಲಹಬೇಕೊ ಹರಿಯೇ ||ಅ|| ಶ್ರೀನಿವಾಸನೆ
ನಿನ್ನ ಸದಾನುರಾಗದಲಿ ಭಜಿಪ ಭಾಗ್ಯವನೆ ಕೊಟ್ಟು
ಕಾಪಾಡ ಬೇಕೊ ಹರಿಯೇ || ಶ್ರೀನಿಧೇ ನಿನ್ನವರಸಹ
ವಾಸದಲಿ ರತಿಯನೆ ಕೊಟ್ಟು ಜ್ಞಾನಗಮ್ಯನೆ ಸದಾನುರಾಗ
ದಲಿ ಕಾಪಾಡಬೇಕೊ ಹರಿಯೆ ||೧|| ನಾನು ನನ್ನದು
ಎಂಬ ಮಾಯಾಪಾಶವ ಹರಿಸಿ । ನೀನು ನಿನ್ನದುಯೆಂಬ
ದಿವ್ಯಮತಿಯನೆ ಕೊಟ್ಟು ಕಾಪಾಡೊ ಹರಿಯೆ || ಮಾನ
ನಿಧಿ ಶ್ರೀಕೃಷ್ಣ ಸಕಲ ಕ್ಲೇಶವಕಳೆದು ಚೆನ್ನಾಗಿ ಸಲಹಬೇಕೊ
ಹರಿಯೇ ||೨|| ಗಾನಲೋಲನೆ ಕೃಷ್ಣ ದಾನವಾಂತಕ
ಸ್ವಾಮಿ ನೀನೊಲಿದು ಕಾಪಾಡಬೇಕೊ ಹರಿಯೆ ||
ದೀನವತ್ಸಲ ತಂದೆ ಮುದ್ದು ಮೋಹನ ವಿಠ್ಠಲ ಧ್ಯಾನಾದಿ
ಗಳನೆ ಕೊಟ್ಟು ನಿನ್ನದಾಸನ ಸಲಹೊ ಹರಿಯೆ ||೩||

14. ಬಿ. ಹೆಚ್. ಕೃಷ್ಣರಾಯರ ಪತ್ನಿ ಸಣ್ಣಮ್ಮ (ಹರಿದಾಸರ ಸಂಬಂಧಿ) ಅಂಕಿತ - ಕೃಪಾಮೂರ್ತಿ ವಿಠ್ಠಲ

ಕೃಪಾಮೂರ್ತಿವಿಠಲನೆ ನೀನಿವರ ಕೃಪಾದೃಷ್ಟಿ
ಯಿಂದೀಕ್ಷಿಸುತ ಕಾಪಾಡೊ ಹರಿಯೇ ||ಪ||
ಅಪಾರ ಜನ್ಮದ ದುಷ್ಕರ್ಮಗಳ ತರಿದು ನೀನಿವರ
ಕಾಪಾಡೊ ಹರಿಯೇ ||ಅ.ಪ||
ಖಗರಾಜ ವಾಹನನೆ ನಿಗಮಗೋಚರ ಕೃಷ್ಣ
ಬಗೆಬಗೆಯ ನಿನ್ನ ನಾಮಗಳನುಡಿಸಿ ಕಾಪಾಡೊ
ಹರಿಯೇ || ಅಗಣಿತಾ ಗುಣನಿಲಯ ಸುಗುಣ
ಮಾರ್ಗವ ತೋರಿ ಜಗದೊಳಗೆ ಕಾಪಾಡೊ ಹರಿಯೆ ||೧||
ನಿನ್ನವರಸಂಘದಲಿ ಅನವರತನೆಲಸಿ ಇನ್ನಿವರ

ಜ್ಞಾನಮಾರ್ಗದಿ ನಡೆಸಿ ಕಾಪಾಡೊ ಹರಿಯೆ ||
ಘನ್ನ ಮಹಿಮನೆ ದೇವ ಸಕಲ ಮಂಗಳವಿತ್ತು
ನಿನ್ನ ಪದಭಕ್ತಿಯನೆ ಕೊಟ್ಟು ಕಾಪಾಡೊ ಹರಿಯೆ ||೨||
ಮುಕ್ತಿದಾಯಕ ದೇವ ಮುಕ್ತಿ ಮಾರ್ಗವ ತೋರಿ
ಮುಕ್ತರೊಡನಾಡುವಂದದಲಿ ಕಾಪಾಡೊ ಹರಿಯೇ ||
ಭಕ್ತಿದಾಯಕ ತಂದೆ ಮುದ್ದು ಮೋಹನ್ನ ವಿಠಲನೆ
ಗುರುಭಕ್ತಿ ಪತಿಸೇವೆ ಮಾಳ್ಪಂತೆ ಕೃಪೆ ಮಾಡಿ
ನಿನ್ನ ರೂಪವನೆ ತೋರಿ ಕಾಪಾಡೊ ಹರಿಯೇ ||೩||

15. ಫಣಿರಾಜರತ್ನ (ಹರಿದಾಸರ ಮಗಳು) ಅಂಕಿತನಾಮ **ಫಣಿರಾಜಶಯನವಿಠಲ**

ಫಣಿರಾಜಶಯನವಿಠಲನೆ ನೀನಿವರ
ಕ್ಷಣಬಿಡದೆ ನಿತ್ಯದಲಿ ಕಾಪಾಡ ಬೇಕೊ ಹರಿಯೆ ||ಪ||
ನರಹರಿಯೆ ಶ್ರೀ ಕೃಷ್ಣ ನೀನಿವರ ಮೇಲೆ
ನಿನ್ನ ಕರುಣಾಮೃತದ ಮಳೆಗರೆದು ಕಾಪಾಡೊ ಹರಿಯೆ ||ಅ.ಪ ||
ನಿನ್ನ ಸೇವಕಳಿವಳು ನಿನ್ನ ಸಂಕಲ್ಪಜನ್ಯಳು
ಇನ್ನಿವಳ ಕರಪಿಡಿದು ಕಾಪಾಡಬೇಕು ಹರಿಯೆ ||
ನಿನ್ನ ಪ್ರೀತಿಪಾತ್ರಳು ಇವಳು ನಿನ್ನ ಸೇವಕ
ರೊಳಿಟ್ಟು ಕಾಪಾಡೊ ಹರಿಯೆ ||೧||
ಪದ್ಮಸಂಭವಜನಕಪದ್ಮನೇತ್ರನೆ ಸ್ವಾಮಿ
ಹೃತ್ ಪದ್ಮದಲಿ ನೆಲಸಿ ಕಾಪಾಡಬೇಕೊ ಹರಿಯೇ ||
ಪದ್ಮನಾಭನೆ ಶ್ರೀಶ ನಿನ್ನ ಕರಪದ್ಮದಲಿ
ದಿವ್ಯ ದೃಷ್ಠಿಯನೆ ಕೊಟ್ಟು ಕಾಪಾಡೊ ಹರಿಯೇ ||೨||
ಪರಮ ಪೂಜ್ಯನೇ ನೀನಿವಳ ಪಾಪಗಳ ಕಳೆದು
ಹರಿಗುರುಭಕ್ತಿ ಜ್ಞಾನಾದಿಗಳ ಕೊಟ್ಟು ಕಾಪಾಡಬೇಕೊ ಹರಿಯೆ ||
ಪರಮ ಪುರುಷನೆ ತಂದೆಮುದ್ದು
ಮೋಹನ್ನವಿಠಲನಿನ್ನ ಪಾದ ಸೇವಕಳಿಗಾಯು
ರಾರೋಗ್ಯ ಭಾಗ್ಯವನೆ ಕೊಟ್ಟು ಕಾಪಾಡೊ ಹರಿಯೆ ||೩||

16. ಅಂಕಿತನಾಮ **ಹೃಷೀಕೇಶ ವಿಠಲ**

ಹೃಷೀಕೇಶ ವಿಠಲನೆ ನೀನಿವನ ಹರುಷದಿಂದಲಿ
ಕಾಪಾಡೊ ಹರಿಯೆ || ಅಪಾರ ಜನ್ಮದ ಪಾಪರಾಶಿಗಳ ಪರಿ
ಹರಿಸಿ ಕಾಪಾಡೊ ಹರಿಯೆ ||
ಕಡುಕರುಣಿ ನೀನೆಂದು ಬಂದು ನಿನ್ನಡಿದಾವರೆಯ
ಮೊರೆ ಹೊಕ್ಕ ಇವನ ದುಡುಕು ಬುದ್ಧಿಯ ಬಿಡಿಸಿ ಕಾಪಾಡೊ ಹರಿಯೆ ||
ಪೊಡವಿಪತಿ ನೀನಿವನ ಅಂತರಂಗದಿ ನೆಲಸಿ ಧೃಢ ಭಕ್ತಿ
ವೈರಾಗ್ಯಾದಿಗಳನೆ ಕರುಣಿ[ಸಿ] ಕೊಟ್ಟು ಕಾಪಾಡೊ ಹರಿಯೆ ||
ಜ್ಞಾನ ಗಮ್ಯನೆ ಕೇಳೊ ನೀನರಿಯದಪರಾಧವೊಂದೂ
ಮಾಡಿದವನಲ್ಲ ನೀನಿವನ ಪಾಪರಾಶಿಗಳೆಲ್ಲವನು ಪರಿಹರಿಸಿ
ಕಾಪಾಡೊ ಹರಿಯೆ ||
ದೀನರಕ್ಷಕ ತಿರುಪತಿಯವಾಸನೆ ನಿನ್ನ ದಾಸನಿವನೆಂದು
ತಿಳಿದು ಪೋಷಿಸಲಿಬೇಕೊ ಹರಿಯೆ ||
ಅಚ್ಯುತಾನಂತ ಗೋವಿಂದ ನೀನಿವನ ಗರ್ವವನು
ಪರಿಹರಿಸಿ ಕಾಪಾಡ ಬೇಕೊ ಹರಿಯೆ ||
ಮತ್ಸ್ಯಾದ್ಯನಂತಾವತಾರ ತಂದೆಮುದ್ದುಮೋಹನ್ನ
ವಿಠಲನೆ ಸ್ವೋಚಿತ ಕರ್ಮವನೆ ಮಾಡಿಸಿ ಸಲಹೊ ಹರಿಯೆ ||

17. **ಸಿ. ಹಯವದನರಾವ್,** ಅಂಕಿತನಾಮ **ಸೀತಾಪತಿರಾಮವಿಠಲ**

ಸೀತಾಪತಿರಾಮವಿಠ್ಠಲನೇ ನೀನಿವರ
ಮಾತುಮಾತಿಗೆ ನಿನ್ನ ನಾಮಸ್ಮರಣೆಯನು ಕೊಟ್ಟು ಕಾಪಾಡೊ ಹರಿಯೇ||ಪ.||
ಜನ್ಮಜನ್ಮಾಂತರದಿ ಮಾಡಿದ ಪಾಪರಾಶಿಗಳ ಪರಿಹರಿಸಿ
ಸತತ ಕಾಪಾಡೊ ಹರಿಯೇ||ಅ.ಪ.||
ಜ್ಞಾನಗಮ್ಯನೆ ನೀನು ಭಕ್ತಿಜ್ಞಾನಾದಿ ಸದ್ಗುಣ
ವನೇ ಕೊಟ್ಟು ಕಾಪಾಡೊ ಹರಿಯೇ||
ದೀನವತ್ಸಲನೆ ಪರಿಪರಿಯ ಸುಖವಿತ್ತು
ಆನತರ ಪೊರೆವಂತೆ ಸಲಹಬೇಕೋ ಹರಿಯೇ||೧||
ಖಗರಾಜಗಮನ ಮನ್ಮನೋರಥದಾತ
ಹಗಲು-ಇರುಳು ನಿನ್ನ ನಾಮಸ್ಮರಣೆಯನು ಕೊಟ್ಟು ಕಾಪಾಡೊ ಹರಿಯೇ||
ಅಗಣಿತ ಮಹಿಮನೆ ಸರ್ವರಂತರ್ಯಾಮಿ

ಬಗೆ ಬಗೆಯುಮಹಿಮೆಯನೆ ತೋರಿ ಕಾಪಾಡೊ ಹರಿಯೇ ||೨||
ಆದಿಮೂರುತಿ ನೀನು ಪರಮಪುರುಷನೇ ಸ್ವಾಮಿ
ಕ್ರೋಧಾದಿಗಳ ಪರಿಹರಿಸಿ ಮೋದದಲಿ ಕಾಪಾಡೊ ಹರಿಯೇ ||
ಮೋದದಾಯಕ ಶ್ರೀ ತಂದೆಮುದ್ದುಮೋಹನವಿಠಲನೇ
ನೀನಿವರ ಸೇವೆಯನು ಕೈಕೊಂಡು ಕೃಪೆ ಮಾಡಿ ಸಲಹ ಬೇಕೋ ಹರಿಯೇ ||೩||

18. ಎಚ್. ಆರ್. ಶ್ಯಾಮರಾವ್, ಅಂಕಿತನಾಮ, ವಾಸುದೇವಮೂರ್ತಿವಿಠಲ

ವಾಸುದೇವಮೂರ್ತಿವಿಠಲನೆ ನೀನಿವರಿಗೇ ಸಾರತತ್ವವ
ತಿಳಿಸಿ ಕಾಪಾಡಬೇಕೋ ಹರಿಯೇ ||ಪ||
ವಾಸವಾನುಜ ವಾಸುಕೀಶಯನ ನೀನಿವರ ಸೇವೆಯನೆ
ಸ್ವೀಕರಿಸಿ ಕಾಪಾಡೊ ಹರಿಯೇ ||ಅ.ಪ||
ಪರಮ ವೈಷ್ಣವರ ಸಂಗವನೆ ಕೊಟ್ಟು । ಪರಮಪುರುಷನೆ
ಸ್ವಾಮಿ ಸಕಲ ಕಷ್ಟಗಳ । ಪರಿಹರಿಸಿ ಕಾಪಾಡೊ ಹರಿಯೇ ||
ಕರಿರಾಜವರದ ಕಮನೀಯ ಗಾತ್ರನೆ ಅನುದಿನದಿ
ಹರುಷವನೆ ಕೊಟ್ಟು ನಿತ್ಯದಲಿ ಕಾಪಾಡೋ ಹರಿಯೇ ||೧||
ಸಕಲ ಕಾಲಗಳಲ್ಲಿ ಸಕಲದೇಶಗಳಲ್ಲಿ ಸರ್ವವ್ಯಾಪಕನೆಂಬ
ಶ್ರೀಹರಿಯ ಜ್ಞಾನವನೆ ಇಟ್ಟು ಕಾಪಾಡೊ ಹರಿಯೆ ||
ಸಕಲ ಜೀವ ಜಡಾತ್ಮಕ ಪ್ರಪಂಚದೊಳಗೆ । ಪಂಚ
ರೂಪದಿ ಪೊಳೆವ ನಿನ್ನ ರೂಪವ ತೋರಿ ಕಾಪಾಡೊ ಹರಿಯೆ ||೨||
ಅನಾದಿ ಪುರುಷನೆ ಸ್ವಾಮಿ ಅನಾದಿಕಾಲದ ದುಷ್ಕರ್ಮ
ರಾಶಿಗಳ ಪರಿಹರಿಸಿ ನಿತ್ಯದಲಿ ಕಾಪಾಡಬೇಕೋ ಹರಿಯೇ ||೨||
ಅನಾಥರಕ್ಷಕ ಅಮಿತ ಗುಣಭರಿತ ಶ್ರೀ ತಂದೆ
ಮುದ್ದುಮೋಹನವಿಠಲ । ನೀನಿವರಿಗೇ ಸುಜ್ಞಾನ ಭಕ್ತಿ
ವೈರಾಗ್ಯವನೆ ಕೊಟ್ಟು ಸತತ ಕಾಪಾಡೊ ಹರಿಯೇ ||೩||

19. ಅಂಕಿತನಾಮ, ವಾಸುದೇವಾನಂತ ವಿಠಲ

ವಾಸುದೇವಾನಂತವಿಠಲನೆ । ನೀನಿವರಿಗೆ ಸದಾ । ಸುಸೌಖ್ಯ
ವನೆ ಕೊಟ್ಟು ನಿತ್ಯದಲಿ ಕಾಪಾಡೊ ಹರಿಯೆ ||ಪ||
ಅಜಭವಾದಿಗಳೊಡೆಯ ಶರಣಜನ ಕಾಮಧೇನುವೆ ।
ನೀನೊಲಿದು ಕಾಪಾಡೊ ಹರಿಯೇ ||ಅ.ಪ||

ರಂಗನಾಥನೆ ಸ್ವಾಮಿ । ಮಂಗಳಾಂಗನೆ ನೀನಿವರ ಹಗಲಿರಳು
ನಿನ್ನ ನಾಮಸ್ಮರಣೆಯನೆ ಕೊಟ್ಟು ಕಾಪಾಡೊ ಹರಿಯೆ ॥
ಅಂಗಜಪಿತ ಕಮಲಾಕ್ಷ ನಿನ್ನ ಭಕ್ತರಾದವರ ಸಂಗ
ಸುಖವಿತ್ತು ಕಾಪಾಡೊ ಹರಿಯೇ ॥೧॥
ಹಿಂದೆ ಮಾಡಿದ ಪಾಪರಾಶಿಗಳ ಪರಿಹರಿಸಿ । ಮುಂದೆ
ನೀನಿವರ ಕರಪದ್ಮವನೆ ಪಿಡಿದು ಉದ್ಧರಿಸಬೇಕೊ ಹರಿಯೇ ॥
ಮಧ್ವಮುನಿ ವಂದ್ಯ ನೀನಿವರ ಹೃನ್ಮಂದಿರದಿ
ನಿನ್ನ ರೂಪವ ತೋರಿ ಕಾಪಾಡೊ ಹರಿಯೆ ॥೨॥
ಹರಿಗುರುಭಕ್ತಿ ಶಮದಮಾದಿ ಸದ್ಗುಣವನೇ ಕೊಟ್ಟು
ಇಹಪರದಿ ಪರಿಪರಿಯ ಸುಖವಿತ್ತು ಕಾಪಾಡಬೇಕೊ
ಹರಿಯೇ ॥ ಪರಮಪೂಜ್ಯನೆ ಕೃಷ್ಣ ಶಿರಿತಂದೆ ಮುದ್ದು
ಮೋಹನ್ನವಿಠಲನೆ ನಿನ್ನ ಪದ ಪದ್ಮಾರಾಧನೆಯ ಕೈ
ಕೊಂಡು ಕಾಪಾಡೊ ಹರಿಯೆ ॥೩॥

20. **ಹೆಚ್. ಎಸ್. ತಿರುಮಲರಾವ್, ಅಂಕಿತನಾಮ ಜಯ ವಾಸುದೇವವಿಠಲ**

ಜಯವಾಸುದೇವವಿಠಲನೆ ನೀನಿವರ
ದಯದಿಂದ ಅನವರತ ಕಾಪಾಡೊ ಹರಿಯೇ ॥ಪ॥
ಭಯನಿವಾರಣ ದೇವ ಭಕ್ತವತ್ಸಲಸ್ವಾಮಿ ॥
ವಯನಗಮ್ಯನೆ ಸತತ ಕಾಪಾಡೊ ಹರಿಯೆ ॥ಅ.ಪ॥
ಅಪ್ರಮೇಯನೆ ನಿನ್ನ ಸ್ವಪ್ರಕಾಶವ ತೋರಿ
ಕ್ಷಿಪ್ರದಿಂದಲಿ ಸ್ವಾಮಿ ಕಾಪಾಡೊ ಹರಿಯೆ ॥
ಅಪ್ರಾಕೃತನೆ ಕೃಷ್ಣ ಅರವಿಂದನಾಭನೆ ।
ನೀಪ್ರೀತಿಯಿಂದಲೀ ಸಲಹೊ ಹರಿಯೇ ॥೧॥
ಜ್ಞಾನಗಮ್ಯ ನಿನ್ನ ಧ್ಯಾನವನೆ ಕೊಟ್ಟು ।
ಗಾನಲೋಲನೆ ಸತತ ಕಾಪಾಡೊ ಹರಿಯೆ ॥
ದೀನ ಜನಮಂದಾರ ಹೀನಕರ್ಮವ ಕಳೆದು ।
ಜ್ಞಾನಭಕ್ತಿಯನಿತ್ತು ಕಾಪಾಡೊ ಹರಿಯೆ ॥೨॥
ಮುದ್ದು ಗೋಪಿಯ ಕಂದ ಮಧ್ವಮುನಿವರದನೇ ।
ಶುದ್ಧಸಾತ್ವಿಕದ ಸನ್ಮಾರ್ಗವನೆ ತೋರಿ ಕಾಪಾಡೊ ಹರಿಯೆ ॥
ಮಧ್ವಾಂತರ್ಗತ ತಂದೆಮುದ್ದುಮೋಹನ್ನ ವಿಠಲನೇ ।
ಬುಧ್ಯಾದಿಂದ್ರಿಯಂಗಳು ನೆಲಸಿ ನಿನ್ನರೂಪವ ತೋರಿ ಕಾಪಾಡೊ ಹರಿಯೆ ॥೩॥

21. ಅಂಕಿತನಾಮ **ಗುರುವಾಸುದೇವ ವಿಠಲ,** ಶಾಮರಾಯರ ಮಗಳು

ಗುರುವಾಸುದೇವ ವಿಠ್ಠಲನೆ ನೀನಿವರಿಗೆ
ಪರಮಸುಖ ಕರುಣಿಸುತ ಕಾಪಾಡೊ ಹರಿಯೆ ||ಪ||
ಗರುಡಗಮನನೆ ಶ್ರೀಶ ನಿನ್ನ ಚರಣದಿ ಭಕ್ತಿ
ನಿರುತ ಸ್ಥಿರವಾಗಿರಲಿ ಹರಿಯೆ ||ಅ.ಪ||
ಮಂಗಳಾತ್ಮಕ ಕೃಷ್ಣ ಸನ್ಮಂಗಳವನಿತ್ತು
ರಂಗನಾಥನೆ ದೇವ ಕಾಪಾಡೊ ಹರಿಯೆ ||
ಶೃಂಗಾರ ಮೂರುತಿಯೇ ಸರಸ ಸದ್ಗುಣವಿತ್ತು |
ಸಂಗೀತಲೋಲನೇ ಸರ್ವಕಾಲದಿ ಸಲಹೊ ಕೃಷ್ಣಾ ||೧||
ವೈಕುಂಠದೊಲ್ಲಭನೆ ವ್ಯಾಕುಲವ ಪರಿಹರಿಸಿ
ಬೇಕಾದ ವರವಿತ್ತು ಕಾಪಾಡೊ ಹರಿಯೆ ||
ಲೋಕನಾಥನೆ ನಿನ್ನ ವಾಕುವಾಕಿಗೆ ಸ್ತುತಿಪ
ವಿವೇಕ ಮತಿಯನೆ ಕೊಟ್ಟು ಕಾಪಾಡೊ ಹರಿಯೆ ||೨||
ಸುಂದರಾಂಗನೆ ದೇವ ಸುಖತೀರ್ಥರಾಮತದಿ |
ಪೊಂದಿ ಸುಜ್ಞಾನವನು ಸುಖಿಸಲೀ ಹರಿಯೆ ||
ಕಂದರ್ಪಪಿತ ತಂದೆಮುದ್ದುಮೋಹನವಿಠಲ
ಸಿಂಧುಶಯನನೆ ಹೃದಯ ಮಂದಿರದಿ ನೆಲಸಿ ಸಲಹೋ ||೩||

22. ಡಿ. ರಾಜರಾವ್, ಅಂಕಿತನಾಮ **ಸುರೇಂದ್ರ** ವಿಠಲ

ಸುರೇಂದ್ರವಿಠಲನೆ ಅಸುರ ಜನಗಳ ಸಂಗವನು
ಪರಿಹರಿಸಿ ಕಾಪಾಡೊ ಹರಿಯೇ ||ಪ||
ಅಸುರಜನ ಮರ್ದನನೆ ಕೃಷ್ಣಾ ನಿನ್ನ
ದಾಸರಲಿ ಪ್ರೀತಿಯ ಕೊಟ್ಟು ಕಾಪಾಡೊ ಹರಿಯೇ ||
ಹರಿಗುರು ಸಾಧು ಜನಗಳ ಕಂಡ ಮಾತ್ರದಲಿ
ಹರುಷವಾಗಲಿವಗೇ ||೧||
ಪರಮಪಾವನ ಮೂರ್ತಿ ಪರಿಪರಿಯ ಕ್ಲೇಶವನು
ಪರಿಹರಿಸಿ ಕಾಪಾಡೊ ಹರಿಯೇ ||
ವರಮಧ್ವಮತದಸಾರತರ ತತ್ವವನು ಶ್ರೀ
ಹರಿಗುರುದಯದಿ ತಿಳಿಸಿ ಇಹಪರಗಳಲಿ

ಪರಮಸುಖವಿತ್ತು ಕಾಪಾಡೊ ಹರಿಯೇ ॥೨॥
ಗುರುದ್ವಾರವಿಲ್ಲದೆ ಗರುಡವಾಹನ ಕೃಪೆಯು ।
ನರಸುರರಿಗೆ ಲಭ್ಯವಾಗದು ಎಂಬ ದಿವ್ಯಮತಿಯನು
ಕೊಟ್ಟು ಕಾಪಾಡೊ ಹರಿಯೇ ॥೨॥
ಹರಿಯೇ ಪರತರನೆಂತೆಂಬ ಜ್ಞಾನವೇ ಸಂಸಾರ
ತಾರಕವೆಂಬ ನಂಬಿಕೆ ಕೊಟ್ಟು ।
ಸಿರಿ ತಂದೆಮುದ್ದುಮೋಹನವಿಠಲನೇ ನೀನಿವನ
ಅಂತರಂಗದಿ ನೆಲಸಿ ಕಾಪಾಡೊ ಹರಿಯೇ ॥೩॥

23. ರಾಜಾರಾವ್ ಅಂಕಿತನಾಮ **ರಘುಪತಿರಾಮವಿಠ್ಠಲ**

ರಘುಪತಿರಾಮವಿಠ್ಠಲನೆ ನೀನಿವರ । ಅಘರಾಶಿಗಳ
ಪರಿಹರಿಸಿ ಕಾಪಾಡೊ ಹರಿಯೇ ॥ಪ॥
ನಿಗಮಾದಿಸನ್ನುತನೆ ನಿತ್ಯತೃಪ್ತನೆ ದೇವ ಸುಗುಣಮಾರ್ಗವ
ತೋರಿ ಕಾಪಾಡೊ ಹರಿಯೇ ॥ಅ.ಪ॥
ಮೂರುಗುಣ ಪ್ರೇರಕನೆ ಸಾಕಾರ ಮೂರುತಿ ನಿನ್ನ ಅ ।
ಪಾರ ಮಹಿಮಾದಿಗಳ ತೋರಿ ಕಾಪಾಡೋ ಹರಿಯೇ॥
ಮಾರುತಾಂತರ್ಯಾಮಿ ಮರುತಮತ ಸಾರ ತತ್ವವ ತಿಳಿಸಿ ।
ಕಾರುಣ್ಯ ಮೂರುತಿಯೆ ಕಾಪಾಡೊ ಹರಿಯೆ ॥೧॥
ಅಪರಿಮಿತ ಸನ್ಮಹಿಮ ಆದಿಮಧ್ಯಾಂತರಹಿತನೆ ।
ಜಪತಪಾದಿ ಸತ್ಸಾಧನೆಯ ನಡಿಸಿ ಕಾಪಾಡೊ ಹರಿಯೇ ॥
ಸುಪಥ ಫಲದಾಯಕನೆ ಸೂಕ್ಷ್ಮ ಜ್ಞಾನವನಿತ್ತು ।
ವಿಪುಲ ಭಕ್ತಿಯ ಕೊಟ್ಟು ಕಾಪಾಡೊ ಹರಿಯೆ ॥೨॥
ಮಧ್ವರಾಯರ ಪ್ರೀಯ ಮಮಕುಲಸ್ವಾಮಿ ।
ಬುಧ್ಯಾದಿ ಇಂದ್ರಿಯಗಳಿಗೆ ನೀನೆ ಪ್ರೇರಕನೆಂಬ
ದಿವ್ಯಮತಿಯನೆ ಕೊಟ್ಟು ಕಾಪಾಡೊ ಹರಿಯೆ ॥
ಶುದ್ಧ ಮೂರುತಿ ತಂದೆಮುದ್ದುಮೋಹನ್ನವಿಠ್ಠಲನೆ ಇವರ
ಹೃದ್ವನಜದಲಿ ನೆಲಸಿ ಅನವರತ ನಿನ್ನ ಧ್ಯಾನವನೆ ಕೊಟ್ಟು
ಕಾಪಾಡೊ ಹರಿಯೆ ॥೩॥

24. **ಸೀತಾಬಾಯಿ, ಅಂಕಿತ ನಾಮ ಸುಂದರಾಕಾರವಿಠಲ**

ಸುಂದರಾಕಾರವಿಠ್ಠಲನೆ ನೀನಿವರಿಗೆ ಮಂದಮತಿಯನೆ
ಬಿಡಿಸಿ ಕಾಪಾಡೊ ಹರಿಯೆ ||ಅ||
ಇಂದಿರಾಪತೆ ಇಹಪರದಿ ನೀನಿವರ ಸಲಹಬೇಕೊ
ಸತತ ಹರಿಯೇ ||ಅ.ಪ||
ಶ್ರೀನಿವಾಸನೆ ನಿನ್ನ ಧ್ಯಾನಾಮೃತವನೆ ಕುಡಿಸಿ
ಸದ್ಗತಿಯನೆ ಇತ್ತು ಕಾಪಾಡೊ ಹರಿಯೆ ||೧||
ಕಾಮಾದಿ ವೈರಿಗಳ ಸಂಗವನೆ ಪರಿಹರಿಸಿ
ಕಾಪಾಡೊ ಹರಿಯೆ ||೨||
ಕಾಮಜನಕನೆ ತಂದೆಮುದ್ದುಮೋಹನ್ನವಿಠ್ಠಲ
ಭಕ್ತಿ ವೈರಾಗ್ಯವನೆ ಕೊಟ್ಟು ನಿನ್ನ ರೂಪವ ತೋರಿ
ಸಲಹ ಬೇಕೊ ಸತತ ಹರಿಯೆ ||೩||

25. **ಹ|| ಕುಂ|| ಶೋ|| ತುಂಗಾ ಬಾಯಿ ಅಂಕಿತ ಕೃಷ್ಣಾರಾಮಣಪ್ರಿಯವಿಠಲ**

ಕೃಷ್ಣಾರಮಣಪ್ರಿಯವಿಠ್ಠಲನೆ ನೀನಿವರ ಭವ ।
ಕಷ್ಟಗಳ ಪರಿಹರಿಸಿ ಕಾಪಾಡೊ ಹರಿಯೆ ||ಪ.||
ವಿಷ್ಣು ಮೂರುತಿ ನಿನ್ನ ದಾಸಸಂಗದೊಳಿಟ್ಟು ।
ಶ್ರೇಷ್ಠ ಫಲದಾಯಕನೆ ಕಾಪಾಡೊ ಹರಿಯೆ ||ಅ.ಪ||
ಅರವಿಂದನಾಭನೆ ಅಖಿಲರಕ್ಷಕ ದೇವ ।
ಕರಣ ಶುದ್ಧಿಯನಿತ್ತು ಕಾಪಾಡೊ ಹರಿಯೆ ||
ಗುರುಭಕ್ತಿಯೇ ಸಕಲ ಸುಜ್ಞಾನದಾಯಕವೆಂಬ ।
ವರಮತಿಯನೇ ಕೊಟ್ಟು ಕಾಪಾಡೊ ಹರಿಯೆ ||೧||
ಅಚ್ಚುತಾನಂತ ಗೋವಿಂದನೆಂತೆಂಬ ನಾಮತ್ರಯ ಜಪಿಸುವಂದದಲಿ
ಸ್ವಚ್ಛಮತಿಯನೆ ಕೊಟ್ಟು ಕಾಪಾಡೊ ಹರಿಯೆ ||
ಸಚ್ಚಿದಾನಂದಾತ್ಮ ಸರ್ವಪ್ರೇರಕನು ನೀನೆಂಬ ।
ನಿಶ್ಚಲದ ತತ್ವವನೆ ತಿಳಿಸಿ ಕಾಪಾಡೊ ಸ್ವಾಮಿ ||೨||
ಜಗದೇಕನಾಥನೇ ಜನ್ಮಾದಿರಹಿತನೆ ನಿನ್ನ ।
ಬಗೆ ಬಗೆಯ ಮಹಿಮಾದಿಗಳ ಕೀರ್ತಿಸುತ ನಲಿವಂತೆ
ಕೃಪೆಮಾಡೊ ಹರಿಯೆ ||
ನಿಗಮಾದಿನುತ ತಂದೆಮುದ್ದುಮೋಹನ್ನವಿಠ್ಠಲನೇ
ಪರಗತಿ ದಾಯಕನೆಂದು ।
ಹಗಲಿರುಳು ಧ್ಯಾನಮಾಳ್ಪಂದದಲಿ ದಿವ್ಯಮತಿಯನೆ ಕೊಟ್ಟು
ಕಾಪಾಡೊ ಹರಿಯೆ ||೩||

26. **ಕಲ್ಯಾಣಿ ಕೃಷ್ಣಾಚಾರ್ಯ, ಅಂಕಿತನಾಮ ಶ್ರೀಕಾಂತವರದೇಶ ವಿಠಲ**

ಶ್ರೀ ಕಾಂತವರದೇಶವಿಠಲನೆ ನೀನಿವರಿಗೆ । ಮೋಕ್ಷಾದಿ ಪುರು
ಷಾರ್ಥಗಳನೆ ಕೊಟ್ಟು ನಿತ್ಯದಲಿ ಕಾಪಾಡೊ ಹರಿಯೆ ।।ಪ।।
ಶ್ರೀನಿವಾಸನೆ ನಿನ್ನ ಧ್ಯಾನಾದಿಗಳನೆ ಕೊಟ್ಟು ನೀನಿವರ
ಇಹಪರದಿ ಸಲಹಬೇಕೊ ಹರಿಯೆ ।।ಅ.ಪ।।
ಸತ್ಯಸಂಕಲ್ಪನೇ ದೇವ ನೀನಿವರಿಗೆ ಸನ್ಮುದವನಿತ್ತು
ಕಾಪಾಡ ಬೇಕೊ ಹರಿಯೇ ।। ಎತ್ತನೋಡಿದರತ್ತ
ನಿನ್ನ ರೂಪವ ತೋರಿ । ಅತ್ಯಂತ ಸುಖವಿತ್ತು
ಸಲಹ ಬೇಕೊ ಹರಿಯೆ ।।೧।।
ವೈಷ್ಣವ ಮತ ಜ್ಞಾನ ಭಕ್ತ್ಯಾದಿಗಳನೆ ಕೊಟ್ಟು ಸತತ
ಕಾಪಾಡೊ ಹರಿಯೆ ।। ವಿಷ್ಣು ಸರ್ವೋತ್ತಮನು
ಕನಿಷ್ಠ ರುಳಿದವರೆಂಬೊ । ಶ್ರೇಷ್ಠತಾರತಮ್ಯವ ತಿಳಿಸಿ
ಕಾಪಾಡೊ ಹರಿಯೇ ।।೨।।
ಗುರುದ್ವಾರವಿಲ್ಲದೆ ಗರುಡವಾಹನನ ಕೃಪೆಯು
ಲಭ್ಯವಾಗದು ಎಂಬ ಮತಿಯನೆ ಕೊಟ್ಟು ಕಾಪಾಡೊ
ಹರಿಯೆ ।। ಹರಿಯೇ ಪರತರನೆಂತೆಂಬ ನಂಬಿಕೆಯ
ಕೊಟ್ಟು ಸಿರಿತಂದೆಮುದ್ದುಮೋಹನ ವಿಠ್ಠಲನೆ
ನಿನ್ನ ಸೇವಕರ ಸಂಗದಲಿ ಕಾಪಾಡೊ ಹರಿಯೆ ।।೩।।

27. **ಆನಂದರಾವ್ ಅಂಕಿತನಾಮ ಆನಂದಮಯ ವಿಠಲ**

ಆನಂದಮಯವಿಠಲನೆ ನೀನಿವರ ।
ಸಾನುರಾಗದಿ ಕೈಪಿಡಿದು ಕಾಪಾಡೊ ಹರಿಯೇ।।
ಗಾನಲೋಲನೆ ಸ್ವಾಮಿ ಗರುಡಗಮನನೆ ದೇವ ।
ಗಾನದಲಿ ನಿನ್ನ ಧ್ಯಾನವನು ಮಾಳ್ಪಂತೆ ಮತಿಯನೆ
ಇತ್ತು ಕಾಪಾಡೊ ಹರಿಯೆ ।।ಪ।।
ಪಾಪಸಂಗವನೆ ಬಿಡಿಸಿ ಪಾವನ್ನ ನೆಂದೆನಿಸಿ
ನೀತಿ ಮಾರ್ಗವನೆ ತೋರಿ ಕಾಪಾಡೊ ಹರಿಯೇ।।
ಭೂಪತಿಯೆ ವಾಯುಮತ ಸತ್ಯವೆಂದರಿತು
ಸಾರತತ್ವವನೆ ತಿಳಿಸುವೋಮತಿಯನೆ

ಕೊಟ್ಟು ಕಾಪಾಡೊ ಹರಿಯೇ ||೧||
ಗುರುಸೇವೆ ಹರಿಸೇವೆ ಹಿರಿಯರ ಸೇವೆಯನು
ಅರಿತು ಮಾಳ್ಪಂದದಲಿ ನಿರುತ ಧ್ಯಾನವನೆ ಕೊಟ್ಟು
ಕಾಪಾಡೊ ಹರಿಯೇ ||
ಹರಿಗುರುಗಳಲಿ ಭಕ್ತಿ ವಿಷಯದಲ್ಲಿ ವಿರಕ್ತಿ
ಸರ್ವಕಾಲದಿ ಕೊಟ್ಟು ಸರಸಿಜಾಕ್ಷನೆ ದೇವ
ಕಾಪಾಡೊ ಹರಿಯೇ ||೨||
ನಾನು ನನ್ನದು ಎಂಬ ಮಮಕಾರವನೆ ಬಿಡಿಸಿ
ನೀನೆ ಕರ್ತನು ಎಂದೆನಿಸಿ ನಿನ್ನವರ ಸಹವಾಸ
ಸಂಗವನೆ ಕೊಟ್ಟು ಕಾಪಾಡೊ ಹರಿಯೇ ||
ಶ್ರೀಮನ್ ತಂದೆ ಮುದ್ದು ಮೋಹನ್ನ ವಿಠ್ಠಲನೆ
ನೀನಿವರ ಮನಮಧ್ಯದಲಿ ನಿನ್ನ ದಿವ್ಯರೂಪ
ವನೆತೋರಿ ಕಾಪಾಡೊ ಹರಿಯೇ ||೩||

28. ಬರಮಪ್ಪ ಕದರಮಂಡಲಿಗಿ ಅಂಕಿತನಾಮ **ಹನುಮಯ್ಯನೊಡೆಯವಿಠ್ಠಲ**

ಹರೆ ಹರೆ ರಾಮ । ಹರೆ ಹರೇ ಕೃಷ್ಣ ।
ಹರೇ ಹರೇ ವಿಠ್ಠಲ ||
ತಂದೆ ಮುದ್ದು ಮೋಹನ್ನ ರಾದ ಪರಮಪ್ರಿಯರಾದ
ಸುಬ್ಬರಾಯ, ದಾಸರಾಯರು ಅಂಕಿತವನಿತ್ತು
ಗುರುಸ್ಮರಣೆಯಲಿ **ಹನುಮಯ್ಯನೊಡೆಯ**
ವಿಠ್ಠಲನೆಂದು ಕರೆದರು. ಮಂದಭಾಗ್ಯನಾದ
ನನ್ನ ದುರಿತವು ದೂರಾಗಲೆಂದು ವರವನಿತ್ತು ಗುರು
ಅಂತಃಕರುಣಿಸಿದರು ಕದುರುಮಂಡಲಗೀ
ಕಾಂತೇಶನ ಸನ್ನಿಧಾನದಲ್ಲಿ

29. **ಕದರಮಂಡಲಗಿ ತುಳಸಪ್ಪನ** ಅಂಕಿತ ನಾಮ ಅಂಕಿತ **ಗೋಕುಲಾನಂದ** ವಿಠಲ

ಗೋಕುಲಾನಂದವಿಠ್ಠಲನೆ ನೀನಿವಳ ।
ಸಾಕುವೊ ಭಾರ ನಿನ್ನ ದೆಂದೊಪ್ಪಿತಿಳಿದೆನೊ ಹರಿಯೇ ||
ಶ್ರೀ ಕಳತ್ರನೆ ಸ್ವಾಮಿ ನೀನಿವಳ ಇಹಪರದಿಸುಖವಿತ್ತು
ಕಾಪಾಡೊ ಬೇಕೊ ಹರಿಯೇ ||ಪ||

ದಾನವಾಂತಕ ಕೃಷ್ಣ ನೀನಿವಳ ದೋಷರಾಶಿಗಳೆಲ್ಲ ಪರಿಹರಿಸಿ ।
ಜ್ಞಾನಭಕ್ತಿಯ ನಿತ್ತು ಕಾಪಾಡ ಬೇಕೊ ಹರಿಯೇ ॥
ದೀನವತ್ಸಲ ನಿನ್ನ ಭಕ್ತ ಜನರೊಳನಿಟ್ಟು ।
ಅ-ಜ್ಞಾನ ಪರಿಹರಿಸಿ ಸತತ ಕಾಪಾಡ ಬೇಕೊ ಹರಿಯೇ ॥೧॥
ಜ್ಞಾನಗಮ್ಯನೆ ನಿನ್ನ ದರುಶನವನಿತ್ತು ಕೃಪೆ
ಮಾಡಿ ಸಲಹ ಬೇಕೊ ಹರಿಯೇ ॥
ಶ್ರೀನಿವಾಸನೆ ನಿನ್ನದರುಶನವ ಕೊಟ್ಟು
ಸದ್ಗತಿಯನಿತ್ತು ಕಾಪಾಡ ಬೇಕೊ ಹರಿಯೇ ॥೨॥
ಕಾಮಾದಿವೈರಿಗಳ ಸಂಘವನೆ ಬಿಡಿಸಿ ।
ಪ್ರೇಮದಿಂದಲಿ ನೀ ಕಾಪಾಡೊ ಹರಿಯೇ ॥
ಕಾಮಜನಕನೆ ತಂದೆಮುದ್ದುಮೋಹನ್ನ
ವಿಠ್ಠಲನೆ ನೀನಿವಳ ಹೃತ್ಕಮಲದೊಳು
ನಿನ್ನ ಬಿಂಬರೂಪವ ತೋರಿ ಸಲಹೊ ಹರಿಯೇ ॥೩॥

30. ವೆಂಕವ್ವ - ಅಂಕಿತನಾಮ ಮನೋಮಯ ವಿಠ್ಠಲ

ಮನೋಮಯವಿಠ್ಠಲನೆ ನೀನಿವರ
ಮನದೊಳಗೆ ನೆಲಿಸಿದ್ದು ಸತತ ಕಾಪಾಡಬೇಕೊ ಹರಿಯೇ ॥
ಅನಘ ಅಮರೇಶ ಮುನಿಗಣಸ್ತುತ್ಯ ।
ನಿನ್ನ ಸೇವಕರ ಸೇವೆಯನು ಸ್ವೀಕರಿಸಿ ಸಲಹೊ ಹರಿಯೇ ॥ಪ॥
ಸಾಧು ಸಂಗವ ಕೊಟ್ಟು ವೋದ ತೀರ್ಥರ ಶಾಸ್ತ್ರ ಸಾರವನೆ ತಿಳಿಸಿ ।
ಮೋದಗೊಳಿಸಲಿ ಬೇಕೊ ಹರಿಯೇ ॥ಅ.ಪ॥
ಮಾಧವನೆ ಮಧುಸೂದನ ತ್ರಿವಿಕ್ರಮ ಕುಂದುಗಳನೆಣಿಸಿದೆ ಸದ್ಭಕ್ತಿಯನೆ ಕೊಟ್ಟು
ದಯದಿ ಸಲಹೊ ಹರಿಯೇ ॥೧॥
ನಾನು ನನ್ನದು ಎಂಬದುರಭಿಮಾನವ ಬಿಡಿಸಿ
ನೀನೆ ಸರ್ವೋತ್ತಮನೆಂಬೊ ಸುಜ್ಞಾನವನೆ
ಕೊಟ್ಟು ಕಾಪಾಡ ಬೇಕೊ ಹರಿಯೇ ॥
ದೀನವತ್ಸಲ ಮಾ ಮನೋಹರ ಗಾನಲೋಲನೆ ಸುಜ್ಞಾನವನೆ
ಕೊಟ್ಟು ನಿತ್ಯದಲಿ ಕಾಪಾಡ ಬೇಕೊ ಹರಿಯೇ ॥೨॥
ಮಂಗಳಾಂಗನೆ ದೇವ ಮದನಜನಕನೆ ಸ್ವಾಮಿ ।
ಮಂಗಳ ಪಾದದಸ್ಮರಣೆಯನೆ ಕೊಟ್ಟು ಕಾಪಾಡೊ ಹರಿಯೇ ॥

ತುಂಗ ವಿಕ್ರಮ ಶಿರಿವರದ ತಂದೆಮುದ್ದುಮೋಹನ್ನ
ವಿಠ್ಠಲನೆ ನೀನಿವರ ಹೃದಯ ಮಂದಿರದಿ ನಿನ್ನ
ಮಂಗಳ ರೂಪವನೆ ತೋರಿ ಕಾಪಾಡಬೇಕೊ ಹರಿಯೇ ।।೩।।

31. ಕೋದಂಡಿ ಹುಚ್ಚವ್ವ (ದಾಸಮ್ಮ) ಅಂಕಿತನಾಮ ಜಯ ಪರಾತ್ಪರ ವಿಠಲ

ಜಯಪರಾತ್ಪರವಿಠ್ಠಲನೆ ನೀನಿವರಿಗೆ ।
ಜಯಪ್ರದನಾಗಿ ಸತತ ಕಾಪಾಡೊ ಹರಿಯೇ ।।
ರಾಜಾಧಿರಾಜ ಮಹರಾಜ ಶ್ರೀಹರಿಯೇ
ನೀನೆ ಪಾಲಿಸ ಬೇಕೊ ಹರಿಯೇ ।।ಪ।।
ಅನಾದಿ ಪುರುಷ ಸ್ವಾಮಿ ಅನಾಥರಕ್ಷಕ ದೇವ ।
ನೀನೊಲಿದು ಕೃಪೆಮಾಡಿ ಸಲಹಬೇಕೊ ಹರಿಯೇ ।।
ಮನಾದಿ ಇಂದ್ರಿಯ ಪ್ರೇರಕ ನೀನೆಂಬೊ ದಿವ್ಯ
ಮತಿಯನೆ ಕೊಟ್ಟು ಕಾಪಾಡ ಬೇಕೊ ಹರಿಯೇ ।।೧।।
ಹಗಲಿರಳು ನಿನ್ನ ಭಕ್ತರಸಂಗದೊಳಿರಿಸಿ
ನೀನಿವರ ಸೇವೆಯನೆ ಕೊಂಡು ಕಾಪಾಡೊ ಹರಿಯೇ ।।
ಅಗಣಿತಮಹಿಮನೇ ಕೃಷ್ಣ ನೀನಿವರ
ಅಘರಾಶಿಗಳ ಪರಿಹರಿಸಿ ಕಾಪಾಡ ಬೇಕೊ ಹರಿಯೇ ।।೨।।
ಸುಂದರಾಂಗನೆ ದೇವ ನೀನಿವರ
ಛಂದದಲಿ ಕಾಪಾಡ ಬೇಕೊ ಹರಿಯೇ ।।
ಇಂದಿರಾಪತಿ ವಾರಿಜೋದ್ಭವನಯ್ಯ
ತಂದೆಮುದ್ದುಮೋಹನ್ನವಿಠಲನೇ
ನೀನಿವರ ಮುದದಿಂದ ಸಲಹಬೇಕೊ ಹರಿಯೇ ।।೩।।

32. ಡಿ. ಧರ್ಮರಾವ್ ಅಂಕಿತ - ಜಯಲಕ್ಷ್ಮೀ ನೃಸಿಂಹ ವಿಠಲ

ಜಯಲಕ್ಷ್ಮೀನೃಸಿಂಹವಿಠಲ ನೀನಿವರಿಗೆ ।
ಜಯಪ್ರದನಾಗಿ ಕಷ್ಟತತಿಗಳ ಬಿಡಿಸಿ ಉತ್ಕೃಷ್ಟ
ಸುಖವಿತ್ತು ಕಾಪಾಡೊ ಹರಿಯೇ ।।ಪ।।
ಭಕ್ತಜನ ಪರಿಪಾಲ । ರಮಾಲೋಲ ।
ಮುಕ್ತಿಮಾರ್ಗವ ತೋರಿ ಸತತ ಕಾಪಾಡೊ ಹರಿಯೇ ।।ಅ.ಪ.।।
ಹಿಂದಿನಾ ಜನ್ಮಗಳಲ್ಲಿ ಮಾಡಿದಾ ಪಾಪರಾಶಿಗಳೆಲ್ಲ ।

ಇಂದು ನೀ ಪರಿಹರಿಸಿ ಮುಂದೆ ಪುಣ್ಯ ಮಾರ್ಗವ
ತೋರಿ ಕಾಪಾಡ ಬೇಕೊ ಹರಿಯೇ ||
ತಂದೆ ತಾಯಿಯು ನೀನೆ ಬಂಧು ಬಳಗವು ನೀನೆ
ಮುಂದೆ ಸಲಹೊ ಸ್ವಾಮಿ ನೀನೇ |
ಇಂದಿವನಸ್ತುತಿಗೆ ಒಲಿದು ಕಾಪಾಡ ಬೇಕೊ ಹರಿಯೇ ||೧||
ನಾನು ನನ್ನದು ಎಂಬ ಹೀನ ಬುದ್ಧಿಯು ಬಿಡಿಸಿ
ನೀನು ನಿನ್ನದು ಎಂಬ ದಿವ್ಯ ಮತಿಯನ್ನು ಕೊಟ್ಟು
ಅನುಗಾಲ ಸಲಹ ಬೇಕೊ ಹರಿಯೇ ||
ಗಾನಲೋಲನೆ ಸ್ವಾಮಿ ನಿನ್ನ ಸೇವಕನಿವನು
ನಿನ್ನ ನಾಮಸ್ಮರಣೆಯನು ಸ್ಮರಿಸುವೋ ಭಾಗ್ಯ
ವನೆ ಕೊಟ್ಟು ಸಲಹಬೇಕೊ ಹರಿಯೆ ||೨||
ತರತಮಜ್ಞಾನಪಂಚಭೇದವ ತಿಳಿಸಿ |
ಪರಮಪುರುಷನೆ ಸ್ವಾಮಿ ನೀನಿವರ |
ಕರಪಿಡಿದು ಸತತ ಕಾಪಾಡೊ ಹರಿಯೆ |
ಹರಿಭಕ್ತಿ ಗುರುಸೇವೆ ವಿಷಯದಲಿ ವೈರಾಗ್ಯ
ಶಮದಮಾದಿಗಳನೆ ಕೊಟ್ಟು ಕಾಮಾದಿಗಳ ಪರಿಹರಿಸಿ
ಸಿರಿ ತಂದೆ ಮುದ್ದುಮೋಹನವಿಠಲನೆ ನೀನಿವರ
ಹೃದಯ ಕಮಲದಲಿ ನಿನ್ನ ರೂಪವ ತೋರಿ
ಕಾಪಾಡೊ ಹರಿಯೇ ||೩||

33. ಗುರುಗಳ ಹಿರಿಯ ಸೊಸೆ (ಶ್ರೀ ಎನ್. ವಿ. ದಾಸರ ಪತ್ನಿ) ಹೆಸರು - ವೆಂಕಮ್ಮ
ಅಂಕಿತ - **ಸಕಲ ಸುಖಪೂರ್ಣವಿಠಲ**

ಸಕಲ ಸುಖಪೂರ್ಣವಿಠಲನೆ ನೀನಿವಳ
ಸಕಲ ಕಾಲಗಳಲ್ಲಿ ಪರಿಪಾಲಿಸಲಿ ಬೇಕೊ ಹರಿಯೆ ||ಪ||
ಹಲವು ಜನ್ಮದ ಪಾಪರಾಶಿಗಳ ಪರಿಹರಿಸಿ
ಜಲಜನಾಭನೆ ಕೃಷ್ಣ ಪಾಲಿಸಲಿಬೇಕೊ ಹರಿಯೇ ||
ಕಮಲಸಂಭವ ವಂದ್ಯ ಕಮಲಲೋಚನನೆ ಸ್ವಾಮಿ
ವಿಮಲಮತಿಯನೆ ಕೊಟ್ಟು ಕಾಪಾಡ ಬೇಕೊ ಹರಿಯೇ ||೧||
ಗಾನ ಲೋಲನೆಸ್ವಾಮಿ ದೀನ ಜನ ಮಂದಾರ
ನೀನೊಲಿದು ಕೃಪೆ ಮಾಡಿ ಸಲಹ ಬೇಕೊ ಹರಿಯೇ ||

ದಾನವಾಂತಕ ಕೃಷ್ಣ ಸಾನುರಾಗದಿಭಜಿಪ ಭಾಗ್ಯವನೆ
ಕೊಟ್ಟು ಕಾಪಾಡ ಬೇಕೊ ಹರಿಯೇ ||೨||
ಹರಿಗುರುಗಳಲಿ ಭಕ್ತಿ ಸುಜ್ಞಾನವನೆ ಕೊಟ್ಟು
ಇಹಪರದಿ ಸಲಹ ಬೇಕೊ ಹರಿಯೇ ||
ಪರಮಪುರುಷನೆ ತಂದೆಮುದ್ದುಮೋಹನ್ನ
ವಿಠಲನೆ ನಿನ್ನ ಚರಣ ಕಮಲವನೆ ತೋರಿ
ವರಸ್ವಪ್ನದಲಿ ಬಂದು ಅಂಕಿತವನೆಯಿತ್ತೆ ಹರಿಯೆ ||೩||

34. ನರಸಿಂಗರಾವ್ ಹರಪನಹಳ್ಳಿ ಅಂಕಿತ - **ಸುಪ್ರಸನ್ನಮೂರ್ತಿ ವಿಠಲ**

ಸುಪ್ರಸನ್ನ ಮೂರ್ತಿವಿಠಲನೆ ನೀನಿವರಿಗೆ |
ಸುಪ್ರಸಾದವನೆ ಕೊಟ್ಟು ಕಾಪಾಡೊ ಹರಿಯೆ ||ಪ||
ಅಗಣಿತಮಹಿಮನೆ ನರಹರಿಯೇ ಶ್ರೀ ಕೃಷ್ಣ |
ಸುಗುಣವನೆ ಕೊಟ್ಟು ಕಾಪಾಡೊ ಹರಿಯೆ ||ಅ.ಪ.||
ಮಂಗಳಾಂಗನೆ ದೇವ ಮದನಜನಕನೆ ಸ್ವಾಮಿ ನಿನ್ನ
ಭಕ್ತರ ಸಂಗಸುಖವನೆ ಕೊಟ್ಟು ನಿತ್ಯದಲಿ ಕಾಪಾಡಬೇಕೊ ಹರಿಯೇ ||
ರಂಗನಾಥನೆ ದೇವ ಮದ್ಗುರುಗಳಂತರ್ಯಾಮಿ
ನೀನಿವರ ಕಣ್‌ಗಳಿಗೆ ನಿನ್ನ ರೂಪವ ತೋರಿ
ಉದ್ಧರಿಸ ಬೇಕೊ ಹರಿಯೆ ||೧||
ಜ್ಞಾನ ಭಕ್ತಿವಿರಕ್ತಿ ಮೊದಲಾದ ಸದ್ಗುಣ
ವನೇ ಕೊಟ್ಟು ಕಾಪಾಡೊ ಹರಿಯೆ ||
ಸ್ನಾನ ಜಪ ತಪ ಮೊದವಾದ ಸಾಧನವಗೈಸಿ |
ನಿನ್ನ ನಾಮಾಮೃತದ ಸವಿಯನೆ ತೋರಿ ಕಾಪಾಡೊ ಹರಿಯೆ ||
ದೀನವತ್ಸಲ ರಘುರಾಮ ನೀನಿವರ ಅಂತರಂಗದಿ
ನೆಲಸಿ | ನಿನ್ನ ಪೂಜೆಯನೆ ಸ್ವೀಕರಿಸಿ ಉದ್ಧರಿಸಬೇಕೊ ಹರಿಯೇ ||೨||
ನಾನು ನನ್ನದು ಎಂಬ ದುರ್ಮತಿಯನೇ ಬಿಡಿಸಿ |
ನೀನು ನಿನ್ನದು ಎಂಬ ಸುಜ್ಞಾವನೆ ಕೊಟ್ಟು ಕಾಪಾಡೊ ಹರಿಯೇ ||
ನೀನೆ ಪ್ರೇರಕನು ನೀನೆ ಸರ್ವೋತ್ತಮನು ಎಂಬ
ದಿವ್ಯ ಮತಿಯನೆ ಕೊಟ್ಟು | ಜ್ಞಾನ ಪೂರ್ಣನೆ
ತಂದೆಮುದ್ದು ಮೋಹನವಿಠಲನೆ ನಿನ್ನ
ಜ್ಞಾನವನೆ ಕೊಟ್ಟು ಸಂತೈಸಬೇಕೊ ಸತತ ಹರಿಯೇ ||೩||

35. ಶ್ರೀ ಡಿ. ನರಸಿಂಗರಾಯರವರ ಕುಟುಂಬ ಲಕ್ಷ್ಮೀಬಾಯಿ ಅಂಕಿತ
ಶಿರಿ ಜಯನಾರಾಯಣವಿಠಲ

ಶಿರಿಜಯನಾರಾಯಣವಿಠಲನೆ-ನೀನಿವರಿಗೆ ।
ಪರಿಪರಿಸುಖವನೆಯಿತ್ತು ಕಾಪಾಡೊ ಹರಿಯೇ ।।ಪ।।
ಪಾಪರಹಿತನೆ ಸ್ವಾಮಿ । ಅಪಾರಪಾಪರಾಶಿಯ
ಪರಿಹರಿಸಿ ಸತತ ಕಾಪಾಡೊ ಹರಿಯೆ ।।ಅ.ಪ।।
ಹರಿಸೇವೆ ಗುರುಸೇವೆ ಹಿರಿಯರಾಸೇವೆಯನು
ಮಾಳ್ಪಂತ ವರ ಬುದ್ಧಿಯನೆ ಕೊಟ್ಟು ನಿನ ಸೇವಕರ
ಸಲಹಬೇಕೊ ಸತತ ಹರಿಯೆ ।।
ಪರಮ ಪುರುಷನೆ ಸ್ವಾಮಿ ಅಜ್ಞಾನವನೆ ಪರಿಹರಿಸಿ
ಸುಜ್ಞಾನವನೆ ಕೊಟ್ಟು । ಪರಮ ಭಕ್ತರ ಸಂಗ
ಸುಖವನೆ ಕೊಟ್ಟು ಕಾಪಾಡೊ ಹರಿಯೆ ।।೧।।
ಜ್ಞಾನಗಮ್ಯನೆದೇವದಾನವಾಂತಕ ಕೃಷ್ಣ
ನೀನಿವರ ಕರುಣದಲಿ ಸತತ ಕಾಪಾಡ ಬೇಕೊ ಹರಿಯೆ ।।
ಜ್ಞಾನದಾಯಕ ದೇವ ಗಾನಲೋಲನೆ ಕೃಷ್ಣ ।
ದೀನಬಂಧುವೆ ಅನಾಥರಕ್ಷಕನೆ ಕಾಪಾಡೊ ಹರಿಯೆ ।।೨।।
ಗರುಡಗಮನನೆ ಸ್ವಾಮಿ ನೀನೆ ಸರ್ವೋತ್ತಮನು ಎಂಬ
ವರಮತಿಯನೇ ಕೊಟ್ಟು ಪರಮಾತ್ಮನೇ ನೀನಿ
ವರ ಕರಪಿಡಿದು ಕಾಪಾಡಬೇಕೊ ಹರಿಯೇ ।।
ಪರಿಪೂರ್ಣಭಕ್ತಿ ಜ್ಞಾನ ವೈರಾಗ್ಯ ಮೊದಲಾದ ಗುಣಗಳನೆ ಕೊಟ್ಟು
ಪರಿಪಾಲಿಸಲಿ ಬೇಕೊ ತಂದೆ ಮುದ್ದು ಮೋಹನ
ವಿಠಲನೆ ನೀನಿವರ ಸೇವೆಯನು ಕೈಕೊಂಡು
ಉದ್ಧರಿಸಬೇಕೊ ಹರಿಯೇ ।।೩।।

36. ಡಿ. ನರಸಿಂಗರಾಯರವರ ಮಗಳು **ಸೌ।। ಕಲ್ಯಾಣಮ್ಮ**
ಅಂಕಿತ **ಜಗತ್ಪತಿ ಕೇಶವ ವಿಠಲ**

ಜಗತ್ಪತಿಕೇಶವವಿಠಲನೆ ನೀನಿವರ
ಜಗದೊಳಗೆ ಸಲಹುವೋ ಭಾರ ನಿನ್ನದೊ ಹರಿಯೆ ।।ಪ।।
ಅನಾದಿಪುರುಷನೆ ಪರಮಪೂಜ್ಯನೆ ನೀನಿವರ

ಅ-ಜ್ಞಾನ ದೋಷಗಳ ಕಳೆದು ಪಾಲಿಸಲಿ ಬೇಕೊ ಹರಿಯೆ ||ಅ.ಪ||
ಹರಿಗುರುಗಳಲಿ ಭಕ್ತಿ | ಹಿರಿದಾಗಿ ಕೊಟ್ಟು | ಅನ
ವರತ ಸುಖವಿತ್ತು ಕಾಪಾಡೊ ಹರಿಯೆ ||
ಕರುಣಾಸಮುದ್ರ ಶ್ರೀ ಹರಿಯೆ | ಪರಮಪುರುಷನೆ
ಸ್ವಾಮಿ ಪರಿಪಾಲಿಸ ಬೇಕೊ ಹರಿಯೆ ||೧||
ಸುರಮುನಿಕರಾರ್ಜಿತ ಪಾದ ಸೇವೆಯನೆ ಕೊಟ್ಟು
ಕಾಪಾಡ ಬೇಕೊ ಹರಿಯೇ ||
ಪರಿಪರೀಜನ್ಮ ದುರಿತರಾಶಿಗಳ
ಪರಿಹರಿಸಿ ಕಾಪಾಡೊ ಹರಿಯೆ ||೨||
ಜ್ಞಾನ ಭಕ್ತಿ ವಿನಯ ಮೊದಲಾದ ಗುಣರಾಶಿ
ಯನೆ ಕೊಟ್ಟು ಕಾಪಾಡೊ ಹರಿಯೇ ||
ದಾನವಾಂತಕ ಕೃಷ್ಣ ದೀನ ಜನರೊಡಯನೆ
ತಂದೆಮುದ್ದುಮೋಹನವಿಠಲನೆ | ನಿನ್ನ
ನಾಮಸ್ಮರಣೆಯನೆ ಕೊಟ್ಟು ಸತತ ಕಾಪಾಡೊ ಹರಿಯೆ ||೩||

37. ರಾಣ್ಯದ ವೆಂಕಮ್ಮ (ಚಳ್ಳಕೆರೆ) ಅಂಕಿತ - ಸದಮಲಾನಂದ ವಿಠಲ

ಸದಮಲಾನಂದವಿಠಲನೆ ನೀನಿವರ ಸತತ
ಕಾಪಾಡ ಬೇಕೊ ಹರಿಯೇ ||
ಭಯ ನಿವಾರಕನೇ ನೀನಿವರ ಸತತ
ಕಾಪಾಡಬೇಕೊ ಹರಿಯೇ ||
ಕುಕ್ಷಿಯೊಳು ಈರೇಳುಲೋಕವನು |
ರಕ್ಷಿಶಿ ಕಾಪಾಡ ಬೇಕೊ ಹರಿಯೇ ||
ಭಯನಿವಾರಕನೇ ನೀನಿವರ ಸತತ
ಕಾಪಾಡಬೇಕೊ ಹರಿಯೇ ||
ತಂದೆ ತಾಯಿಯು ನೀನೆ ಬಂಧು ಬಳಗವು ನೀನೆ |
ಹಿಂದೆ ಮುಂದೆ ನೀನಿವರ ಸತತ ಕಾಪಾಡಬೇಕೊ ಹರಿಯೇ ||
ವಡಹುಟ್ಟಿದವ ನೀನೆ ಕುಕ್ಷಿಯೊಳು ಈರೇಳು
ಲೋಕವನು ರಕ್ಷಿಶಿ ಕಾಪಾಡಬೇಕೊ ಹರಿಯೇ ||

ಈ ಅಂಕಿತ ನಾಮವನ್ನು ವಯಸ್ಸಾದಂಥ ವೆಂಕಮ್ಮನವರಿಂದ ಹೇಳಿಸುವದೆ ಕಷ್ಟಸಾಧ್ಯವಾಗಿತ್ತು. ಆದರೂ ಅಂಥಾ ವಯೋವೃದ್ಧರು ಅಷ್ಟರಮಟ್ಟಿಗೆ ಹೇಳಿದ್ದೇ ಹೆಚ್ಚು-ಅತ ಯೇವ ನುಡಿಗಳಲ್ಲಿ ವ್ಯತ್ಯಾಸ ಮತ್ತು ಕೊನೆಗೆ ಅರ್ಪಣೆಯಲ್ಲಿ ವ್ಯತ್ಯಾಸವಿರುತ್ತೆ. ಗುರುಗಳು ಎಲ್ಲವನ್ನೂ ಸರಿಪಡಿಸಿಕೊಳ್ಳುತ್ತಾರೆ

38. ತುಳಸಮ್ಮನವರು ದಿವಂಗತ ಲಕ್ಷ್ಮಿನರಸಪ್ಪ, ಚೀಫ್ ಎಂಜಿನಿಯರ್, ಇವರ ಪತ್ನಿ
ಅಂಕಿತ ಸದಾನಂದ ಗುಣಭರಿತ ವಿಠಲ

ಸದಾನಂದಗುಣಭರಿತವಿಠಲನೆ । ನೀನಿವರ
ಸದಾನುರಾಗದಿ। ಸಲಹಬೇಕೊ ಹರಿಯೇ ॥ಪ॥
ಮಂಗಳಾಂಗನೆ ಸ್ವಾಮಿ । ಇಹಪರದಿ
ಮಂಗಳವನಿತ್ತು ಕೃಪೆಮಾಡು ಹರಿಯೆ ॥ಅ.ಪ॥
ಹರಿಗುರುಗಳಲಿ ಭಕ್ತಿ ಭಾಗ್ಯವಕೊಟ್ಟು ।
ಪರಿಪರಿಯಿಂದ ಕಾಪಾಡು ಹರಿಯೆ ॥
ಪರಮಪುರುಷನೆ ಕೃಷ್ಣ ನಿನ್ನ ಚರಿತೆಯನು
ಅನುಗಾಲ ಕೇಳ್ವಂತೆ ಕರುಣಿಪುದು ಹರಿಯೆ ॥೧॥
ದಾನವಾಂತಕ ಕೃಷ್ಣ ಗಾನಲೋಲನೆ ಸ್ವಾಮಿ
ನೀನೊಲಿದು ಕೃಪೆ ಮಾಡಿ ಸಲಹಬೇಕೊ ಹರಿಯೆ ॥
ನಾನು ನನ್ನದು ಯೆಂಬ । ಅಜ್ಞಾನವನೆ ಪರಿಹರಿಸಿ
ಸು-ಜ್ಞಾನವನು ಕೊಟ್ಟು ಕಾಪಾಡಬೇಕೊ ಹರಿಯೆ ॥೨॥
ಸರ್ವಕಾಲದಿ ನಿನ್ನ ನಾಮಸ್ಮರಣೆಯನು ಕೊಟ್ಟು
ಸರ್ವಾಂತರ್ಯಾಮಿ ನೀನೊಲಿದು ದಯಮಾಡೊ ಹರಿಯೆ ॥
ಸರ್ವಗುಣ ಸಂಪೂರ್ಣ ಮಮಕುಲಸ್ವಾಮಿ
ತಂದೆ ಮುದ್ದುಮೋಹನ ವಿಠಲನೆ
ಸರ್ವಗತ ಬಿಂಬನ ಸ್ಮರಿಸುವೊ ಭಾಗ್ಯವನೆ ಕೊಟ್ಟು
ಕಾಪಾಡೊ ಹರಿಯೇ ॥೩॥

39. ಎಂ. ಇ. ರಂಗನಾಥ ರಾವ್ ಅಂಕಿತ **ಸುಗುಣರತ್ನಾಕರವಿಠಲ**

ಸುಗುಣರತ್ನಾಕರವಿಠಲನೆ ನೀನಿವರ
ಸುಗುಣವಂತರ ಮಾಡಿ ಕಾಪಾಡೊ ಹರಿಯೆ ॥ಪ॥
ನಿಗಮಗೋಚರ ದೇವ ನಿತ್ಯತೃಪ್ತನೆ ನಿನ್ನ
ನಾಮಸ್ಮರಣೆಯನಿತ್ತು ಕಾಪಾಡೊ ಹರಿಯೇ ॥ಅ.ಪ॥
ಸಾಧು ವಂದಿತ ಚರಣ ಸತ್ಯಗುಣವಾರಿಧಿಯೇ
ಆಧಿವ್ಯಾಧಿಯ ಬಿಡಿಸಿ ಕಾಪಾಡೊ ಹರಿಯೇ ॥
ಬಾದರಾಯಣ ಮೂರ್ತಿಭಕ್ತರಕ್ಷಕ ಸ್ವಾಮಿ
ಭಾರಕರ್ತನೆ ನೀನು ಕಾಪಾಡೊ ಹರಿಯೆ ॥ ಸು ॥೧॥

ಭಕ್ತಿದಾಯಕನಿನ್ನ ಪಾದಭಕ್ತಿಯನಿತ್ತು
ಸತ್ಯಸಂಗದೊಳಿರಿಸಿ ಸುಜ್ಞಾನವನೆ ಕೊಟ್ಟು
ಕಾಪಾಡೊ ಹರಿಯೆ ||
ಮುಕ್ತಿದಾಯಕ ಸಕಲ ಸಾರತತ್ವವ ತಿಳಿಸಿ
ಮುಕ್ತೇಶ ಸರ್ವದಾ ಸಲಹೊ ಸ್ವಾಮಿ || ಸು ||೨||
ಸುರಲೋಕರಕ್ಷಕನೆ ಸಮೀರಶಾಸ್ತ್ರದಸಾರ
ಪರಮ ತತ್ವವ ತಿಳಿಸಿ ಕಾಪಾಡೊ ಹರಿಯೇ |
ಕರುಣಸಾಗರ ತಂದೆ ಮುದ್ದುಮೋಹನ್ನ ವಿಠಲನೆ ನೀನಿವರ
ಹೃದಯಾರವಿಂದದಿ ನಿನ್ನ ಚರಣಾರವಿಂದವ
ತೋರಿ ಕಾಪಾಡೊ ಹರಿಯೇ || ಸು || ||೩||

40. ಹೆಸರು ಸೌ|| **ಗಂಗಾಬಾಯಿ** (ಎಂ. ಬಿ. ರಂಗನಾಥರಾವ್‌ರವರ ಮಡದಿ) ಅಂಕಿತ **ಕಮನೀಯ ಗುಣಪೂರ್ಣ ವಿಠಲ**

ಕಮನೀಯಗುಣಪೂರ್ಣವಿಠಲನೆ ನೀನಿವರಿಗೆ |
ಶಮದಮಾದಿ ಸದ್ಗುಣವನೇ ಕೊಟ್ಟು ಕಾಪಾಡೊ ಹರಿಯೇ ||ಪ||
ನಾನು ನನ್ನದು ಎಂಬ ದುರಭಿಮಾನವನೆ ಬಿಡಿಸಿ
ನಿತ್ಯದಲಿ ಕಾಪಾಡಬೇಕೊ ಹರಿಯೆ ||ಅ.ಪ||
ಹರಿಗುರುಗಳಲಿ ಭಕ್ತಿವಿಷಯದಲಿ ವೈರಾಗ್ಯ
ಮೊದಲಾದ ಸದ್ಗುಣವನೇ ಕೊಟ್ಟು ಪರಮಪುರುಷನೆ
ನಿತ್ಯದಲಿ ಕಾಪಾಡ ಬೇಕೊ ಹರಿಯೆ |
ಕರಿವರದನೇ ಕೃಷ್ಣ ಕಮಲನಾಭನೆ ಸ್ವಾಮಿ
ಕರುಣಾಸಾಂದ್ರ ಶ್ರೀ ಹರಿಯೇ |
ನಿನ್ನ ನಾಮಸ್ಮರಣೆಯನು ಮಾಳ್ಪಮತಿಯನೇ
ಕೊಟ್ಟು ಸಲಹ ಬೇಕೊ ಹರಿಯೆ ||೧||
ಅಗಣಿತಾ ಗುಣಮಹಿಮ ಸತ್ಯಸಂಕಲ್ಪನೇ ದೇವ |
ಸುಗುಣವಂತರ ಸಂಗದಲಿ ಸುಖವಿತ್ತು ಕಾಪಾಡೊಹರಿಯೇ ||
ಹಗಲಿರಳು ಮಾಳ್ಪ ಸಕಲಕಾರ್ಯಗಳೆಲ್ಲವು |
ಸುಗುಣಪೂರ್ಣನಪಾದ ಸೇವೆ ಎಂತೆಂಬ
ಸುಮತಿಯನೆ ಕೊಟ್ಟು ಕಾಪಾಡೊ ಹರಿಯೇ ||೨||
ಮಂಗಳಾಂಗನೆ ದೇವ ರಂಗನಾಥನೆ ಸ್ವಾಮಿ

ವೈಕುಂಠಪತಿಯೇ। ನೀನಿವರಿಗೆ ಸನ್ಮಂಗಳವನೆ
ಕೊಟ್ಟು ಕಾಪಾಡೊ ಹರಿಯೇ॥ ಅಂಗಜಾಪಿತ ತಂದೆ
ಮುದ್ದುಮೋಹನವಿಠಲನೇ ನಿನ್ನ
ಮಂಗಳದ ಪಾದಕಮಲದಲಿ ಇವರ ಮನ ಮಗ್ನ
ವಾಗಿರಲಿ ಸತತಾ ಶ್ರೀಹರಿಯೆ ॥೩॥

41. ಹೆಸರು ಸೌ॥ ಕೃಷ್ಣವೇಣಿ ಬಾಯಿ (ರಂಗನಾಥರಾಯರ ಮಗಳು) ಅಂಕಿತ ಇಂದಿರಾರಾಧ್ಯ ವಿಠಲ

ಇಂದಿರಾರಾಧ್ಯವಿಠಲನೆ ನೀನಿವರ
ಆನಂದದಲಿ ಸತತ ಕಾಪಾಡೊ ಹರಿಯೇ ॥ಪ॥
ಕುಂದುಕೊರತೆಗಳ ಪರಿಹರಿಸಿ ಸುಖ।
ಸಾಂದ್ರ ಸುಗುಣವಂತಳ ಮಾಡಿ ಕಾಪಾಡೊ ಹರಿಯೆ ॥ಅ.ಪ॥
ದುಷ್ಟಸಂಗವ ಬಿಡಿಸಿ ಭಕ್ತಸಂಗದೊಳಿಡಿಸಿ
ಕೃಷ್ಣಮೂರುತಿ ಸತತ ಕಾಪಾಡೊ ಹರಿಯೇ।
ವಿಷ್ಣುಮೂರ್ತಿಯೆ ನಿನ್ನ ದೃಷ್ಟಿಯಿಂದಲಿ ನೋಡಿ ಭವ।
ಕಷ್ಟಗಳ ಬಿಡಿಸಿ ಕಾಪಾಡೊ ಹರಿಯೆ ॥೧॥
ಹರಿಗುರುಗಳಲಿ ಭಕ್ತಿ ಹರಿಧ್ಯಾನ ಹರಿಸೇವೆ
ಮೊದಲಾದ ಸನ್ಮತಿಯನೇ ಕೊಟ್ಟು ಕಾಪಾಡೊ ಹರಿಯೇ॥
ಗರುಡಗಮನನೆ ಶ್ರೀಶಗರ್ವಗಳ ಪರಿಹರಿಸಿ।
ಮರುತಮತದೊಳಗಿರಿಸಿ ಕಾಪಾಡೊ ಹರಿಯೆ ॥೨॥
ಸಾಧುಸಂಗದೊಳಿಟ್ಟು ಭೇದಾರ್ಥಮತಿ ಇತ್ತು।
ಮೋದಪಡಿಸುತಲಿವರ ಕಾಪಾಡೊ ಹರಿಯೇ॥
ಬಾದರಾಯಣ ತಂದೆಮುದ್ದುಮೋಹನ ವಿಠ್ಠಲನೇ ನಿನ್ನ।
ಪಾದಪದ್ಮವ ತೋರಿ ಕೃಪೆಮಾಡಿ ಸಲಹೊ ಹರಿಯೇ ॥೩॥

42. ಚಂಜೆ ರುಕ್ಮಾಂಗದರಾವ್ ಅಂಕಿತ ಶ್ರೀನಿರಾಮಯ ವಿಠಲ

ಶ್ರೀನಿರಾಮಯ ವಿಠಲನೆ ನೀನನವರತ ಪಾಲಿಸಲು
ಬೇಕು ಹರಿಯೆ ॥
ಪರಾತ್ಪರನೆ ಸರ್ವೇಶ ನಿನ್ನ ಸಾನುರಾಗದಿ
ಭಜಿಸುವ ಭಾಗ್ಯವನ್ನು ಕೊಟ್ಟು ಕಾಪಾಡಬೇಕು ಹರಿಯೇ॥

ಶ್ರೀ ನಿವಾಸನೆ ನಿನ್ನ ಶೇವೆಯನು ಕೊಟ್ಟು ಸರ್ವ
ಕಾಲದಲಿ ಕಾಪಾಡ ಬೇಕು ಹರಿಯೆ ||
ಗಾನಲೋಲನೆ ಕ್ರಿಷ್ಣ ದಾನವಾಂತಕ ಸ್ವಾಮಿ,
ಪಾಪರಾಶಿಗಳನ್ನು ಪರಿಹರಿಸಿ ಕಾಪಾಡ ಬೇಕು ಹರಿಯೇ ||
ಮಾನನಿಧಿ ಶ್ರೀಹರಿಯೇ ಮುಕ್ತಿದಾಯಕ ಕ್ರಿಷ್ಣ
ಅಜ್ಞಾನವನ್ನು ಪರಿಹರಿಸಿ ಸುಜ್ಞಾನವನ್ನು
ಕೊಟ್ಟು ಕಾಪಾಡಬೇಕು ಹರಿಯೇ ||

43. ಶ್ರೀಮತಿ ಯಮುನಾ ಬಾಯಿ (ಶ್ರೀ ರುಕ್ಮಾಂಗದರಾಯರ ಪತ್ನಿ) ಅಂಕಿತ **ಪ್ರಾಣಕಾಂತ ವಿಠಲ**

ಪ್ರಾಣಕಾಂತವಿಠಲನೆ ನೀನಿವರಿಗೆ ನಿಶ್ಚಲಭಕ್ತಿ
ಯನೆ ಕೊಟ್ಟು ಕಾಪಾಡೊ ಹರಿಯೇ ||
ಪಂಕಜೋದ್ಭವನಯ್ಯ । ವೆಂಕಟೇಶನೆ ಸ್ವಾಮಿ
ಪರಿಪಾಲಿಸಲಿ ಬೇಕೊ ಹರಿಯೇ ||
ಸೃಷ್ಟಿಕಾರಣನೆ ಗೋಪಾಲ ಶ್ರೀಕ್ರಿಷ್ಣ । ಕಷ್ಟವನು
ಪರಿಹರಿಸಿ ನಿತ್ಯದಲಿ ಕಾಪಾಡ ಬೇಕೊ ಹರಿಯೇ ||
ಭಕ್ತವತ್ಸಲನೆ ನಿತ್ಯ ಮೂರುತಿ ದೇವ ಭಕ್ತಿದಾಯಕ
ಹರಿಯೇ ನೀನಿವರ ದಯದಿ ಕಾಪಾಡೊ ಬೇಕೊ ಹರಿಯೇ ||
ಮುಕ್ತಿ ದಾಯಕ ಕ್ರಿಷ್ಣ ತಂದೆ ಮುದ್ದು ಮೋಹನ
ವಿಠಲನೆ ಹೃತ್ಕಮಲ ಮಧ್ಯದಲಿ ನೆಲೆಗೊಳ್ಳೊ ಹರಿಯೇ ಸತತ ||

44. ಗೋಪಿಬಾಯಿ (ಶ್ರೀ ರುಕ್ಮಾಂಗದರಾಯರ ತಂಗಿ) ಅಂಕಿತ **ರಾಜೀವಲೋಚನ ವಿಠಲ**

ರಾಜೀವಲೋಚನವಿಠಲನೆ । ನೀನಿವರ ।
ಈ ಜಗದಿ ಪಾಲಿಸಬೇಕೊ ಹರಿಯೆ ||ಪ||
ಅಜಪಿತನೆ ಪರಿಪಾಲಿಸಲಿಬೇಕೊ ಹರಿಯೆ ||ಅ.ಪ||
ಹರಿಯೆ ಸರ್ವೋತ್ತಮನು ಸುರರೆಲ್ಲ ಶ್ರೀ ಹರಿಯ ।
ಕಿಂಕರರು ಎಂತೆಂಬೊ ವರಮತಿಯನೇ ಕೊಟ್ಟು
ಕಾಪಾಡ ಬೇಕೊ ಹರಿಯೆ ||೧||
ಸೃಷ್ಠಿಗೊಡಯನೆ ಸ್ವಾಮಿ ಶ್ರೀ ಕೃಷ್ಣದಯದಿ
ಕಾಪಾಡ ಬೇಕೊ ಹರಿಯೆ ||

ಅಷ್ಟಮದಗಳ ಬಿಡಿಸಿ ಶಿಷ್ಟರಿವರನು ಮಾಡಿ ।
ಕರಪಿಡಿದು ಕಾಪಾಡಬೇಕೊ ಹರಿಯೆ ॥೨॥
ವಿಷ್ಣುವೈಷ್ಣವರಲ್ಲಿ ಭಕುತಿ ವಿಷಯದಲಿ ವೈರಾಗ್ಯ
ಶ್ರೀಕೃಷ್ಣನ ಭಕ್ತರಲಿ ಪ್ರೀತಿಯನೆ ಕೊಟ್ಟು
ಕಾಪಾಡ ಬೇಕೊ ಹರಿಯೆ ॥
ಕಷ್ಟತತಿಗಳ ಬಿಡಿಸಿ ಸೃಷ್ಟಿಗೊಡೆಯನೆ
ತಂದೆ ಮುದ್ದು ಮೋಹನ ವಿಠಲನೆ ಉತ್ಕೃಷ್ಟ
ಸೇವೆಯನೆ ಕೊಟ್ಟು ಕಾಪಾಡಬೇಕೊ ಹರಿಯೆ ॥೩॥

45. **ಸೌ॥ ರಾಜಮ್ಮ - (ಭೀಮಸೇನರಾಯರ ಪತ್ನಿ) ಅಂಕಿತ ನಿತ್ಯಾನಂದ ಮೂರ್ತಿ ವಿಠಲ**

ನಿತ್ಯಾನಂದಮೂರ್ತಿವಿಠಲನೆ ನೀನಿವರಿಗೆ ।
ನಿತ್ಯಾನಂದವನೆ ಕೊಟ್ಟು ಕಾಪಾಡೊ ಹರಿಯೆ ॥ಪ॥
ಮುಕ್ತಿದಾಯಕನೆ ಸರ್ವೋತ್ತಮ ಶ್ರೀಹರಿಯೆ ನಿನ್ನ ।
ಭಕ್ತರಸಂಗವನೆ ಕೊಟ್ಟು ಕಾಪಾಡೊ ಹರಿಯೆ ॥ಅ.ಪ॥
ಹಿಂದೆ ಮಾಡಿದ ಪಾಪರಾಶಿಗಳ ಪರಿಹರಿಸಿ ।
ಮುಂದೆ ಸದ್ಗತಿಗೆ ದಾರಿಯನೆ ತೋರಿ ಕಾಪಾಡೊ
ಸತತ ಹರಿಯೇ ॥ ಮಂದರೋದ್ಧರ ಮುಕುಲಸ್ವಾಮಿ ।
ಸಂದೇಹವನೆ ಪರಿಹರಿಸಿ ಕಾಪಾಡೊ ಹರಿಯೆ ॥೧॥
ಗಾನಲೋಲನೆ ಸ್ವಾಮಿ ಅರವಿಂದನಾಭನೆ ।
ದಾನವಾಂತಕ ಕೃಷ್ಣ ನೀನಿವರ ಮನದೊಳಗೆ
ನೆಲಸಿ ಕಾಪಾಡೊ ಹರಿಯೆ ॥
ಜ್ಞಾನ ಭಕ್ತಿ ವಿರಕ್ತಿ ಮೊದಲಾದ ಸದ್ಗುಣವನೇ ಕೊಟ್ಟು ।
ನೀನಿವರ ಇಹಪರದಿ ಕಾಪಾಡೊ ಸತತ ಹರಿಯೆ ॥೨॥
ಪಂಚಭೇದ ಜ್ಞಾನ ತಾರತಮ್ಯ ಮೊದಲಾದ
ಮಧ್ವಮತದ ಸಾರವನೆ ತಿಳಿಸಿ
ಸಂಚಿತಾದಿಗಳ ಪರಿಹರಿಸಿ ಕಾಪಾಡೊ ಹರಿಯೆ ॥
ಪಂಚರೂಪತ್ಮಕನೆ ಸಿರಿ ತಂದೆ ಮುದ್ದು ಮೋಹನ್ನ
ವಿಠಲನೆ । ನಿನ್ನ ಪಾದದಲಿ ನಿಶ್ಚಲ ಭಕ್ತಿಯನೆ
ಕೊಟ್ಟು ಕಾಪಾಡೊ ಹರಿಯೆ ॥೩॥

46. ಗುರುಗಳ ಮೊಮ್ಮಗ ಎನ್. ವಿ. **ಸುಂದರರಾವ್** ಅಂಕಿತ **ಸುಂದರಾಂಗ ವಿಠಲ**

ಸುಂದರಾಂಗವಿಠ್ಠಲನೆ । ನೀನಿವನ ಅಂದದಲಿ
ಪೊರೆಯಬೇಕೊ ಹರಿಯೆ ॥ಪ॥
ಪದ್ಮನಾಭನೆ ದೇವ ನೀನಿವನ । ಮಂದಮತಿಯನೆ
ಬಿಡಿಸಿ ಕಾಪಾಡಬೇಕೊ ಹರಿಯೆ ॥ಅ.ಪ॥
ಶುದ್ಧಮೂರುತಿಯೆ ಸರ್ವೇಶ । ನೀನಿವಗೆ ಸದ್ಬುದ್ಧಿ
ಯನೆ ಕೊಟ್ಟು ಸತತ ಸಲಹಬೇಕೊ ಹರಿಯೆ ॥
ಮುದ್ದು ಸಿರಿ ಕೃಷ್ಣ ನೀನಿವನ ತೊದಲ ನುಡಿಯನೆ ಕೇಳಿ
ಅನವರತ ಕಾಪಾಡಬೇಕೊ ಹರಿಯೆ ॥೧॥
ಅರವಿಂದನಾಭನೆ ಸ್ವಾಮಿ ನೀನಿವಗೆ । ವೈರಾಗ್ಯ
ಕವಚವ ತೊಡಿಸಿ ಅರಘಳಿಗೆ ಬಿಡದಂದದಲಿ
ಸಲಹ ಬೇಕೊ ಹರಿಯೇ॥
ಪರಮಪುರುಷನೆ ದೇವ । ನಿನ್ನ ನಾಮ
ಸ್ಮರಣೆ ಮರೆಯದಂದದಲಿ ಕಾಪಾಡ ಬೇಕೊ ಹರಿಯೇ ॥೨॥
ಮಂಗಳಾಂಗನೆ ದೇವ ನೀನಿವನ । ಅಘಾವಳಿಗಳನೆ
ಪರಿಹರಿಸಿ । ಸತ್ಸಂಗದಲಿಟ್ಟು ಸಲಹ ಬೇಕೊ ಹರಿಯೆ ॥
ಅಗಣಿತಮಹಿಮ ಸಿರಿತಂದೆ ಮುದ್ದು ಮೋಹನ
ವಿಠ್ಠಲನೆ ನೀನಿವನ ಹೃದಯಾಂಗಣದಲಿ ನಿನ್ನ
ನಿಜರೂಪವ ತೋರಿ ಕಾಪಾಡಬೇಕೊ ಹರಿಯೆ ॥೩॥

47. ಅಚ್ಚಮ್ಮ (ಗುರುಪತ್ನಿ) - ಅಂಕಿತ **ಸಚ್ಚಿದಾನಂದಸ್ವಾಮಿ ವಿಠಲ**

ಸಚ್ಚಿದಾನಂದಸ್ವಾಮಿವಿಠಲನೆ ನೀನಿವರಿಗೆ
ನಿಶ್ಚಲಸುಭಕ್ತಿಯನೆ ಕೊಟ್ಟು ಕಾಪಾಡೊ ಹರಿಯೆ ॥ಪ॥
ಮಚ್ಛಕೂರ್ಮ ಅನಂತಾವತಾರನೆ
ಸ್ವಚ್ಛಮತಿಯನೆ ಕೊಟ್ಟು ಕಾಪಾಡೊ ಹರಿಯೆ ॥ಅ.ಪ॥
ಕರುಣಾಸಮುದ್ರ ಶ್ರೀ ಹರಿಯೆ ನಿನ್ನ
ಚರಣ ಸೇವೆಯನೆ ಕೊಟ್ಟು ಕಾಪಾಡೊ ಹರಿಯೆ ॥
ಸಕಲ ಪಾಪಗಳೆಲ್ಲ ಪರಿಹರಿಸಿ
ಸಕಲ ಸೌಖ್ಯಗಳ ನಿಹಪರದಿ ಕೊಟ್ಟು
ಕಾಪಾಡೊ ಹರಿಯೇ ॥೧॥

ಸಕಲಜಗಜ್ಜನ್ಮಾದಿಕಾರಣನೆ ನಿನ್ನ
ನಾಮಸ್ಮರಣೆಯನು। ಸಕಲಕಾಲಗಳಲ್ಲಿ ಮಾಳ್ಪ
ಮತಿಯನೆ ಕೊಟ್ಟು ಕಾಪಾಡೊ ಹರಿಯೆ ॥೨॥
ಸಕಲೇಂದ್ರಿಯಗಳಲ್ಲಿ ಶ್ರೀಹರಿಯೆ ನಿಂತು।
ಸಕಲ ಕರ್ಮ ಪ್ರೇರಕನು ಎಂಬ ದಿವ್ಯಮತಿಯನೆ
ಕೊಟ್ಟು ಕಾಪಾಡೊ ಹರಿಯೇ॥
ಸಕಲಗುಣಪೂರ್ಣಸಕಲೇಷ್ಟಪ್ರದ ನರಹರಿಯೇ ಶ್ರೀ ಕೃಷ್ಣ
ಸಕಲ ಕರ್ಮಗಳೆಲ್ಲ ತಂದೆ ಮುದ್ದು ಮೋಹನ ವಿಠಲನ
ಪೂಜೆ ಎಂತೆಂಬ ಜ್ಞಾನವನೆ ಕೊಟ್ಟು ಸಲಹಬೇಕೊ ಹರಿಯೆ ॥೩॥

48. ಇಂದಿರಾಬಾಯಿ - ಅಂಕಿತ - ಶ್ರೀಪತಿಮೋಹನ ವಿಠ್ಠಲ

ಶ್ರೀಪತಿಮೋಹನವಿಠ್ಠಲನೆ ನೀನಿವರ।
ಪಾಪರಾಶಿಗಳೆಲ್ಲವನು ಪರಿಹರಿಸಿ ಕಾಪಾಡೊ ಹರಿಯೆ ॥
ಚಪಲ ಚಿತ್ತವನೆ ಬಿಡಿಸಿ ಕಪಟನಾಟಕ ಸ್ವಾಮಿ ನಿನ್ನ।
ಅಪರಿಮಿತ ಮಹಿಮೆಯನು ತೋರಿ ಕಾಪಾಡೊ ಹರಿಯೆ॥ಪ॥
ಹರಿಭಕ್ತಿಗುರು ಭಕ್ತಿ ಸ್ವೋತ್ತಮರ ಭಕ್ತಿ
ನಿರಂತರದಿ ಕೊಟ್ಟು ಕಾಪಾಡೊ ಹರಿಯೆ ॥
ಶಿರಿರಮಣ ಶ್ರೀಕಾಂತ ಶ್ರೀ ಹರಿಯೆ।
ಪರಮಪೂಜ್ಯನೆ ಸ್ವಾಮಿ ಕಾಪಾಡೊ ಹರಿಯೇ ॥೧॥
ಗಾನಲೋಲನೆ ಸ್ವಾಮಿ ಗರುಡವಾಹನ ಕೃಷ್ಣ।
ಜ್ಞಾನ ಭಕ್ತ್ಯಾದಿ ಸದ್ಗುಣವನೆ ಕೊಟ್ಟು
ಕಾಪಾಡೊ ಹರಿಯೆ ॥
ದಾನವಾಂತಕ ಕೃಷ್ಣ ದೀನವತ್ಸಲ ದೇವ ನಿಮ್ಮ।
ಧ್ಯಾನಾದಿಗಳ ಕೊಟ್ಟು ಕಾಪಾಡೊ ಹರಿಯೆ ॥೨॥
ಪಂಚರೂಪಾತ್ಮಕ ನಿನ್ನ ಭಕ್ತರಸಂಗವನು ಪ್ರ
ಪಂಚದೊಳಗೆ ಕೊಟ್ಟು ಕಾಪಾಡೊ ಹರಿಯೆ ॥
ಪಂಚಭೇದಜ್ಞಾನವನೆ ತಿಳಿಸಿ ಅಜ್ಞಾನವನೆ ಕಳೆದು
ಶ್ರೀ ತಂದೆ ಮುದ್ದು ಮೋಹನ ವಿಠ್ಠಲ ನಿಮ್ಮ ಪಾದ
ಭಜನೆಯನು ಅನುಗಾಲವಿತ್ತು ಕಾಪಾಡೊ ಹರಿಯೇ ॥೩॥

49. ಹೆಸರು ಸುಬ್ಬರಾವ್ ಅಂಕಿತ - **ಸದ್ಗುರುನಾಥ ಮೋಹನ ವಿಠಲ**

ಸದ್ಗುರುನಾಥಮೋಹನವಿಠಲನೆ ಶ್ರೀ ಹರಿಯೆ ನೀನಿವರ ।
ಸದಾಕಾಲಗಳಲ್ಲಿ ಸನ್ಮತಿಯನಿತ್ತು ಕಾಪಾಡೊ ಶ್ರೀ ಹರಿಯೇ॥
ಸರ್ವೇಶ ನರಹರಿಯೆ ನಿನ್ನ ಸೇವೆಯ ಕೊಟ್ಟು
ಸರ್ವಜ್ಞರಾಯರ ಮರ್ಮವ ತಿಳಿಸಿ ಕಾಪಾಡೊ ನರಹರಿಯೇ॥ಪ॥
ಅನಿಮಿತ್ತ ಬಂಧುವೆ ಸ್ವಾಮಿ ನೀನಿವನ ಸಕಲದುರಿತವಕಳೆದು ।
ಅನುಗಾಲ ಸನ್ಮುದವನಿತ್ತು ಕಾಪಾಡೊ ಶ್ರೀ ಹರಿಯೇ॥
ಮನದ ಚಂಚಲವನೆ ಪರಿಹರಿಸಿ ಹರಿಗುರುಗಳಲಿ
ದೃಢವಾದ ಭಕ್ತಿ ಭಾಗ್ಯವನೆ ಕೊಟ್ಟು ।
ವನಜನಾಭನೆಸ್ವಾಮಿ ನೀದಯದಿ ಕಾಪಾಡೊ ಶ್ರೀಹರಿಯೇ ॥೧॥
ಜ್ಞಾನ ನಾಮಕಸ್ವಾಮಿ ಸರ್ವಕಾಲದಲಿ ನಿನ್ನ ನಾಮ
ಸ್ಮರಣೆಯನು ಕೊಟ್ಟು ।
ಅ-ಜ್ಞಾನವನೆ ಪರಿಹರಿಸಿ ಸುಜ್ಞಾನಭಾಗ್ಯವನಿತ್ತು
ಪರಿಪಾಲಿಸಲಿ ಬೇಕೊ ಹರಿಯೆ ॥
ಗಾನಲೋಲನೆ ಕೃಷ್ಣ ನೀನಿವನ ಸ್ತುತಿಗೆ ವಶನಾಗಿ
ಎಂದೆನಿಸಬೇಕೊ ಸತತ ಶ್ರೀ ಹರಿಯೇ ॥೨॥
ಪಂಚಭೇದ ಜ್ಞಾನ ವರ ತಾರತಮ್ಯವನೆ ತಿಳಿಸಿ ।
ಪ್ರಪಂಚದಲಿ ನಿನ್ನ ದಾಸಾನುದಾಸರ ಸೇವೆಯಲಿ ।
ಪರಮವಿಶ್ವಾಸವನೆ ಕೊಟ್ಟು ಕಾಪಾಡೊ ಶ್ರೀ ಹರಿಯೇ ॥
ಪಂಚಬಾಣನ ಪಿತನೆ ನೀನಿವರ ಸಂಚಿತಾರ್ಥಗಳ
ಪರಿಹರಿಸಿ ಕಾಪಾಡೊ ತಂದೆ ಮುದ್ದು
ಮೋಹನ ವಿಠ್ಠಲ ನಾಮಕ ಸದ್ಗುರುನಾಥ ಮೋಹನ ವಿಠ್ಠಲಾ ॥೩॥

50. ಅಂಕಿತ **ಕಮಲಾನಂದಪ್ರದ ವಿಠಲ**

ಕಮಲಾನಂದಪ್ರದವಿಠ್ಠಲನೆ ನೀನಿವರ ಹೃದಯ
ಕಮಲದೊಳು ನಿರತ ನೆಲೆಗೊಳ್ಳೊ ಹರಿಯೆ ॥ಪ॥
ಅಂತರಂಗದಿ ನೆಲಿಸಿ ಸಕಲ ಆದಿವ್ಯಾಧಿಗಳ ಪರಿಹರಿಸಿ
ಸಂತೈಸ ಬೇಕೊ ಸತತ ಹರಿಯೇ ॥ಅ.ಪ॥
ಜ್ಞಾನದಾಯಕ ಕೃಷ್ಣ ಮಮಕುಲಸ್ವಾಮಿ

ದಾನವಾಂತಕ ದೇವ ನೀನಿವರ ಇಹಪರದಿ
ಸಲಹ ಬೇಕೊ ಹರಿಯೆ ॥
ನೀನೆ ಹೃದಯಕಮಲ ಮಧ್ಯದಲಿ ನೆಲಿಸಿ ।
ಹಾನಿವೃದ್ಧಿ ಮೊದಲಾದ ವ್ಯಾಪಾರಗಳಿಗೆಲ್ಲ ಪ್ರೇರಕನು
ನೀನೆಂಬ ಸನ್ಮತಿಯನೆ ಕೊಟ್ಟು ಕಾಪಾಡೊ ಹರಿಯೆ ॥೧॥
ಜ್ಞಾನಾಜ್ಞಾನಕೃತ ಕರ್ಮರಾಶಿಗಳೆಲ್ಲ ನಿನ್ನ
ಪ್ರೇರಣೆಯಂತೆ ಯನ್ನಿಂದಲಾದವಯ್ಯ ಹರಿಯೇ ॥
ನಾನು ಕಾರಣನಲ್ಲ ನೀನೆಕಾರಣನೆಂದು ತಿಳಿದು ನಿನ್ನ
ಧ್ಯಾನಿಸುವೆನೊ ಹರಿಯೇ ॥೨॥
ಮಾನಾಭಿಮಾನಗಳೆರಡು ನಿನ್ನ ಆಧೀನವೆಂಬ
ವರಗಳನೆ ಕೊಡಿಸಿ ವಂದಿಸುವೆನೊ ಹರಿಯೇ ॥
ದೀನವತ್ಸಲ ಸ್ವಾಮಿ ಮುಂದೆ ನೀನೆಗತಿಯೆಂದು
ನಂಬಿದೆನೊ ಹರಿಯೆ ॥
ಅಜ್ಞಾನ ಪಾಪರಾಶಿಗಳೆಲ್ಲ ಪರಿಹರಿಸಿ ಮುಂದೆ ನೀ ।
ಸುಜ್ಞಾನ ಭಕ್ತಿಮೊದಲಾದ ಸದ್ಗುಣವನೆ ಕೊಟ್ಟು
ಕೃಪೆ ಮಾಡಬೇಕೊ ಹರಿಯೆ ॥
ಸುಜ್ಞಾನಿಗಳ ಸಂಗವನೆ ಕೊಟ್ಟು ಪಂಚಭೇದ
ತಾರತಮ್ಯವ ತಿಳಿಸಿ ತಂದೆ ಮುದ್ದು ಮೋಹನ ವಿಠಲ ।
ನಿನ್ನ ಅಪರೋಕ್ಷ ಜ್ಞಾನವನೆ ಕೊಟ್ಟು ಸಂಚಿತಾ
ಗಾಮಿಕರ್ಮವ ಕಳೆದು ಸಲಹಬೇಕೊ ಹರಿಯೇ ॥೩॥

51. ಜಿ. ಭೀಮಸೇನರಾವ್, ಅಂಕಿತ - ಶ್ರೀಶಸರ್ವೇಶವಿಠಲ

ಶ್ರೀಶಸರ್ವೇಶವಿಠಲನೆ ನೀನಿವನ । ಯಲ್ಲಕಾಲದಲಿ ಕಾಪೋಡೊ
ಹರಿಯೇ ॥ಪ॥
ಪದ್ಮನಾಭನೆ ಸ್ವಾಮಿ ನೀನಿವನ ಹೃತ್ಪದ್ಮ
ದೊಳುನೆಲೆಸಿದ್ದು ಕಾಪಾಡೊ ಹರಿಯೆ ॥ಅ.ಪ॥
ವರತಾರತಮ್ಯ ಪಂಚಬೇದವೆ । ಸ್ಥಿರವೆಂಬೊಮತಿ
ಯಿತ್ತು ಕಾಪಾಡೊ ಹರಿಯೇ ॥ ಶಿರಿವರನೆ ಅನವರತ ನಿನ್ನ ಚರಣ ।
ಸ್ಮರಣೆಯನಿತ್ತು ಕಾಪಾಡೋ ಹರಿಯೇ ॥೧॥
ನಾನು ನನ್ನದುಯೆಂಬ ಹೀನ ಬುದ್ಧಿಯಬಿಡಿಸಿ । ನೀ

ನಿವನ ಸತತ ಕಾಪಾಡೋ ಹರಿಯೇ।। ದೀನಜನಮಂದಾರ ಶಾಶ್ವತ
ಕರುಣಿನೀನಿವನ ಸಾನುರಾಗದಿ ಕಾಪಾಡೊ ಹರಿಯೆ ।।೨।।
ಹರಿಗುರುಗಳಲಿ ಭಕ್ತಿಹಿರಿದಾಗಿತೊಟ್ಟು ಮಾನನಿಧಿ
ಗುರುವರನೆ ಕಾಪಾಡೊ ಹರಿಯೇ।। ಕರಿಗಿರೀಶನೆ ಸ್ವಾಮಿ
ಕರಮುಗಿದು ಬೇಡುವೆನು। ಶಿರಿ ತಂದೆಮುದ್ದುಮೋಹನ
ವಿಠಲನೆ ನೀನಿವನ ಉದ್ಧರಿಸಬೇಕೊ ಹರಿಯೆ।।೩।।

52. ಸಿ. ಕೆ. ಶ್ರೀಪಾದರಾವ್ ಸಿ. ಕೃಷ್ಣಾರಾವ್‌ರವರ ಪುತ್ರ. ಅಂಕಿತ - ಪ್ರಾಣಪತಿವಿಠಲ

ಪ್ರಾಣಪತಿವಿಠ್ಠಲನೆ ನೀನಿವರ ಪಂಚಪ್ರಾಣ ಮೊದಲಾದ
ತತ್ವೇಶರಲ್ಲಿ ನೀನಿಂತು ಕಾಪಾಡ ಬೇಕೊ ಹರಿಯೆ।।ಪ।।
ಆಧಿವ್ಯಾಧಿಗಳ ಪರಿಹರಿಸಿ ಮಂದ ಬುದ್ಧಿಯ ಬಿಡಿಸಿ
ಕಾಪಾಡೊಬೇಕೊ ಹರಿಯೆ।।ಪ।।
ಸಕಲ ಕಾಲಗಳಲ್ಲಿ ಸಕಲ ದೇಶಗಳಲ್ಲಿ ನೀನಿವರ
ಕಾಪಾಡಬೇಕೊ ಹರಿಯೇ।।ಅ.ಪ।।
ಸಕಲ ದೇವಾಂತರಾತ್ಮನೆ ಸಕಲ ಶಬ್ದವಾಚ್ಯನೆ
ಸ್ವಾಮಿ ನೀನಿವರ ಸಲಹಬೇಕೊ ಹರಿಯೇ।।೧।।
ಸಿಂಧುಶಯನನೆ ದೇವ ಅರವಿಂದನಯನ ಕಮಲ
ನಾಭನೆ ನೀನಿವರ ಸಲಹಬೇಕೊ ಹರಿಯೇ।।
ತಂದೆ ಮಕ್ಕಳನು ಪೊರೆವಂತೆ ಇಂದಿರೇಶನೆ ಬಂದು
ನೀನಿವರ ಸಲಹಬೇಕೊ ಹರಿಯೇ।।೨।।
ಪನ್ನಗಾಚಲ ನಿವಾಸ ಇನ್ನಿವರ ಪೊರೆಯುವ
ಭಾರ ನಿನ್ನದಯ್ಯ ಹರಿಯೇ।।
ಘನ್ನಮಹಿಮನೆ ತಂದೆ ಮುದ್ದು ಮೋಹನ
ವಿಠ್ಠಲನೆ। ನಿನ್ನ ಭೃತ್ಯನಿವನೆಂದು ನೀನಿವರ
ಸಲಹಬೇಕೊ ಹರಿಯೆ।।೩।।

53. ಸಿ. ಕೆ. ರಾಮಚಂದ್ರರಾವ್ (ಸಿ. ಕೆ. ರಾವ್‌ರವರ ದ್ವಿತೀಯ ಪುತ್ರ) ಅಂಕಿತ - ಮುಕ್ತಿದಾಯಕವಿಠಲ

ಮುಕ್ತಿದಾಯಕವಿಠಲನೆ ನೀನಿವನ ಕಾಪಾಡಬೇಕೊ ಹರಿಯೆ।
ರಕ್ಕಸಾಂತಕ ಕೃಷ್ಣ ಅಕ್ಕರೆಯಿಂದಲಿ ಸಲಹ ಬೇಕೊ ಹರಿಯೆ।।ಪ।।

ಸಾಕಿ ಸಲಹುವ ಭಾರ ಶ್ರೀಕಾಂತ ನಿನಗೊಪ್ಪಿಸಿಹೆ ।
ಜೋಕೆಯಿಂದಲಿ ನೀನಿವನ ಉದ್ಧರಿಸಬೇಕೊ ಹರಿಯೆ ।
ಮಾಕಮಲಾಸನಾದಿವಿನುತ ಶ್ರೀಕಳತ್ರನೆ ।
ಸಕಲ ಕಾಲಗಳಲ್ಲಿ ಕಾಪಾಡಬೇಕೊ ಹರಿಯೆ ॥೧॥
ಜ್ಞಾನಗಮ್ಯನೆ ಸ್ವಾಮಿ ಎನ್ನಮಾತನು ಲಾಲಿಸಿ ।
ನೀನಿವನ ಪಾಪಗಳ ಪರಿಹರಿಶಿ ಕಾಪಾಡಬೇಕೊ ಹರಿಯೇ ।
ಜ್ಞಾನಪೂರ್ಣನೆಸ್ವಾಮಿ ಸರ್ವಪ್ರೇರಕನಿದ್ದು
ಸಲಹ ಬೇಕೊ ಹರಿಯೆ ॥೨॥
ಮಂಗಳಾಂಗನೆಸ್ವಾಮಿ ಜಗದೊಳಗೆ ।
ಮಂಗಳವನಿತ್ತು ಕಾಪಾಡಬೇಕೊ ಹರಿಯೆ ॥
ಅಂಗಜಾಪಿತ ಕಮಲಾಕಾಂತ ತ್ರಿಗುಣವರ್ಜಿತ
ಶ್ರೀ ತಂದೆ ಮುದ್ದುಮೋಹನ್ನ ವಿಠಲ ಸರ್ವ
ಮಂಗಳವಿತ್ತು ಸಲಹೊ ಹರಿಯೇ ॥೩॥

54. ಸಿ. ಕೃಷ್ಣಮೂರ್ತಿರಾವ್. ಅಂಕಿತ - **ವರಗುರುಗೋಪಾಲವಿಠಲ**

ವರಗುರುಗೋಪಾಲವಿಠಲನೆ ನೀನಿವರ ।
ಕರುಣದಲಿ ಸಲಹಬೇಕೊ ಹರಿಯೆ ॥ಪ॥
ಮಾನಾಭಿಮಾನಗಳೆರಡು ನಿನ್ನ ಆಧೀನವೆಂಬ
ದಿವ್ಯಮತಿಯನೆ ಕೊಟ್ಟು ಕಾಪಾಡೊ ಕೃಷ್ಣಾ ॥ಅ.ಪ॥
ನರನಸಾರಥಿ ಕೃಷ್ಣಾ ನೀನಿವಗೆ ಪರಿಪರೀ ಬಂದ ।
ಕರಕರೆಯ ಬಿಡಿಸಿ ಕಾಪಾಡಬೇಕೊ ಹರಿಯೆ ॥
ಪರಮ ಭಕುತನು ಇವನು ಪರಮಾದರದಿ
ಸಲಹೊ ನಿರತ ಹರಿಯೇ ॥೧॥
ವೃಂದಾರಕರಪ್ರಿಯ ಭವವೃಂದಗಳ ಪರಿಹರಿಶಿ ।
ಮುಂದೆ ಸದ್ಗತಿ ಇತ್ತು ಕಾಪಾಡೊ ಹರಿಯೆ ॥
ಹಿಂದೆ ಮಾಡಿದ ಪಾಪರಾಶಿಗಳ ಪರಿಹರಿಶಿ
ಎಡಬಲದಿನೀ ನಿಂತು ಕಾಪಾಡೊ ಹರಿಯೆ ॥೨॥
ಮದ್ಗುರುಗಳಂತರ್ಯಾಮಿ ಶಿರಿತಂದೆಮುದ್ದು
ಮೋಹನ ವಿಠಲನೆ ಶಮದಮಾದಿ
ಸದ್ಗುಣವನೇ ಕೊಟ್ಟು ಕಾಪಾಡೊ ಹರಿಯೆ ॥

ಹೃದಯಕಮಲ ಮಧ್ಯದಿನಿಂತು ನಿನ್ನ ರೂಪವ ತೋರಿ
ಉದ್ಧರಿಸೊ ಹರಿಯೆ ||೩||

55. ಸಿ. ಕೃಷ್ಣಮೂರ್ತಿ ರಾವ್ ರವರ ಮಡದಿ. ಅಂಕಿತ - **ಕಮಲಾಕಾಂತವಿಠಲ**

ಕಮಲಾಕಾಂತವಿಠಲನೆ ನಿರ್ಮಲ ಮನವಿತ್ತು
ಸರ್ವೇಶ ಹರಿಯೆ ನೀನಿವರ ಕಾಪಾಡ ಬೇಕೊ ಹರಿಯೆ ||ಪ||
ಕಮಲಸಂಭವಪಿತನೆ ಸನ್ಮುದವನೇ ಇತ್ತು ಸತತ ಕಾಪಾಡ
ಬೇಕೊ ಹರಿಯೇ ||ಅ.ಪ||
ಜ್ಞಾನಗಮ್ಯನೆ ದೇವ ಸಕಲ ಪಾಪರಾಶಿಗಳ ಪರಿಹರಿಶಿ |
ನೀನಿವರ ಕೃಪೆ ಮಾಡಿ ಸಲಹ ಬೇಕೊ ಹರಿಯೇ ||
ಜ್ಞಾನಪೂರ್ಣನೆ ದೇವ ಸಕಲ ಪ್ರೇರಕನೆಂಬ ದಿವ್ಯ |
ಜ್ಞಾನವನೆ ಕೊಟ್ಟು ಕಾಪಾಡೊಬೇಕೊ ಹರಿಯೆ ||೧||
ಜ್ಞಾನ ಭಕುತಿವೈರಾಗ್ಯವೇ ಪರಮ ಭಾಗ್ಯವೆಂತೆಂಬ ದಿವ್ಯ |
ಜ್ಞಾನವನೆ ಕೊಟ್ಟು ಕಾಪಾಡೊ ಹರಿಯೆ ||
ದಾನವಾಂತಕ ಕೃಷ್ಣಮೂರುತಿಯೆ ನೀನಿವರ |
ಹೃದಯ ಕಮಲದಲಿ ನೆಲೆಗೊಳ್ಳೊ ಹರಿಯೇ ||೨||
ಮಂಗಳಾಂಗನೆ ದೇವ ಮನದೊಳಗೆ ನೀನಿದ್ದು |
ಸನ್ಮಂಗಳವನೇ ಕೊಟ್ಟು ಕಾಪಾಡೊ ಹರಿಯೇ ||
ರಂಗನಾಥನೆ ಸ್ವಾಮಿ ತಂದೆ ಮುದ್ದು ಮೋಹನ್ನ ವಿಠಲನೆ ನಿನ್ನ |
ಮಂಗಳ ಪಾದಕಮಲವನು ಅಂತರಂಗದಿ ತೋರಿ
ಸಲಹ ಬೇಕೊ ಹರಿಯೆ ||೩||

56. ಶ್ರೀ ಬಿ. ಗುರುರಾಜಾಚಾರ್ ಬಾಗೇಪಲ್ಲಿ ಶೇಷದಾಸರ ಮಕ್ಕಳು ಅಂಕಿತ
ಶ್ರೀ ಪ್ರಾಣನಾಥ ಮೋಹನ್ನ ವಿಠಲ

ಶ್ರೀಪ್ರಾಣನಾಥಮೋಹನ್ನ ವಿಠಲನೆ | ನೀನಿವನ
ಸರ್ವಕಾಲದಲಿ ಕಾಪಾಡೊ ಹರಿಯೇ ||ಪ||
ದಾನವಾಂತಕ ಕೃಷ್ಣ ಮುದ್ದು ಮುಖವನೆ ತೋರಿ
ಅನುಗಾಲ ನೀನಿವನ ಸಲಹಬೇಕೊ ಹರಿಯೇ ||ಅ.ಪ||
ಜ್ಞಾನಕಾರಣ ದೇವ ನೀನಿವನ ಅಜ್ಞಾನವನೆ ಪರಿಹರಿಶಿ |
ಸು-ಜ್ಞಾನ ಭಕ್ತ್ಯಾದಿಗಳನೇ ಕೊಟ್ಟು ಕಾಪಾಡೊ ಹರಿಯೆ ||
ದೀನರಕ್ಷಕಸ್ವಾಮಿ ಕರಿಗಿರಿಯವಾಸ |

ಶ್ರೀನರಹರಿಯೆ ಕೃಪೆಮಾಡಿ ಕಾಪಾಡೊ ಹರಿಯೆ ||೧||
ಪಂಚಭೇದಜ್ಞಾನ ಮುಕ್ತಿಗೆ ಕಾರಣವೆಂದು |
ನಿಶ್ಚಯದಿ ತಿಳಿವಂತೆ ಮಾಡು ಹರಿಯೇ ||
ಪಂಚಬಾಣನಪಿತನೆ ಕಮಲನಾಭನೆ ಸ್ವಾಮಿ |
ಚಂಚಲತ್ವವ ಬಿಡಿಸಿ ಏಕಾಗ್ರ ಬುದ್ಧಿಯನಿತ್ತು
ಕಾಪಾಡೊ ಹರಿಯೆ ||೨||
ತಾರತಮ್ಯ ಜ್ಞಾನ ಹರಿಗುರುಗಳಲಿ ಸದ್ಭಕ್ತಿ
ಯನೆ ಕೊಟ್ಟು ಕಾಪಾಡೊ ಹರಿಯೇ ||
ಶ್ರೀರಮಣ ಸರ್ವೇಶ ಪ್ರಾಣನಾಥನೆಸ್ವಾಮಿ
ನೀನಿವನ ಹೃದಯಕಮಲದಲಿ ತೋರಿ
ಉದ್ಧರಿಸ ಬೇಕೊ ತಂದೆ ಮುದ್ದುಮೋಹನ್ನ ವಿಠಲನೆ
ದೇವಾ ||೩||

57. ಭೀಮಸೇನರಾವ್. ಅಂಕಿತ - ರಮಾಲೋಲವಿಠಲ

ರಮಾಲೋಲವಿಠಲನೇ ನೀನಿವರಿಗೇ ನಿರ್ಮಲ |
ಮನವನೇ ಕೊಟ್ಟು ನಿತ್ಯದಲಿ ಕಾಪಾಡಬೇಕೊ ಹರಿಯೇ ||ಪ||
ರಮಾರಮಣಮುದ್ದುಗುರುಗಳಂತರ್ಯಾಮಿ ನೀನಿವರಿಗೆ
ಜ್ಞಾನ ಭಕ್ತಿವಿರಕ್ತಿಯನೇ ಕೊಟ್ಟು ನಿತ್ಯದಲಿ
ಕಾಪಾಡಬೇಕೊ ಹರಿಯೇ ||ಅ.ಪ||
ಇಂದಿರೇಶನೆ ದೇವ ಮಂದರೋದ್ಧರ ಕೃಷ್ಣ |
ಹಿಂದೆ ಮಾಡಿದ ಪಾಪವೃಂದಗಳ ಪರಿಹರಿಸಿ
ಕಾಪಾಡ ಬೇಕೊ ಹರಿಯೇ ||೧||
ಮಾಧವನೆ ಮಧ್ವೇಶ ಮಮಕುಲಸ್ವಾಮಿ ನೀನಿವರಿಗೆ
ನಿರ್ಮಲಮನವನೇ ಕೊಟ್ಟು ಕಾಪಾಡಬೇಕೊ ಹರಿಯೆ ||
ಯಾದವೇಶನೆ ಹರಿಯೇ ನೀನಿವರಿಗೇ ಸನ್ಮುದ
ಕೊಟ್ಟು ಕಾಪಾಡ ಬೇಕೊ ಹರಿಯೇ ||೨||
ರಂಗನಾಥನೆ ದೇವ ಸಾಧುಸಂಗವ ಕೊಟ್ಟು
ನೀನಿವರ ಕಾಪಾಡಬೇಕೊ ಹರಿಯೇ ||
ಮಂಗಳಾತ್ಮಕ ಕೃಷ್ಣ ಮುಕ್ತಿದಾಯಕ ಸ್ವಾಮಿ
ಶಿರಿತಂದೆ ಮುದ್ದು ಮೋಹನ ವಿಠಲನೇ ನೀನಿವರ
ನಿತ್ಯದಲಿ ಕಾಪಾಡಬೇಕೊ ಹರಿಯೇ ||೩||

58. ಲಲಿತಾಬಾಯಿ ಅಂಕಿತ - ಶ್ರೀ ಇಂದಿರಾಲೋಲ ವಿಠಲ

ಶ್ರೀ ಇಂದಿರಾಲೋಲವಿಠಲನೇ ನೀನಿವರಿಗೆ ।
ಇಂದಿನಾರಭ್ಯ ಆರೋಗ್ಯಭಾಗ್ಯವನೆ ಕೊಟ್ಟು
ಸತತ ಕಾಪಾಡೊ ಹರಿಯೇ ।।ಪ।।
ಮಂದರೋದ್ಧರ ಕೃಷ್ಣ ನೀನಿವರ । ಮನ್ನಿಸಿ ಕರಪಿಡಿದು
ನೀನುದ್ಧರಿಸಿ ಕಾಪಾಡಬೇಕೊ ನರಹರಿಯೇ ಸತತ ।।ಅ.ಪ।।
ಗಾನಲೋಲನೆ ಸ್ವಾಮಿ ದಾನವಾಂತಕ ಕೃಷ್ಣ
ನೀನಿವರ । ಮನದೊಳಗೆ ನೆಲಿಸಿ ಸನ್ಮೋದವನೆ ಕೊಟ್ಟು
ಸತತ ಕಾಪಾಡಬೇಕೊ ಹರಿಯೆ ।।
ಮಾನನಿಧಿ ಶ್ರೀ ಕೃಷ್ಣ ಮಮಕುಲಸ್ವಾಮಿ ದೀನ । ಬಂಧುವೆ ದೇವ
ಸಕಲ ಪಾಪ ಪರಿಹರಿಸಿ ನಿನ್ನ ನಾಮಸ್ಮರಣೆಯನೆ
ಕೊಟ್ಟು ಕಾಪಾಡೊ ಹರಿಯೆ ।।೧।।
ನಾನು ನನ್ನದು ಎಂಬ ಅಜ್ಞಾನವನೆ ಪರಿಹರಿಸಿ ।
ನೀನು ನಿನ್ನದು ಎಂಬ ದಿವ್ಯಜ್ಞಾನವನೆ ಕೊಟ್ಟು
ಅನವರತ ಕಾಪಾಡುವ ಭಾರ ನಿನ್ನದೊ ಹರಿಯೇ ।।
ಜ್ಞಾನಗಮ್ಯನೆ ಕೇಳು ನೀನಿವರಿಗೆ ಸುಜ್ಞಾನ ಭಕ್ತಿ
ವೈರಾಗ್ಯವನೆ ಕೊಟ್ಟು ಕಾಪಾಡೊಬೇಕೊ ಹರಿಯೇ ।।೨।।
ಗುರುಸೇವೆ ಹರಿಸೇವೆ ಪತಿಸೇವೆ ಮೊದಲಾದ
ಸೇವೆಯನೆ ಕೊಟ್ಟು । ಕಾಮಿತಾರ್ಥವನಿತ್ತು ಸತತ ಕಾಪಾಡೊ ಹರಿಯೇ ।।
ಶಿರಿರಮಣ ತಂದೆ ಮುದ್ದು ಮೋಹನ್ನ ವಿಠಲನೆ
ನಿನ್ನಽನನ್ಯಾಚರಣ । ಸೇವೆಯನೆ ಕೊಟ್ಟು ನೀನಿವರಿಗೆ
ಸನ್ಮಂಗಳವನೇ ಕೊಟ್ಟು ಕಾಪಾಡೊ ಹರಿಯೇ ।।೩।।

59. ಸಿ. ಆನಂದರಾವ್, ಅಂಕಿತ - ಪದ್ಮವಲ್ಲಭ ವಿಠಲ

ಪದ್ಮವಲ್ಲಭವಿಠಲನೆ ನೀನಿವರ ।
ಬುದ್ಧ್ಯಾದಿಂದ್ರಿಯಗಳಲಿ ನೆಲಿಸಿ ।
ಮಧ್ವರಮಣನೆ ಸತತ ಕಾಪಾಡೊ ಹರಿಯೆ ।।ಪ।।
ಶುದ್ಧಮೂರುತಿ ನಿನ್ನಪಾದ ಪದ್ಮದಲಿ ಸದ್ಭಕ್ತಿಯನೆ ।
ಕೊಟ್ಟು ಕಾಪಾಡೊ ಹರಿಯೇ ।।ಅ.ಪ।।
ಕರುಣ ಮೂರುತಿ ನಿನ್ನ ಚರಣ । ಧ್ಯಾನವ ನಿತ್ತು

ಸತತದಲಿ ನಿನ್ನ ನಾಮಸ್ಮರಣೆಯನೆ ನುಡಿಸಿ
ಕಾಪಾಡ ಬೇಕೊ ಹರಿಯೆ ||
ಸರಸಿಜಾಸನವಂದ್ಯ | ಮರುಮತಸಾರ
ಸುಜ್ಞಾನವನೆ ಕೊಟ್ಟು |
ಪರಮಪಾವನ ಮೂರ್ತಿ ಕಾಪಾಡೊ ಹರಿಯೇ ||೧||
ಇಂದಿರೇಶನೆ ನಿನ್ನ ಚೆಂದದಾ ಅವತಾರ ರೂಪಗಳ |
ಸುಂದರಾಕೃತಿಯ ಧ್ಯಾನವನೆ ಕೊಟ್ಟು ಕಾಪಾಡೊ ಹರಿಯೆ ||
ಕಂದರ್ಪಜನಕನೇ ಕರುಣಸಾಗರ ಮೂರ್ತಿ ಮನ |
ಮಂದಿರದಿ ನೆಲಿಸಿ ಕಾಪಾಡೊ ಹರಿಯೆ ||೨||
ದಾಸಜನಪ್ರೀಯ ನಿನ್ನ ಪಾದದಾಸ್ಯವನಿತ್ತು |
ಘಾಸಿಗೊಳಿಸದೆ ಸತತ ಕಾಪಾಡೊ ಹರಿಯೆ ||
ವಾಸುದೇವನೆ ತಂದೆಮುದ್ದುಮೋಹನ್ನವಿಠಲನೆ ಇವರ ಹೃದಯದಲಿ |
ವಾಸವಾಗಿದ್ದು ಸತತದಲಿ ಕಾಪಾಡೊ ಹರಿಯೆ ||೩||

60. ಸೇತು ಬಾಯಿಯ ದೊಡ್ಡ ಮಗ ಸಿ. ವೆಂಕಟರಾವ್
ಅಂಕಿತ - ಲಕ್ಷ್ಮೀಮನೋಹರ ವಿಠಲ

ಲಕ್ಷ್ಮೀಮನೋಹರವಿಠ್ಠಲನೆ ನೀನಿವರ |
ಈಕ್ಷಿಸುತ ಕರುಣದಲಿ ಕಾಪಾಡೊ ಹರಿಯೇ ||ಪ||
ಪಕ್ಷಿವಾಹನ ದೇವ ಪರಮಪುರುಷನೆ ಸ್ವಾಮಿ |
ಅಕ್ಷರಾತ್ಮಕ ಶ್ರೀಶ ಕಾಪಾಡೊ ಹರಿಯೇ ||ಅ||
ದೀನಜನಮಂದಾರ ದಾನವಾಂತಕ ಕೃಷ್ಣ
ಗಾನಲೋಲನೆ ನಿತ್ಯ ಕಾಪಾಡೊ ಹರಿಯೇ ||
ಮಾನಾಭಿಮಾನದೊಡೆಯನೆ ಸರ್ವಲೋಕೇಶ
ಜನ್ಮಭಕ್ತಿಯ ಕೊಟ್ಟು ಕಾಪಾಡೊ ಹರಿಯೇ ||೧||
ಜನ್ಮಜನ್ಮಾಂತರದ ಪಾಪ ರಾಶಿಯ ಕಳೆದು |
ನಿರ್ಮಲದ ಮತಿಯಿತ್ತು ಕಾಪಾಡೊ ಹರಿಯೇ ||
ಬ್ರಹ್ಮಾಂಡನಾಯಕನೆ ಬ್ರಹ್ಮಜನಕನೆ ದೇವ |
ಕರ್ಮಗಳ ಪರಿಹರಿಸಿ ಕಾಪಾಡೊ ಹರಿಯೆ ||೨||
ಗುರುಮಧ್ವರಾಯರ ಕರುಣಕವಚವನೆ ತೊಡಿ ಸುತಲಿ |
ಗುರುಭಕ್ತಿಯನೆ ಕೊಟ್ಟು ಕಾಪಾಡೊ ಹರಿಯೇ ||

ಶಿರಿನಾಥ ಶ್ರೀತಂದೆ ಮುದ್ದು ಮೋಹನ ವಿಠ್ಠಲನೆ ನಿನ್ನ
ಶಿರಿ ಚಾರು ಚರಣವ ತೋರಿ ಸರ್ವಪ್ರಕಾರದಲಿ
ಕಾಪಾಡೊ ಹರಿಯೇ ||೩||

61. ಸೇತೂ ಬಾಯಿಯ ಮಗಳು **ರಾಜೀಬಾಯಿ,** ಅಂಕಿತ - **ಲಕ್ಷ್ಮೀನಾಥ ವಿಠಲ**

ಲಕ್ಷ್ಮೀನಾಥವಿಠಲನೆ ನೀನಿವರಿಗೆ।
ಅಕ್ಷಯ ಸುಭಾಗ್ಯವನೆ ಕೊಟ್ಟು ಕಾಪಾಡೊ ಹರಿಯೇ||ಪ||
ಲಕ್ಷ್ಮೀರಮಣನೇ ನೀನಿವರ ಕುಕ್ಷಿಯೊಳಗೆ ನೆಲಿಸಿ
ಸತತ ಕಾಪಾಡೊ ಹರಿಯೆ ||ಅ.ಪ||
ಮಂಗಳಾಂಗನೆ ಸ್ವಾಮಿ ಪದ್ಮನಾಭನೆ ದೇವ ಸುಜನ।
ಸಂಗವನೆ ಕೊಟ್ಟು ಸತತ ಕಾಪಾಡೊ ಹರಿಯೇ ||
ರಂಗನಾಥನೆ ದೇವ ಅನವರತ ಸನ್ಮಂಗಳವ।
ನೀನಿತ್ತು ಕೃಪೆ ಮಾಡಿ ಸಲಹಬೇಕೊ ಹರಿಯೆ ||೧||
ದೀನನಾಥನೆ ಸ್ವಾಮಿ ಹಗಲಿರಳು ನಿನ್ನ। ನಾಮಸ್ಮರಣೆ
ಯನು ಕೊಟ್ಟು ಕಾಪಾಡೊ ಹರಿಯೆ ||
ಸರಸಿಜೋದ್ಭವನಯ್ಯಪರಮಪುರುಷನೆ ಸ್ವಾಮಿ
ಪರಿಪರಿಯ ಕಷ್ಟಗಳ ಬಿಡಿಸಿ। ಅನುಗಾಲ ಸಲಹ
ಬೇಕೊ ಹರಿಯೆ ||೨||
ಜ್ಞಾನ ಭಕ್ತಿ ವಿರಕ್ತಿಮೊದಲಾದ ಸಾಧನವ ನೀನಿತ್ತು।
ದೀನವತ್ಸಲ ಸ್ವಾಮಿ ಸಲಹಬೇಕೂ ಸತತ ||
ಜ್ಞಾನನಿಧಿ ದಾನವಾಂತಕ ತಂದೆ ಮುದ್ದುಮೋಹನ
ವಿಠಲನೆ ಸಾನುರಾಗದಿ ಸಲಹೊ ಸತತ ||೩||

62. ರಾಜೀಬಾಯಿಯ ಮಗ **ನರಸಿಂಗರಾವ್** ಅಂಕಿತ - **ಶ್ರೀ ಕರಾರ್ಚಿತ ವಿಠಲ**

ಶ್ರೀ ಕರಾರ್ಚಿತವಿಠಲನೆ ನೀನಿವರ। ಕಾಕುಮತಿಯನೆ
ಬಿಡಿಸಿ ವಿವೇಕಬುದ್ಧಿಯ ಕೊಟ್ಟು ಕಾಪಾಡೊ ಹರಿಯೆ ||ಪ||
ಮಾಕಳತ್ರನೆ ಇವರ ಮಮಕಾರವನೆ ಬಿಡಿಸಿ।
ಜೋಕೆಯಿಂದಲಿ ಸತತ ಕಾಪಾಡೊ ಹರಿಯೆ ||ಅ.ಪ||
ಅರವಿಂದನಾಭನೆ ಅಖಿಲರಕ್ಷಕ ದೇವ।
ಪರಮಪಾವನ ಮೂರ್ತಿ ಕಾಪಾಡೊ ಹರಿಯೆ ||

ಗುರುಗಳಂತರ್ಯಾಮಿ ದುರ್ಗುಣಗಳನೆ ಬಿಡಿಸಿ
ಸರ್ವಕಾಲದಿ ನಿನ್ನ ನಾಮಸ್ಮರಣೆಯನೆ ಇತ್ತು
ಕಾಪಾಡೊ ಹರಿಯೆ ||೧||
ಜಾನಕೀವಲ್ಲಭನೆ ಜ್ಞಾನಭಕ್ತಿಯನಿತ್ತು
ಮಾನಸದಿ । ನೀನಿಂತು ಕಾಪಾಡೊ ಹರಿಯೆ ||
ದಾನವಾಂತಕ ಕೃಷ್ಣ ನೀನಿವರ ದುರಿತರಾಶಿಗಳ ಪರಿಹರಿಸಿ ।
ಜ್ಞಾನಗಮ್ಯನೆ ಸತತ ಕಾಪಾಡೊ ಹರಿಯೆ ||೨||
ಭಕ್ತವತ್ಸಲ ನಿನ್ನ ಭಕ್ತಜನಸಂಗದೊಳಿರಿಸಿ ।
ವಿ-ರಕ್ತ್ಯಾದಿ ಸಾಧನವನಿತ್ತು ಕಾಪಾಡೊ ಹರಿಯೆ ||
ಮುಕ್ತಿದಾಯಕ ತಂದೆ ಮುದ್ದುಮೋಹನ ವಿಠಲನೇ ನಿನ್ನ ಪಾದ
ಭಕ್ತಿಯ ನಿತ್ತು ಹೃತ್ಕಮಲದಲಿ ನೆಲಸಿ ಕಾಪಾಡೊ ಹರಿಯೆ ||೩||

63. ರಾಜೀಬಾಯಿ ಮಗಳು ಎನ್. ಎಸ್. ಕಮಲಾಬಾಯಿ, ಅಂಕಿತ - **ಸುಖಾತ್ಮಕರಾಮವಿಠಲ**

ಸುಖಾತ್ಮಕರಾಮವಿಠಲನೆ ನೀನಿವರಿಗೆ ಸರ್ವ ।
ಸುಖವನೆ ಕೊಟ್ಟು ಕಾಪಾಡೊ ಹರಿಯೆ ||ಪ||
ನಖ ಮೊದಲಾದ ಸರ್ವೇಂದ್ರಿಯುಗಳಲಿ ನೀನಿದ್ದು ।
ಖಗರಾಜಗಮನನೆ ಕೃಷ್ಣ ಕಾಪಾಡೊ ಹರಿಯೇ ||ಅ.ಪ||
ಮಂದರೋದ್ಧರ ಕೃಷ್ಣ ನೀನಿವರಿಗೆ ಆನಂದತೀರ್ಥರ
ಮತದಿ ರತಿಯನೆ ಕೊಟ್ಟು ಕಾಪಾಡೊ ಹರಿಯೇ ||
ಸಿಂಧು ಶಯನನೆ ದೇವ ಅರವಿಂದನಾಭನೆ ।
ತಂದೆಯಂತೆ । ನೀನಿವರ ಕಾಪಾಡೊ ಹರಿಯೆ ||೧||
ಪನ್ನಗಾದ್ರಿನಿವಾಸ ನೀನಿವರ । ಚನ್ನಾಗಿ ಪಾಲಿಸಲಿ
ಬೇಕೊ ಹರಿಯೆ ||
ಘುನ್ನ ಮಹಿಮನೆ ಸ್ವಾಮಿ ನಿನ್ನ ಉನ್ನತದ । ರೂಪವನು
ಹೃದಯದಿ ತೋರಿ ಕಾಪಾಡೊ ಹರಿಯೆ ||೨||

ಭಕ್ತವತ್ಸಲನೆ ಸ್ವಾಮಿ ನಿತ್ಯ ಮುಕ್ತನೆ ದೇವ ।
ಭಕ್ತರಾಸಂಗದಲಿರಿಸಿ ನಿತ್ಯದಲಿ ಕಾಪಾಡೊ ಹರಿಯೆ ||
ಮುಕ್ತಿದಾಯಕ ತಂದೆ ಮುದ್ದು ಮೋಹನ ವಿಠಲನೆ ನೀನಿವರ ।
ಭಕ್ತಿ ಗೊಲಿದು ಸತತ ಸನ್ಮಾರ್ಗದಲಿಟ್ಟು
ಕಾಪಾಡೊ ಹರಿಯೇ ||೩||

64. ಆರ್ಕಾಟು ಶೇಷಗಿರಿರಾಯರ ಮಗಳು ಸೇತೂಬಾಯಿ, ಅಂಕಿತ - ಮಾಧವಮೋಹನ ವಿಠಲ

ಮಾಧವಮೋಹನವಿಠಲನೆ ನೀನಿವರ ।
ಮೋದದಿಂದಲಿ ಕಾಪಾಡೊ ಹರಿಯೇ ॥ಪ॥
ಸಾಧುಸಂಗದಲಿರಿಸಿ ಭೇದಾರ್ಥಮತಿ ಇತ್ತು ।
ಶ್ರೀಧರನೆ ಕರುಣದಲಿ ಕಾಪಾಡೊ ಹರಿಯೇ ॥ಅ.ಪ॥
ಜ್ಞಾನಗಮ್ಯನೆ ನಿನ್ನ ಪಾದಧ್ಯಾನವನಿತ್ತು ।
ಶ್ರೀನಿಧಿಯೆ ಕರುಣದಲಿ ಕಾಪಾಡೊ ಹರಿಯೇ ॥
ಮಾನನಿಧಿ ಶ್ರೀ ಕೃಷ್ಣ ಮಮಕಾರವನೆ ಬಿಡಿಸಿ ।
ಗಾನಲೋಲನೆ ಕರುಣದಲಿ ಕಾಪಾಡೊ ಹರಿಯೆ ॥
ಮಂಗಳಾಂಗನೆ ನಿನ್ನ ಮಂಗಳವನೇ ಕೊಟ್ಟು ।
ಅಂತರಂಗದಲಿ ನಿಲಿಸಿ ಕಾಪಾಡೊ ಹರಿಯೇ ॥
ರಂಗನಾಥನೆ ಪತಿಯೇ ಪರದೈವ ಎಂತೆಂಬ
ಮತಿಯನೆ ಕೊಟ್ಟು ।
ಗಂಗೆಪಿತ ಸರ್ವತ್ರದಲಿ ಕಾಪಾಡೊ ಹರಿಯೇ ॥೨॥
ಸಕಲ ತತ್ವದಸಾರ ಗುರುದ್ವಾರದಿಂ ತಿಳಿಸಿ
ಮುಕುತಿದಾಯಕ ಕೃಷ್ಣ ಕಾಪಾಡೊ ಹರಿಯೇ ॥
ಸಕಲೇಷ್ಟದಾಯಕ ತಂದೆ ಮುದ್ದು ಮೋಹನ
ವಿಠ್ಠಲನೆ ಇವರ ಹೃದಯದಲಿ ನೆಲಸಿ ಕಾಪಾಡೊ ಹರಿಯೇ ॥೩॥

65. ಶೇಷದಾಸರ - ಭಾವ ಮೈದುನ - ವೆಂಕಟರಮಣದಾಸರು ಬಾಗೇಪಲ್ಲಿ ಅಂಕಿತ - ಸರ್ವೇಶ ವಿಠಲ

ಸರ್ವೇಶ ವಿಠಲ ನೀ ಸಲಹ ಬೇಕಿವನಾ ॥ಪ॥
ಶರ್ವಾದಿಗಳ ವಂದ್ಯ ಸತತ ಹರಿಸ್ಮರಣೆಯಲಿ ॥ಅ.ಪ॥
ಏನು ಮಾಡುವ ಕರ್ಮ ನೀನೆ ಮಾಡಿಪೆ ಎಂಬೊ ।
ಜ್ಞಾನವನು ಕೊಟ್ಟಿವನ ಸಲಹ ಬೇಕೋ ।
ದಾನವಾಂತಕ ನೀನು ದೀನ ಜನ ಸುರಧೇನು
ಗಾನಲೋಲನೆ ಇವನ ಧ್ಯಾನದಿಂದಗಲಿಸದೆ ॥೧॥
ನಿನ್ನವಾರಲಿಯಿವಾಗಿನ್ನು ರತಿಯನೆ ಕೊಟ್ಟು ।
ನಿನ್ನವಾನಿವನೆಂದು ತಿಳಿಯಬೇಕೊ ॥
ಅನ್ಯರ್ಧ್ವಂಬಲ ಬಿಡಿಸಿ ಅನ್ಯೋನ್ಯಮನವಿರಿಸಿ ।

ಘನಜ್ಞಾನವನು ಕೊಡು ಗುಣಪೂರ್ಣಧೊರೆ ಇವಗೆ ॥೨॥
ಆಧಿವ್ಯಾಧಿವುನ್ಮಾದ ವಿಭ್ರಮು ಕಳೆದು ।
ಸಾಧುಗಳ ಸಹವಾಸ ವೊದಲು ಕೊಡು ಇವಗೆ ॥
ವೇದವಂದಿತ ತಂದೆ ಮುದ್ದುಮೋಹನ ವಿಠಲ
ಹೃದಯಕಮಲದಿ ಪೊಳೆದು ವದನದಲಿನಲಿಯುತಾ ॥೩॥

66. ಭಾಗೀರಥಮ್ಮ, ಅಂಕಿತ - ಪ್ರಾಣಮಯಪ್ರದ್ಯುಮ್ನವಿಠಲ

ಪ್ರಾಣಮಯಪ್ರದ್ಯುಮ್ನವಿಠಲನೆ ನೀನಿವರ
ಕಾಪಾಡೊ ಹರಿಯೇ ॥ಪ॥
ದಾನವಾಂತಕ ಕೃಷ್ಣ ಜ್ಞಾನಗಮ್ಯನೆ ಸ್ವಾಮಿ ।
ನೀನಿವರ ಅನುಗಾಲ ಕಾಪಾಡೊ ಹರಿಯೇ ॥ಅ.ಪ॥
ಮಂಗಳಾಂಗನೆ ಸ್ವಾಮಿ ।
ಮದನಜನಕನೆ ದೇವ ।
ಅಂಗಜಾಪಿತ ಕಾಳಿಂಗ ಮರ್ದನನೆ ಕಾಪಾಡೊ ಹರಿಯೆ ॥
ರಂಗನಾಥನೆ ಸ್ವಾಮಿ ನಿನ್ನ ಸ್ಮರಣೆಯನು ಕೊಟ್ಟು
ಮಂಗಳಾತ್ಮಕ ಕೃಷ್ಣ ಕಾಪಾಡೊ ಹರಿಯೆ ॥೧॥
ಪಾಪರಾಶಿಗಳನೆಲ್ಲವನು ಪರಿಹರಿಸಿ
ಕೋಪ ವೊದಲಾದ ದುರ್ಗುಣವ ಬಿಡಿಸಿ ಕಾಪಾಡೊ ಹರಿಯೇ ॥
ಆಪದ್ಬಾಂಧವನೆ ಕೃಷ್ಣ ಅನಾಥ ರಕ್ಷಕನೆ ।
ಕೃಪೆ ಮಾಡಿ ಅನುಗಾಲ ಕಾಪಾಡೊ ಹರಿಯೇ ॥೨॥
ಜ್ಞಾನಭಕುತಿ ವಿರಕುತಿಗಳನೆ ಕೊಟ್ಟು
ನೀನಿವರ ಅನುಗಾಲ ಕಾಪಾಡೊ ಹರಿಯೆ ॥
ಗಾನಲೋಲನೆ ಕೃಷ್ಣ ಮುಮುಸ್ವಾಮಿ ।
ದೀನರಕ್ಷಕ ತಂದೆ ಮುದ್ದು ಮೋಹನ್ನ ವಿಠಲನೇ ।
ನಿನ್ನ ಪದ ಧ್ಯಾನವನೆ ಇತ್ತು ಕಾಪಾಡೊ ಹರಿಯೆ ॥೩॥

ಗುರುಗಳ ಎರಡನೇ ಮಗನ ಹೆಂಡತಿ ಭಾಗೀರಥಮ್ಮ ಇವರಿಗೆ ಕೊಟ್ಟ ಅಂಕಿತ]

67. ಚಿತ್ರದುರ್ಗದ ಪ್ಲೀಡರು ದಿವಂಗತ ಎಂ. ಬಿ. ಕೃಷ್ಣರಾಯರ ಮನೆಯವರು ಹೆಸರು ಸರಸಮ್ಮ, ಅಂಕಿತ - ರಮಾವಲ್ಲಭವಿಠಲ

ರಮಾವಲ್ಲಭವಿಠಲನೇ ನೀನಿವರ । ಸದಾನುರಾಗದಲಿ
ಸಲಹ ಬೇಕೊ ಹರಿಯೇ ॥ಪ॥
ಪದ್ಮನಾಭನೆ ಸ್ವಾಮಿ ನಿನ್ನ ಪದಪದ್ಮದಲಿ ಇವರ

ಮನನಿಲಿಸಿ ಸತತ ಸಲಹೊ ಹರಿಯೆ ||ಅ.ಪ||
ಕಂದರ್ಪಪಿತನೆ ನೀನಿವರ | ಕುಂದುಗಳ ಪರಿಹರಿಸಿ |
ಅಂದದಲಿ ಕಾಪಾಡೊ ಹರಿಯೆ ||
ಇಂದಿರೇಶನೆ ಸರ್ವರಂತಯಾಮಿ ಎಂತೆಂಬ
ದಿವ್ಯಜ್ಞಾನವನೆ ಕೊಟ್ಟು ಕಾಪಾಡೊ ಹರಿಯೇ ||೧||
ಪದ್ಮಸಂಭವಪಿತನೆ ಶ್ರೀ ಮಧ್ವಶಾಸ್ತ್ರದ ಸಾರವನೆ ತಿಳಿಸಿ
ಶುದ್ಧಮತಿಯನೆ ಕೊಟ್ಟು ಕಾಪಾಡೊ ಹರಿಯೇ ||
ಪದ್ಮನಾಭನೆ ಕೃಷ್ಣ ಪಂಚಭೇದವನೆ ತಿಳಿಸಿ ಹೃ
ತ್ಪದ್ಮದಲಿ ನಿನ್ನ ದಿವ್ಯ ರೂಪವ ತೋರಿ ಸತತ
ಉದ್ಧರಿಸ ಬೇಕೊ ಹರಿಯೇ ||೨||
ಕಡಲ ಶಯನನೆ ದೇವ | ಕಡುಕರುಣಿ ನೀನಿವನೆಂದು
ಬಿನ್ನೈಸಿದೆನೊ ಸ್ವಾಮಿ ನೀನಿವರ |
ವಡಲೊಳಗಿಪ್ಪ ಪಾಪರಾಶಿಗಳ ಪರಿಹರಿಸಿ
ಕಾಪಾಡೊ ಹರಿಯೆ ||
ತಡವ ಮಾಡದಲೆ ನೀನಿವರಿಗೆ | ದೃಢಭಕ್ತಿವೈರಾಗ್ಯ
ಮೊದಲಾದ ಸುಗುಣವನೆ ಇತ್ತು ಸಲಹ ಬೇಕೊ
ಸಿರಿ ತಂದೆ ಮುದ್ದು ಮೋಹನ ವಿಠಲನೆ ಸ್ವಾಮಿ ||೩||

68. ರಾಜಮ್ಮ (ಸರಸಮ್ಮನ ಮಗಳು) ಅಂಕಿತ - **ವೈಕುಂಠವಾಸವಿಠಲ**

ವೈಕುಂಠವಾಸವಿಠಲನೆ ನೀನಿವರಿಗೆ | ಅನುಗಾಲ |
ಸಕಲ ಸೌಭಾಗ್ಯವ ನಿತ್ತು ಕಾಪಾಡೊ ಹರಿಯೇ ||ಪ||
ಅಕಳಂಕವಾದ ಭಕ್ತಿ ಜ್ಞಾನವನೆ ಇತ್ತು |
ಭಕುತಜನರೊಳಗಿಟ್ಟು ಕಾಪಾಡೊ ಹರಿಯೇ ||ಅ||
ಬಾಲಕೃಷ್ಣನೆ ದೇವ ನೀನಿವರಿಗೆ |
ಶೀಲಗುಣಗಳ ಕೊಟ್ಟು ಕಾಪಾಡೊ ಹರಿಯೆ ||
ಕಾಲಕಾಲಕೆ ನಿನ್ನ ನಾಮಸ್ಮರಣೆಯನೆ ನುಡಿಸಿ
ಸತತ ಕಾಪಾಡೊ ಹರಿಯೆ ||೧||
ಪತಿ ಸೇವೆ ಅನುಗಾಲ ಹಿತದಿಂದ ಮಾಳ್ಪಂತೆ
ಸನ್ಮತಿಯನೇ ಇತ್ತು ಕಾಪಾಡೊ ಹರಿಯೇ ||
ಪತ್ಯಂತರ್ಗತನೆ ಎನ್ನಂತರ್ಗತನೆಂದು |
ಸಂಚಿಂತಿಪಜ್ಞಾನವನೆ ಕೊಟ್ಟು ಕಾಪಾಡೊ ಹರಿಯೆ ||೨||
ಸಾರತರವಾದ ವಾಯುಮತ ತತ್ವವನು |

ಶ್ರೀರಮೇಶನ ತಿಳಿಸಿ ಕಾಪಾಡ ಬೇಕೊ ಹರಿಯೆ ॥
ಸರಸಿಜಾಂಬಕ ಸಿರಿ ತಂದೆ ಮುದ್ದು ಮೋಹನ ವಿಠಲನೆ ನೀನಿವರ ಹೃದ
ಯಾರವಿಂದದಲಿ ನಿನ್ನ ಬಿಂಬ ರೂಪವ ತೋರಿ
ಸತತ ಕಾಪಾಡೊ ಹರಿಯೇ ॥೩॥

69. ಡಿ. ರಾಮರಾವ್ ಅಂಕಿತ - **ಸತ್ಯೇಶ ಮೋಹನ ವಿಠಲ**

ಸತ್ಯೇಶಮೋಹನವಿಠಲನೆ ನೀನಿವರಿಗೇ ।
ಮುಕ್ತಿಪಥವನೆ ತೋರಿ ಸಲಹಬೇಕೋ ಹರಿಯೆ ॥ಪ॥
ಕಂತು ಜನಕನೆ ನಿನ್ನ ಅಂತರಂಗದಿ ಭಜಿಸುವ
ಭಾಗ್ಯವನೆ ಕೊಟ್ಟು ಕಾಪಾಡೊ ಹರಿಯೇ ॥ಅ.ಪ॥
ಇಂದಿರೇಶನೆ ಸ್ವಾಮಿ ನೀನಿವರ ಮಂದ ಬುದ್ಧಿಯ
ಬಿಡಿಸಿ ಸಕತ ಕಾಲದಲಿ ಕಾಪಾಡಬೇಕೊ ಹರಿಯೆ ॥
ಸಿಂಧುಶಯನನೆ ಸ್ವಾಮಿ ಮಂದರೋದ್ಧರ ಕೃಷ್ಣ
ನೀನಿವರ ಕಷ್ಟಗಳ ಪರಿಹರಿಸಿ ಕಾಪಾಡ ಬೇಕೊ ಹರಿಯೆ ॥೧॥
ಗಾನಲೋಲನೆ ದೇವ ನೀನಿವರಿಗೆ ಜ್ಞಾನ ಭಕ್ತಿ ವಿರಕ್ತಿಯನೆ
ಕೊಟ್ಟು ಕಾಪಾಡಬೇಕೊ ಹರಿಯೆ ॥
ಮಾನನಿಧಿ ಶ್ರೀ ಕೃಷ್ಣನೇ ನೀನಿವರ ಸಾನುರಾಗದಿ
ಸತತ ಕಾಪಾಡಬೇಕೊ ಹರಿಯೇ ॥೨॥
ಪನ್ನಗಾಚಲ ನಿವಾಸ ಇನ್ನಿವರ ಪೊರೆಯುವ ಭಾರ
ನಿನ್ನದಯ್ಯ ಹರಿಯೇ ॥
ಘನ್ನಮಹಿಮನೆ ಸಿರಿ ತಂದೆ ಮುದ್ದು ಮೋಹನ್ನ ವಿಠ್ಠಲನೆ
ನಿನ್ನ ಭೃತ್ಯನಿವನೆಂತೆಂದು ಸತತ ಸಲಹಬೇಕೊ ಹರಿಯೇ ॥೩॥

70. ಹೆಸರು ಇಂದಿರಾಬಾಯಿ (ಸರಸಮ್ಮನ ತಂಗಿ) ಅಂಕಿತ - **ಶಿರಿನಾಥವಿಠಲ**

ಶಿರಿನಾಥವಿಠ್ಠಲನೆ ನೀನಿವರ । ಪರಮ ಕಾರುಣ್ಯ
ದಲಿ ಕಾಪಾಡು ಹರಿಯೇ ॥ಪ॥
ಕರಿವರದ ಶ್ರೀ ಕೃಷ್ಣ ದುಷ್ಟ ಮಾರ್ಗಗಳ ತರಿದು ।
ವರಭಕ್ತಿಯನೆ ಕೊಟ್ಟು ಕಾಪಾಡು ಹರಿಯೇ ॥ಅ.ಪ॥
ಪರಮಪುರುಷನೇ ಶ್ರೀ ಕೃಷ್ಣ ಪಾಪರಾಶಿಯ ।
ತರಿದು ಕರಣ ಶುದ್ಧಿಯ ಗೈಸಿ ಕಾಪಾಡು ಹರಿಯೇ ॥೧॥

ಗುರುಭಕ್ತಿ, ಪತಿಸೇವ ಮೊದಲಾದ ಸದ್ಗುಣಗಳನೇ।
ಕೊಟ್ಟು ಮಾರುತಾಂತರ್ಯಾಮಿ ಕಾಪಾಡು ಹರಿಯೆ ॥
ತಾರತಮ್ಯಜ್ಞಾನ ಪಂಚಭೇದವ ತಿಳಿಸಿ।
ಪಾರಗಾಣಿಸೊ ಭವಸಾಗರವ ಹರಿಯೆ ॥೨॥
ಕಾರುಣ್ಯ ನಿಧಿಯೇ ನಿನ್ನ ಕರುಣವಿಲ್ಲದೆ ಮುಕ್ತಿ
ದಾರಿ ತೋರದು ನೀನೆ ಕಾಪಾಡು ಹರಿಯೆ ॥
ಮಾರುತಾಂತರ್ಯಾಮಿ ಶಿರಿತಂದೆ ಮುದ್ದು ಮೋಹನ ವಿಠಲ।
ಕಾರುಣ್ಯದಲಿ ನೀನಿವರ ಕಾಪಾಡೊ ಹರಿಯೆ ॥೩॥

71. ಹೆಸರು ಪ್ರಹ್ಲಾದರಾವ್ - ಅಂಕಿತ - **ವೇಣುಗಾನಪ್ರಿಯವಿಠಲ**

ವೇಣುಗಾನಪ್ರಿಯವಿಠಲನೆ ನೀನಿವನ।
ಸಾನುರಾಗದಿ ಕಾಪಾಡಬೇಕೊ ಹರಿಯೆ ॥ಪ॥
ಮುಕ್ತಿದಾಯಕ ಸ್ವಾಮಿ ನಿನ್ನ ಭೃತ್ಯನಿವನೆಂದು
ಸಲಹ ಬೇಕೊ ಸತತ ಹರಿಯೇ ॥ಅ.ಪ॥
ಸರ್ವಕಾರಣಕರ್ತ ಸರ್ವರೊಳು ಪ್ರಖ್ಯಾತ।
ಸರ್ವಗುಣ ಪೂರ್ಣ ಕಾಪಾಡೊ ಹರಿಯೇ ॥
ಪರಮಪೂಜ್ಯನೆ ಸ್ವಾಮಿ ಕರಿವರದ ಗೋಪಾಲ।
ನಿರತ ಪಾಲಿಸಲಿ ಬೇಕೊ ಹರಿಯೇ ॥೧॥
ಅಸುರಜನಸಂಹಾರಿ ಗುಪಿತದಿಂದಲಿ ಬಂದು।
ಶಿಶುವಿನಂದದಿಪೊರೆಯೊ ಸತತ ಹರಿಯೆ ॥
ವಸುದೇವಸುತಕೃಷ್ಣ ವಸುಮತಿಯ ಮೇಲಿವನ।
ಹಸನಾಗಿ ಸಲಹ ಬೇಕೊ ಹರಿಯೇ ॥೨॥
ಕುಸುಮನಾಭನೆ ಸ್ವಾಮಿ ಸದ್ಗುಣವ ನೀನಿತ್ತು
ಅಸುರಾರಿ ನರಹರಿಯೇ ಸಲಹ ಬೇಕೊ ಸತತ।
ಅಸಮ ಮಹಿಮನೆ ಸ್ವಾಮಿ ಕಾಮಿತಾರ್ಥವನಿತ್ತು।
ತಂದೆ ಮುದ್ದು ಮೋಹನ ವಿಠಲನೆ ಸಲಹ ಬೇಕೋ ಸತತ ಹರಿಯೇ ॥೩॥

72. **ದುರ್ಗಾಬಾಯಿ - ಪುಂಗನೂರು ಅಂಕಿತ - ಪರಮಶುಭಕರ ವಿಠಲ**

ಪರಮಶುಭಕರವಿಠಲನೆ । ನೀನಿವರಿಗೆ ಬೇಕಾದ।
ವರಗಳನೆ ಕೊಟ್ಟು ಕಾಪಾಡೊ ಹರಿಯೆ ॥ಪ॥
ಪರಮಜ್ಞಾನನೆಸ್ವಾಮಿ ಪರಿಪರಿ ಕಷ್ಟರಾಶಿಗಳ।
ಪರಿಹರಿಸಿ ಕಾಪಾಡೊ ಹರಿಯೇ ॥ಅ.ಪ॥

ಜಗದೀಶನೆ ಸ್ವಾಮಿ ಕಮಲಸಂಭವಜನಕ ಶಮಲವನು
ಪರಿಹರಿಸಿ ನಿತ್ಯದಲಿ ಕಾಪಾಡೊ ಹರಿಯೇ ||
ಜ್ವಲಜ್ವಲದಿ ಪರಿಯಂತ್ರ ಭಾರ್ಯ ಎಂಬೊ ಘಮತಿ
ಯನೆ ಕೊಟ್ಟು ಕಾಪಾಡೊ ಹರಿಯೆ ||
ಗುರುಕುಲಾದಿಗಳಲ್ಲಿ ನಿನ್ನ ಹೆಂಡತಿಯೆಂಬಾ
ವಿಮಲ ಮತಿಯನು ಕೊಟ್ಟು ಕಾಪಾಡೊ ಹರಿಯೆ ||
ಹರಿಗುರುಗಳಲಿ ಭಕ್ತಿ ವೈರಾಗ್ಯ ಭಾಗ್ಯವನೆ ಕೊಟ್ಟು
ಸಲಹ ಬೇಕು ಹರಿಯೆ ||
ದುರಿತ ರಾಶಿಗಳೆಲ್ಲ ಪರಿಹರಿಶಿ ಸಿರಿ ತಂದೆ ಮುದ್ದು
ಮೋಹನ್ನ ವಿಠಲನೆ ನಿನ್ನ ರೂಪವನೆ ತೋರಿಸಿ
ಉದ್ಧರಿಸ ಬೇಕು ಹರಿಯೆ ||

73. ಹೆಸರು ಸುಬ್ಬಮ್ಮ, ಸರಸಮ್ಮನ ಮಗಳು, ಚಿತ್ರದುರ್ಗ, ಅಂಕಿತ - ಲಕುಮೀಶವಿಠಲ

ಲಕುಮೀಶವಿಠಲನೆ ನೀನಿವರ ಅನುಗಾಲ |
ಸಕಲ ಭಾಗ್ಯವನಿತ್ತು ಕಾಪಾಡೊ ಹರಿಯೇ ||ಪ||
ಅಕಳಂಕವಾದಂಥ ಭಕ್ತಿ ಜ್ಞಾನವ ನಿತ್ತು |
ಭಕುತಜನರೊಳಗಿಟ್ಟು ಕಾಪಾಡೊ ಸ್ವಾಮಿ ||ಅ.ಪ||
ಬಾಲಕೃಷ್ಣನೆ ದೇವ ಲೋಲಾಕ್ಷಿಯರಿಗೊಲಿದೆ |
ಶೀಲಗುಣವನೆ ನೀನಿವಿವರಿಗಿತ್ತು ಕಾಪಾಡೊ ಹರಿಯೇ ||
ಕಾಲಕಾಲಕೆ ನಿನ್ನ ನಾಮಸ್ಮರಣೆಯನೆ ಇತ್ತು |
ಪಾಲನೆಯಮಾಡುವ ಭಾರ ನಿನಗೊಪ್ಪಿಸಿದೆ ಕಾಪಾಡೊ ದೇವ ||೧||
ಪತಿಸೇವೆ ಅನುಗಾಲ ಹಿತದಿಂದ ಮಾಳ್ಪಂತೆ ಸನ್ಮತಿಯನೇ ಇತ್ತು
ಕಾಪಾಡೊ ಹರಿಯೇ ||
ಪತಿಯಂತರ್ಗತನೆ ಎನ್ನಂತರ್ಗತನು ಎಂದು |
ಸತತ ಚಿಂತನೆ ಮಾಳ್ಪಂತೆ ಗುರುಕೃಪೆಯ ಕರುಣಿಸಿ
ಕಾಪಾಡೊ ಹರಿಯೇ ||೨||
ಸಾರತರವಾದಂಥ ವಾಯು ಮತತತ್ವವನು
ಶ್ರೀ ರಮೇಶನೆ ತಿಳಿಸಿ ಕಾಪಾಡೊ ಹರಯೆ ||
ವಾರಿಜಾಂಬಕ ತಂದೆ ಮುದ್ದು ಮೋಹನ್ನ ವಿಠಲನೆ
ಹೃದಯಾರವಿಂದದಿ ನಿನ್ನ ಬಿಂಬರೂಪವ ತೋರಿ
ಕಾಪಾಡೊ ಹರಿಯೆ ||೩||

74 ಹೆಚ್. ಲಕ್ಷ್ಮೀನರಸಪ್ಪ ಅಂಕಿತ - ಸದಾನಂದ ಪೂರ್ಣವಿಠಲ

ಸದಾನಂದಪೂರ್ಣವಿಠ್ಠಲನೆ ನೀನಿವರಿಗೆ ।
ಸದಾಸೌಖ್ಯವನೆ ಕೊಟ್ಟು ಕಾಪಾಡೊ ಹರಿಯೇ ॥ಪ॥
ಮಂಗಳಾಂಗನೆ ಸ್ವಾಮಿ ನೀನಿವರಿಗೆ ನಿತ್ಯ ।
ಮಂಗಳವನೆ ಕೊಟ್ಟು ಕಾಪಾಡೊ ಹರಿಯೆ ॥ಅ.ಪ॥
ಆದಿದೇವನೆ ಸ್ವಾಮಿ ಸಕಲಪಾಪರಾಶಿಗಳ ಪರಿಹರಿಸಿ ।
ಮೋದದಿಂದಲಿ ನೀನಿವರ ಅನುಗಾಲ ಸಲಹಬೇಕೊ ಹರಿಯೇ ॥೧॥
ಬಾದರಾಯಣ ಭಕ್ತಬಾಂಧವ ಸ್ವಾಮಿ ಆದರದಿ ನೀನಿವರ
ಕಷ್ಟಗಳ ಪರಿಹರಿಸಿ ಕಾಪಾಡೊ ಹರಿಯೇ ॥೧॥
ದಶರಥರಾಮನೆ ನೀನಿವರಿಗೆ ಹರಿಗುರುಗಳಲಿ ಭಕ್ತಿ
ಹಿರಿದಾಗಿ ಕೊಟ್ಟು ಇಹಪರದಿ ನೀನಿವರ ಸಂತೈಸ ಬೇಕೊ ದಯದಿ ಹರಿಯೇ ॥
ಪರಮಪುರುಷನೆ ಸ್ವಾಮಿ ಕರಿಗಿರಿವಾಸ ಲಕ್ಷ್ಮೀಲೋಲ
ನರಹರಿಯೇ ನೀನಿವರ ಸೇವೆಯನು ಕೈಗೊಂಡು
ಸಲಹ ಬೇಕೊ ಹರಿಯೆ ॥೨॥
ಗಾನಲೋಲನೆ ಕೃಷ್ಣ ಜ್ಞಾನ ಭಕ್ತಿವೈರಾಗ್ಯ ಮೊದಲಾದ
ಸಾಧುಗುಣಗಳ ಕೊಟ್ಟು ಸಲಹಬೇಕೊ ಹರಿಯೆ ॥
ಧ್ಯಾನಗೋಚರ ತಂದೆ ಮುದ್ದು ಮೋಹನ ವಿಠ್ಠಲನೇ
ನೀನಿವರ ಹೃತ್ಕಮಲದಲಿ ನಿನ್ನ ಬಿಂಬರೂಪವ ತೋರಿ
ಉದ್ಧರಿಸ ಬೇಕೊ ಹರಿಯೇ ॥

75. ಕಮಲಮ್ಮ ಆರ್. ಜಿ. ಕೃಷ್ಣಮೂರ್ತಿಯವರ ಪತ್ನಿ ಎನ್. ಆರ್. ಕಾಲೋನಿ ಬೆಂಗಳೂರು ಅಂಕಿತ **- ಜಯಮೋಹನವಿಠಲ**

ಜಯಮೋಹನವಿಠಲನೆ ನೀನಿವರ ।
ಕಾಯಬೇಕೆಂದು ಬೇಡುವೆನೊ ಸ್ವಾಮಿ ॥ಪ॥
ಜಯದೇವಿಪತಿ ನಿನ್ನಯ ನಾಮಗಳನುಡಿಸಿ
ಕಾಪಾಡೊ ಕೃಷ್ಣ ॥ಅ.ಪ॥
ಆಪದ್ಬಾಂಧವ ದೇವ ಆರ್ತಜನರಕ್ಷಕ ನಿನ್ನ
ಕೀರ್ತಿಸುವ ಸುಜನರನು ಕಾಪಾಡೊ ಹರಿಯೆ ॥
ವ್ಯಾಪಕನೆ ಜಗದಲ್ಲಿ ರೂಪರೂಪಾಂತರದಿನೀ
ಮಾಳ್ಪವ್ಯಾಪಾರಮಹಿಮೆಯ ತಿಳಿಸಿ ಕಾಪಾಡೊ ಹರಿಯೆ ॥೧॥

ಸರ್ಪಶಯನನನೆ ದೇವ ತಪ್ಪುಗಳೆಣಿಸದಲೆ
ವಪ್ಪದಿಂದಲಿ ಸತತ ಕಾಪಾಡೊ ಹರಿಯೇ ||
ಸಪ್ತೆರಡು ಭುವನೇಶ ಸನ್ಮಂಗಳನವನೆ ಕೊಟ್ಟು
ಇಪ್ಪತ್ತನಾಲ್ಕು ತತ್ವಾಧಿಪತಿಗಳಲಿ ನಿಂತು
ನಿನ್ನ ಸೇವೆಯನೆ ಕೈಗೊಂಡು ಕಾಪಾಡೊ ಹರಿಯೆ ||೨||
ಮಾತರಿಶ್ವಪ್ರಿಯನೆ ಪ್ರೀತಿಪೂರ್ವಕದಿಂದ
ಜ್ಞಾನವನಿತ್ತು ಕಾಪಾಡೊ ಹರಿಯೆ ||
ಮಾತುಳಾಂತಕ ತಂದೆ ಮುದ್ದು ಮೋಹನ ವಿಠ್ಠಲನೆ
ನೀ ತೋರು ನಿನ ದಿವ್ಯರೂಪವನು ಮನದೊಳಗೆ ಸ್ವಾಮಿ ||೩||

76. ಹೆಸರು ಆರ್. ಜೆ. ಕೃಷ್ಣಮೂರ್ತಿ ಅಂಕಿತ - ಸುಶಾಂತಮೂರ್ತಿವಿಠಲ

ಸುಶಾಂತ ಮೂರ್ತಿ ವಿಠಲನೆ | ನೀನಿವರಿಗೆ |
ಸುಶಾಂತಿಯನೆ ಕೊಟ್ಟು ಸತತ ಕಪಾಡೊ ಹರಿಯೆ ||ಪ||
ದೋಷದೂರನೆ ಸರ್ವಕ್ಲೇಶಗಳ ಪರಿಹರಿಸಿ |
ಶೇಷಶಯನನೆ ಸ್ವಾಮಿ ಕಾಪಾಡೊ ಹರಿಯೇ ||ಅ.ಪ||
ಗಾನಲೋಲನೆ ದೇವ ಸಾಮಗಾನ ಪ್ರೀಯ |
ಜ್ಞಾನ ಭಕ್ತಿ ವೈರಾಗ್ಯವ ಕೊಟ್ಟು ಕಾಪಾಡೊ ಹರಿಯೆ ||
ಜ್ಞಾನಗಮ್ಯನೆ ದೇವ ಪ್ರಹ್ಲಾದವರದ
ದಾನವಾಂತ ಕೃಷ್ಣ | ಸಾನುರಾಗದಿ ನೀನಿವರ
ಕಾಪಾಡೊ ಹರಿಯೇ ||೧||
ಪರಮಪೂಜ್ಯನೆ ಸ್ವಾಮಿ ಕರಿವರದ ಶ್ರೀಕೃಷ್ಣ |
ಪರಿಪರಿಯ ಕಷ್ಟಗಳ ಪರಿಹರಿಸಿ ಕಾಪಾಡೊ ಹರಿಯೆ ||
ಸರಸಿಜೋದ್ಭವನಯ್ಯ ಪರಮಪುರುಷನೆ ದೇವ
ಪರಿಪರಿಯ ಜನ್ಮದ ಪಾಪ ರಾಶಿಗಳ ಪರಿಹರಿಸಿ
ಕಾಪಾಡೊ ಹರಿಯೇ ||೨||
ಮಂಗಳಾಂಗನೆಸ್ವಾಮಿ ಮದನ ಜನಕನೆ ದೇವ |
ಸನ್ಮಂಗಳವನೆ ಕೊಟ್ಟು ಕಾಪಾಡೊ ಹರಿಯೆ ||
ರಂಗನಾಥನೆಸ್ವಾಮಿ ಪರಮ ಮಂಗಳ ಮೂರ್ತಿ |
ತುಂಗವಿಕ್ರಮ ತಂದೆ ಮುದ್ದು ಮೋಹನ ವಿಠಲನೆ ನೀನಿವರ
ಹೃದಯದಲಿ ನಿನ್ನ ರೂಪವನೆ ತೋರಿ ಕಾಪಾಡೊ ಹರಿಯೇ ||೩||

77. ಹೆಸರು - ಸುಬ್ರಾಯ ಭಟ್ಟರು 'ಉಡುಪಿ ಕಡೆಯವರು' (ಇವರ ಅಣ್ಣಂದಿರು ಪುತ್ತಿಗೆ ಶ್ರೀ ಗಳವರ ಹತ್ತಿರ ಆಶ್ರಮ) ಅಂಕಿತ - **ಶ್ರೀ ಸತ್ಯದೇವವಿಠಲ**

ಶ್ರೀ ಸತ್ಯದೇವವಿಠಲನೆ ನೀನಿವರಿಗೆ ।
ನಿತ್ಯದಲ್ಲಿ ನಿನ್ನ ದಾಸತ್ವ ಭಾಗ್ಯವನೆ ಕೊಟ್ಟು
ಕಾಪಾಡೊಬೇಕೊ ಹರಿಯೇ ।।ಪ।।
ಜ್ಞಾನಗಮ್ಯನೆ ದೇವ ನೀನಿವರ । ಹೃದಯದಲಿ
ನಿನ್ನ ರೂಪವನೆ ತೋರಿ ಸತತ ಕಾಪಾಡೊ ಹರಿಯೇ ।।ಅ.ಪ।।
ಗಾನಲೋಲನೆ ಕೃಷ್ಣ ಶ್ರೀನಿವಾಸನೆ ಇನ್ನಿವರ ।
ಸಾನುರಾಗದಲಿ ಕಾಪಾಡೊ ಹರಿಯೇ ।।೧।।
ಕರುಣಾಕರನೆ ದೇವ ನಿನ್ನ ಪ್ರೇರಣೆಯಿಂದ ।
ನಾನಿವನಿಗೆ ಅಂಕಿತವನಿತ್ತೆ ಕಾಪಾಡೊ ಹರಿಯೇ ।।
ಗರುಡಗಮನನೆ ನಿನ್ನ ಸ್ಮರಣೆ ಸಂಪದವಿತ್ತು
ನಿರುತದಲಿ । ನೀನಿವನ ಕಾಪಾಡೊ ಹರಿಯೇ ।।೨।।
ಭಕ್ತವತ್ಸಲ ದೇವ ಅಪರಿಮಿತ ಗುಣನಿಧಿಯೇ
ಚತುರವಿಧ ಪುರುಷಾರ್ಥವನೆ ಕೊಟ್ಟು ಸತತ ಕಾಪಾಡೊ ಹರಿಯೇ ।।
ಮುಕ್ತಿ ಪ್ರದಾಯಕ ದೇವ ಪರಮಪುರುಷನೆ ತಂದೆ ಮುದ್ದು ಮೋಹನ
ವಿಠಲನೇ ಬಿಡದಿವರ ಸಲಹೊ ಹರಿಯೇ ।।೩।।

78. ತುಳಸಮ್ಮನವರು-ಹಳೇಮಠ ಪ್ರಾಣಪ್ರಿಯರ ತಾಯಿ ಅಂಕಿತ - **ಪದ್ಮೇಶ ವಿಠಲ**

ಪದ್ಮೇಶವಿಠಲನೆ ನೀನಿವರ ಹೃತ್ । ಪದ್ಮದೊಳಗೆ
ನೆಲೆಸಿ ಕೃಪೆಮಾಡಿ ಸಲಹಬೇಕೊ ಹರಿಯೆ ।।ಪ।।
ಕಾಮಜನಕನೆ ಸ್ವಾಮಿ । ಕಾಮಿತಾರ್ಥವನಿತ್ತು
ಕಾಪಾಡಬೇಕೊ ಹರಿಯೆ ।।ಅ.ಪ।।
ಸತ್ಯಸಂಕಲ್ಪ ಜಗದೇಕನಾಥನೇ ನಿನ್ನ ಭೃತ್ಯಳ
ಸೇವೆಯೆನು ಕೈಕೊಂಡು ಉದ್ಧರಿಸ ಬೇಕೊ ಹರಿಯೆ ।।
ಭೃತ್ಯವತ್ಸಲ ಹರಿಯೇ ನಿತ್ಯತೃಪ್ತನೆ ಸ್ವಾಮಿ
ನಿತ್ಯದಲಿ ಕಾಪಾಡಬೇಕೊ ಹರಿಯೆ ।।೧।।
ಸಕಲೇಂದ್ರಿಯ ಪ್ರೇರಕನೆ ಕರುಣಿ । ಸಕಲ ಕಾಲಗಳಲ್ಲಿ
ಕೃಪೆಮಾಡಿ ಕಾಪಾಡಬೇಕೊ ಹರಿಯೆ ।।
ಸಕಲ ಪಾಪವ ಕಳೆದು ಸಕಲ ವಿಪತ್ತುಗಳ ಪರಿ

ಹರಿಸಿ ಕಾಪಾಡ ಬೇಕೊ ಹರಿಯೆ ॥೨॥
ಗಾನಲೋಲನೆ ದೇವ ಗುಣಭರಿತ ಜ್ಞಾನ
ಭಕ್ತಿಯನೆ ಕೊಟ್ಟು ಸತತ ಕಾಪಾಡಬೇಕೊ ಹರಿಯೇ ॥
ದಾನವಾಂತಕ ಕೃಷ್ಣ ತರತಮಜ್ಞಾನ ಪಂಚಭೇದ
ತಿಳಿಸಿ ತಂದೆ ಮುದ್ದು ಮೋಹನ್ನ ವಿಠ್ಠಲನೆ ನಿನ್ನ ನಾ
ಮಸ್ಮರಣೆಯನಿತ್ತು ಸಲಹೊ ಹರಿಯೇ ॥೩॥

79. ಹೆಸರು ಹನುಮಂತಾಚಾರ್ ಹಳೇಮಠ ಅಂಕಿತ - ಶ್ರೀ ಪ್ರಾಣಪ್ರಿಯವಿಠಲ

ಶ್ರೀ ಪ್ರಾಣಪ್ರಿಯವಿಠ್ಠಲನೆ ನೀನಿವರಿಗೆ । ಶ್ರೀ ಮುಖ್ಯ
ಪ್ರಾಣಾಂತರ್ಗತನಾಗಿ ದಿವ್ಯ ಪ್ರಸಾದವನೆ ಕೊಟ್ಟು
ಕಾಪಾಡೊ ಹರಿಯೇ ॥ಪ॥
ಮಾನಾಭಿಮಾನ ಮೊದಲಾದ ದ್ವಂದ್ವಗಳು ನಿನ್ನಾಧೀನ
ವೆಂತೆಂಬ । ಜ್ಞಾನವನೆ ಕೊಟ್ಟು ಸತತ ಕಾಪಾಡೊ ಹರಿಯೇ ॥ಅ.ಪ॥
ಅನುಪಮ ಶ್ರೀಕೃಷ್ಣ ಪರಮ ಪುರುಷನೆ ಸ್ವಾಮಿ
ಅನುದಿನದಿ ಸನ್ಮಂಗಳವನೇ ಇತ್ತು ಕಾಪಾಡ ಬೇಕೊ ಹರಿಯೆ ॥೧॥
ಅನಿಮಿತ್ತ ಬಾಂಧವನೆ ಅನಾಥರಕ್ಷಕ ಸ್ವಾಮಿ ।
ನೀನಿವನ । ಅನಾದಿಕಾಲದ ಘನಪಾಪ ರಾಶಿಗಳ
ಪರಿಹರಿಸಿ ಕಾಪಾಡೊ ಹರಿಯೇ ॥೨॥
ಜ್ಞಾನಭಕ್ತಿ ವಿರಕ್ತಿ ಶಮದಮ ಮೊದಲಾದ
ಗುಣವನೇ ಕೊಟ್ಟು ಸಾನುರಾಗದಿ ಕಾಪಾಡಿ
ಕೈ ಪಿಡಿದು ಸಲಹೊ ಹರಿಯೆ ॥
ಯೇನು ಕಷ್ಟಗಳು ಬಂದರೂ । ನೀನಿವನ ಕಷ್ಟಗಳ
ಬಿಡಿಸಿ ಸುಖವಿತ್ತು ಸಲಹಬೇಕೊ ಹರಿಯೇ ॥೩॥
ಮಧ್ವಮತ ಸಾರವನೆ ತಿಳಿಸಿ ಮಧ್ವಮುನಿ
ಹೃತ್ಪದ್ಮವಾಸನೆ । ಮುಕ್ತಿದಾಯಕನೆಂಬ ಸುಜ್ಞಾನವನೆ
ಕೊಟ್ಟು ಕಾಪಾಡೊ ಹರಿಯೆ ॥
ಶುದ್ಧ ವೈಷ್ಣವರ ಸಂಘದೊಳಿಟ್ಟು ನೀನಿವನ ಹೃತ್ಪದ್ಮ
ದೊಳು ಪೊಳೆದು । ತಂದೆ ಮುದ್ದು ಮೋಹನ ವಿಠ್ಠಲನೆ
ನಿನ್ನ ಪಾದವನೆ ತೋರಿ ಸಲಹೊ ಹರಿಯೇ ॥೩॥

80. ಶ್ರೀ ಹನುಮಂತಾಚಾರ್ಯ, ಹಳೇಮಠ. ಇವರ ಕುಟುಂಬ ರಮಾಬಾಯಿ ಹಳೇಮಠ ಅಂಕಿತ - **ಪರವಾಸುದೇವ ವಿಠಲ**

ಪರವಾಸುದೇವವಿಠಲನೆ ನೀನಿವಳ । ಪರಿಪರಿಯ
ಕಷ್ಟಗಳ ಪರಿಹರಿಸಿ ಕಾಪಾಡೊ ಹರಿಯೇ ।।ಪ।।
ಪರಮಪುರುಷನೆ ನಿನ್ನ ಚರಣಸೇವೆಯನಿತ್ತು ಕರುಣದಲಿ
ಸಲಹೊ ಹರಿಯೇ ।।ಅ.ಪ।।
ಸಾಕಿಸಲಹುವ ಭಾರ ಶ್ರೀಕಾಂತ ನಿನಗೊಪ್ಪಿಸಿದೆನೋ
ಜೋಕೆಯಿಂದಲಿ ನೀನಿವಳ ಉದ್ಧರಿಸ ಬೇಕೊ ಹರಿಯೇ ।।
ಮಾಕಮಲಾಸನಾದಿ ವಿನುತ ಶ್ರೀಕಳತ್ರನೆ ಸಕಲ
ಕಾಲಗಳಲ್ಲಿ ನೀನಿವಳ ಸಲಹಬೇಕೂ ಹರಿಯೇ ।।೧।।
ಗಾನಲೋಲನೆ ಕೃಷ್ಣ ನಿನ್ನ ಪದ ಧ್ಯಾನವನೆ ಕೊಟ್ಟು ।
ಮುನ್ನಿವಳ ಸಲಹಬೇಕೊ ಹರಿಯೇ ।।
ಜ್ಞಾನಗಮ್ಯನೆ ಯೆನ್ನ ಮಾತನು ಲಾಲಿಸಿ ನೀನಿವಳ
ಪಾಪಗಳ ಪರಿಹರಿಸಿ ಕಾಪಾಡೊ ಹರಿಯೇ ।।೨।।
ಮಂಗಳಾಂಗನೆ ಸ್ವಾಮಿ ಜಗದೊಳಗೆ ಮಂಗಳವನಿತ್ತು ।
ನೀನಿವಳ ಕಾಪಾಡೊ ಹರಿಯೇ।।
ಅಂಗಜಾಪಿತ ಕಮಲಾಕಾಂತ ತ್ರಿಗುಣ ವರ್ಜಿತ ತಂದೆ
ಮುದ್ದು ಮೋಹನ ವಿಠಲನೆ ನೀನಿವಳ ಕಾಪಾಡೊ ಹರಿಯೇ ।।೩।।

81. **ಡಾ. ನಾಗರಾಜರಾವ್** (ಎಂ. ಬಿ. ಕೃಷ್ಣರಾವ್ ಅಡ್ವೊಕೇಟ್, ಚಿತ್ರದುರ್ಗ ಇವರ ಮಗ) ಅಂಕಿತ - **ತಂದೆಕೇಶವವಿಠಲ**

ತಂದೆಕೇಶವವಿಠಲನೆ । ನೀನಿವರ ಮುಂದೆ ಸಲಹುವೊ ಭಾರ
ನಿನ್ನದೋ ಹರಿಯೆ ।।
ಇಂದಿರೇಶನೆ ಕೃಷ್ಣ ಮಮಕುಲಸ್ವಾಮಿ ನೀನಿವರ ಕುಂದುಗಳ
ಪರಿಹರಿಸಿ ಅಂದದಲಿ ಕಾಪಾಡೋ ಹರಯೇ ।।೧।।
ಪರಮಪೂಜ್ಯನೆ ದೇವ । ನೀನಿವರ ದುರಿತರಾಶಿಗಳ
ಪರಿಹರಿಸಿ ಕಾಪಾಡೊಬೇಕೋ ಹರಿಯೇ ।।
ಹರಿಗುರುಗಳಲಿ ಭಕ್ತಿ ಮೊದಲಾದ ಸದ್ಗುಣಗಳನೆ
ಕೊಟ್ಟು ಕಾಪಾಡೋ ಹರಿಯೇ।। ೨।।
ಪತಿತಪಾವನ ಶ್ರೀಹರಿಯೇ ನಿನ್ನ ನಾಮಸ್ಮರಣೆಯನು

ಸ್ಮರಿಸುವ ಸನ್ಮತಿಯನೆ ಕೊಟ್ಟು ನಿರುತ ಕಾಪಾಡೋ ಶ್ರೀ ಹರಿಯೆ ||
ಕೃತಿ ಪತಿ ಮೊದಲಾದ ಪಂಚರೂಪಾತ್ಮಕನ ಸೇವೆಯನು
ಅತಿಹಿತದಿ ಮಾಡುವ ಸೌಭಾಗ್ಯವನು ಕೊಟ್ಟು ಕಾಪಾಡು
ಶ್ರೀ ಹರಿಯೇ ||೩||
ಕಾಮಕ್ರೋಧ ಮದಮತ್ಸರಗಳೆಂಬ ಅರಿಷಡ್ವರ್ಗವನೆ
ಬಿಡಿಸಿ ಸತತ ಕಾಪಾಡು ಶ್ರೀಹರಿಯೇ ||
ಕಾಮಜನಕನೆ ತಂದೆ ಮುದ್ದು ಮೋಹನ ವಿಠಲನೆ
ನೀನಿವರ ಹೃತ್ಕಮಲ ಮಂದಿರದಲಿ ನಿನ್ನ ರೂಪವ
ತೋರಿ ಕಾಪಾಡೊ ಶ್ರೀ ಹರಿಯೇ ||

82. ಸಿ. ರಾಘುವೇಂದ್ರರಾವ್ ಚಿತ್ರದುರ್ಗ ಅಂಕಿತ - ಮಧ್ವಮುನಿವರದ ವಿಠಲ

ಮಧ್ವಮುನಿವರದವಿಠ್ಠಲನೇ ನೀನಿವರ | ಕೃಪೆಮಾಡಿ
ಸಲಹ ಬೇಕೊ ಹರಿಯೇ ||ಪ||
ಅಪರಿಮಿತ ಮಹಿಮನೆ ನಿನ್ನಗುಣ ವರ್ಣಿಸುವೋ | ಮತಿಯನೇ
ಇತ್ತು ಕಾಪಾಡೊ ಹರಿಯೇ ||ಅ.ಪ||
ಮಧ್ವರಾಯರ ಸ್ಮರಣೆಯನು ಅನುಗಾಲಮಾಡುವ |
ಬುದ್ಧಿಯನೆ ಇತ್ತು ಕಾಪಾಡೊ ಹರಿಯೇ ||
ಮಧ್ವಮುನಿ ಹೃದಯದಲ್ಲಿ ವಾಸವಾಗಿಪ್ಪ |
ಶುದ್ಧಮೂರ್ತಿಯಾ ತೋರಿ ಉದ್ಧರಿಸುವಂತೆ ಮಾಡೋ ಹರಿಯೇ ||೧||
ಜ್ಞಾನಭಕ್ತಿ ವೈರಾಗ್ಯಾದಿಗಳನ್ನು | ಕೊಟ್ಟು ಕಾಪಾಡೋ ಹರಿಯೇ ||
ಮಾನನಿಧಿ ಶ್ರೀ ಕೃಷ್ಣ ನಿನ್ನವರ | ಸಹವಾಸವನು
ಅನುಗಾಲ ಕೊಟ್ಟು ಕಾಪಾಡೊ ಹರಿಯೇ ||
ನಾನು ನನ್ನದು ಎಂಬ ಜಡಮತಿಯನೆ ಬಿಡಿಸಿ
ಕಾಪಾಡೊ ಹರಿಯೇ ||೨||
ನಿನ್ನ ದಿವ್ಯ ಮೂರುತಿಯನು ದಿವ್ಯ ಹೃದಯ ಮೂಲದಲಿ |
ನಿನ್ನ ಕೃಪೆಯಿಂದ ಅನುಗಾಲ ನೋಡುವೊ ಭಾಗ್ಯವನೆ ಕೊಟ್ಟು
ಕಾಪಾಡೊ ಹರಿಯೇ ||
ನಿನ್ನ ಸೇವಕರ ಸೇವಕನು ಇವನೆಂದು ತಂದೆ ಮುದ್ದು
ಮೋಹನ ವಿಠಲನೇ
ನಿನ್ನ ಚರಣ ಕಮಲವ ತೋರೊ ಹರಿಯೇ ||೩||

83. ಲಕ್ಷ್ಮೀಬಾಯಿ ಗುರುರಾಯಾಚಾರ್ ಕಡಸ್ ರಾಣೆಬನ್ನೂರು ಅಂಕಿತ - ಸೀತಾವಲ್ಲಭವಿಠಲ

ಸೀತಾವಲ್ಲಭವಿಠಲನೆ ನೀನಿವರ ಪ್ರೀತಿಯಿಂದಲಿ
ಕಾಪಾಡ ಬೇಕೊ ಹರಿಯೇ ||
ಮಾತುಮಾತಿಗೆ ನಿನ್ನ ನಾಮಸ್ಮರಣೆಯನೆ ಕೊಟ್ಟು
ಮಾತುಳಾಂತಕ ಕೃಷ್ಣ ಕಾಪಾಡೊ ಸ್ವಾಮೀ ||೧||
ಸಾಧುಸಂಗವ ಕೊಟ್ಟು ಮಾಧವನ ಕರುಣದಲಿ |
ಮೋದಗೊಳಿಸುತಲಿ ಇವರ ಕಾಪಾಡಬೇಕೊ ಹರಿಯೇ ||
ಬಾದರಾಯಣಮೂರ್ತಿ ಭೇದಾರ್ಥ ಮತಿ ಇಟ್ಟು |
ಆದರದಿ ಅನುಗಾಲ ಸಕಲ ಸುಖವನೆ ಕೊಟ್ಟು
ಕಾಪಾಡೊ ಹರಿಯೇ ||
ಪಾಪಸಂಗವ ಸುಟ್ಟು ಶ್ರೀಪತಿಯ ಕರುಣದಲಿ
ಕೋಪತಾಪವ ಬಿಡಿಸಿ ಕಾಪಾಡಬೇಕೋ ಹರಿಯೇ ||
ಇಂದಿರೇಶನೆ ಕೃಷ್ಣ ಛಂದಾಗಿ ಪತಿಸೇವೆ ಮಾಳ್ಪ
ದಂದದಲಿ ಮತಿಯನೆ ಕೊಟ್ಟು ಕಾಪಾಡ ಬೇಕೊ ಹರಿಯೇ ||
ಕುಂದುಕೊರತೆಯ ಬಿಡಿಸಿ ತಂದೆ ಮುದ್ದು ಮೋಹನ ವಿಠ್ಠಲನೆ
ಹೃದಯಾರವಿಂದದಲಿ ನೆಲಿಸಿ ಕಾಪಾಡಬೇಕೊ ಹರಿಯೇ ||

84. ಡಿ. ನರಸಿಂಗರಾವ್ ಅಂಕಿತ - ಶ್ರೀ ರಮಣರಾಮ ವಿಠಲ

ಶ್ರೀ ರಮಣರಾಮ ವಿಠಲನೆ ನೀನಿವರ ಸರ್ವಕಾಲದಲಿ
ಕಾಪಾಡ ಬೇಕೊ ಹರಿಯೇ ||ಪ||
ವಾರಿಜೋದ್ಭವನಯ್ಯ ಸಕಲೇಶ ಶ್ರೀಹರಿಯೆ |
ಪರಮ ಮಂಗಳವನೆ ಕೊಟ್ಟು ಸಲಹಬೇಕೊ ಹರಿಯೇ ||ಅ.ಪ||
ಕಂದರ್ಪಪಿತನೆ ನೀನಿವನ ಮಂದಮತಿಯನೆ ಬಿಡಿಸಿ |
ಚಂದದಲಿ ಕಾಪಾಡೊ ಹರಿಯೆ ||
ಇಂದಿರೇಶನೆ ಸರ್ವರಂತರ್ಯಾಮಿ ಎಂತೆಂಬ
ದಿವ್ಯಮತಿಯನೆ ಕೊಟ್ಟು ಕಾಪಾಡೊ ಹರಿಯೆ ||೧||
ಪದ್ಮಸಂಭವ ಜನಕನೆ ಶ್ರೀಮಧ್ವಶಾಸ್ತ್ರದ ಸಾರತತ್ವವನು
ತಿಳುಹಿ ಶುದ್ಧ ಜ್ಞಾನವನೆ ಕೊಟ್ಟು ಕಾಪಾಡೊ ಹರಿಯೇ ||
ಪದ್ಮನಾಭನೆ ಕೃಷ್ಣ ಪಂಚಭೇದ ಜ್ಞಾನವನೆ ತಿಳಿಸಿ
ಹೃತ್ಪದ್ಮದಲಿ ನಿನ್ನ ದಿವ್ಯರೂಪವ ತೋರಿ ಉದ್ಧರಿಸಿ

ಕಾಪಾಡೊ ಹರಿಯೇ ||೨||
ಕಡಲಶಯನನೆ ದೇವ ಕಡುಕರುಣಿ ನೀನೆಂದು
ಬಿನ್ನೈಸಿದೆನೊ ಸ್ವಾಮಿ ನೀನಿವನ ಒಡಲೊಳಿಪ್ಪ
ಪಾಪರಾಶಿಗಳ ಪರಿಹರಿಸಿ ಕಾಪಾಡೊ ಹರಿಯೆ ||
ತಡವು ಮಾಡದಲೆ ನೀನಿವನಿಗೆ ದೃಢಭಕ್ತಿ ವೈರಾಗ್ಯ
ಮೊದಲಾದ ಸುಗುಣವನೆ ಇತ್ತು ಬಿಡದೆ ಸಲಹಬೇಕೊ
ತಂದೆ ಮುದ್ದು ಮೋಹನ ವಿಠಲನೆ ಸ್ವಾಮಿ ||೩||

85. ಹೆಸರು ವಾಮನ ಬೆಂಗಳೂರು ಬಸವನ ಗುಡಿ, ಅಂಕಿತ - **ಸತ್ಯೇಶ ವಿಠಲ**

ಸತ್ಯೇಶವಿಠಲನೆ ನೀನಿವರ ಭೃತ್ಯವರ್ಗದಲಿಟ್ಟು
ಕಾಪಾಡೊ ಹರಿಯೇ ||ಪ||
ಸುಂದರಾಂಗನೆ ದೇವ ಮಂದಮತಿಯನೆ ಬಿಡಿಸಿ |
ನಂದದಲಿ ನೀನಿವರ ಕಾಪಾಡಬೇಕೊ ಹರಿಯೇ ||
ಮಂದರೋದ್ಧರ ತಂದೆ ಮುದ್ದು ಮೋಹನ ವಿಠಲ
ನೀನಿವರ ಸಂತೈಸಿ ಕಾಪಾಡಬೇಕೊ ಹರಿಯೇ ||

86. **ಗುಂಡಮ್ಮ** (ಪುಟ್ಟಾಚಾರ್ಯರ ಕುಟುಂಬ) ಅಂಕಿತ - **ರುಕ್ಮಿಣೇಶ ವಿಠಲ**

ರುಕ್ಮಿಣೇಶವಿಠಲನೆ ನೀನಿವರ ಮನ ಪಕ್ವವ
ಗೈದು ಕಾಪಾಡು ಹರಿಯೆ ||ಪ||
ಶಕ್ರವಂದ್ಯನೆ ದೇವ ಜೀವಾಂತರಾತ್ಮಕನೆ ಭಯ
ಭಕ್ತಿಮಾರ್ಗನ ತೋರಿ ಕಾಪಾಡೊ ಹರಿಯೆ ||ಅ.ಪ||
ಸನ್ನುತಾಂಗನೆ ದೇವ ಸನ್ಮುದವ ನೀನಿತ್ತು
ಪತಿಭಕ್ತಿಯನೆ ಕೊಟ್ಟು ಕಾಪಾಡೊ ಹರಿಯೆ ||೧||
ಜಂಗಮಸ್ಥಾವರ ಪರಿಪೂರ್ಣ ಶ್ರೀಕೃಷ್ಣ
ಶೃಂಗಾರ ಹರಿ ನೀನೆ ಕಾಪಾಡೊ ಹರಿಯೇ ||೨||
ಹರಭಕ್ತಿ, ಗುರುಭಕ್ತಿ ಸುಜ್ಞಾನ,ವೈರಾಗ್ಯ
ಮೊದಲಾದ ತಾರತಮ್ಯವ ತಿಳಿಸಿ ಕಾಪಾಡೊ ಹರಿಯೇ ||
ವರ ತಂದೆ ಮುದ್ದು ಮೋಹನ ವಿಠಲನೆ
ನಿರುತ ನಿನ್ನಯ ರೂಪಪರಿಪೂರ್ಣವಾಗಿರಲಿ
ಮನದಿ ಹರಿಯೇ ||೩||

87. ಚಿತ್ರದುರ್ಗದ ಪುಟ್ಟಾಚಾರ್ಯರ ಮಗಳು ಅಂಕಿತ - **ಕಮಲಾನಾಥವಿಠಲ**

ಕಮಲಾನಾಥವಿಠಲನೆ ಸಕಲ ಕಲ್ಮಷವ
ಕಳೆದು ಸುಖವಿತ್ತು ಕಾಪಾಡೊ ಹರಿಯೆ ||
ಸೋಮಕುಲತಿಲಕ ನಾಮು ಸಾಮಜವರದ |
ಕಾಮಿತಾರ್ಥವನಿತ್ತು ಕಾಯ ಬೇಕೊ ಹರಿಯೆ ||೧||
ಹರಿಭಕ್ತಿ ಗುರುಭಕ್ತಿ ಪತಿಭಕ್ತಿ ಸುಜ್ಞಾನ
ಭಾಗ್ಯವ ಕೊಟ್ಟು ಕಾಪಾಡೊ ಹರಿಯೇ ||
ಎತ್ತನೋಡಿದರತ್ತ ನಿನ್ನ ರೂಪವ ತೋರಿ |
ಅತ್ಯಂತ ಸುಖವಿತ್ತು ನೀ ಸಲಹೊ ಹರಿಯೆ ||
ಮಂಗಳಾಂಗನೆ ದೇವ ಅಂತರಂಗವ ತೋರಿ |
ಮಂಗಳವನೀನಿತ್ತು ಕಾಪಾಡೊ ಹರಿಯೇ ||೨||
ಸಕಲಕಾಲಗಳಲ್ಲಿ ಸಕಲ ದೇಶಗಳಲ್ಲಿ
ಹರಿಯ ಸ್ಮರಣೆಯಾ ಕೊಟ್ಟು ಕಾಪಾಡು ಹರಿಯೇ ||
ಸಕಲ ಸುಂದರರೊಡೆಯ ತಂದೆ ಮುದ್ದು
ಮೋಹನ್ನ ವಿಠಲನೆ ನೀನಿವರ ಕಾಪಾಡು ಹರಿಯೇ ||೩||

88. ಪ್ರಹ್ಲಾದಾರಾವ್ ಅಡ್ವೊಕೇಟ್ ಚಿತ್ರದುರ್ಗ ಅಂಕಿತ - **ಮಧ್ವೇಶನರಹರಿವಿಠಲ**

ಮಧ್ವೇಶನರಹರಿವಿಠಲನೆ ನೀನಿವರ ಹೃತ್ಸದ್ಮದಲಿ
ನೆಲಿಸಿ ನಿತ್ಯದಲಿ ಕಾಪಾಡೊ ಹರಿಯೇ ||ಪ||
ಶುದ್ಧಮೂರುತಿಯೇ ಸರ್ವಜ್ಞ ಸರ್ವೇಶ ನೀನಿವರಿಗೆ |
ಸದ್ಬುದ್ಧಿಯನು ಸರ್ವಕಾಲದಲಿ ಕೊಟ್ಟು ಕಾಪಾಡೊ
ಹರಿಯೇ ||ಅ.ಪ||
ಮೂರುಗುಣ ಪ್ರೇರಕನೇ ಸಾಕಾರಮೂರುತಿಯೇ
ನಿನ್ನ ಅಪಾರ ಮಹಿಮಾದಿಗಳ ತೋರಿ ಕಾಪಾಡೊ ಹರಿಯೇ ||೧||
ಮಾರುತಿಯ ಪ್ರಿಯ ದೇವ ಮರುತಮತ
ಸಾರತತ್ವವ ತಿಳಿಸಿ | ಕಾರುಣ್ಯ ಮೂರುತಿಯೇ
ಕಾಪಾಡೊ ಹರಿಯೇ ||೨||
ಅಪರಿಮಿತ ಸನ್ಮಹಿಮ ಆದಿಮಧ್ಯಾಂತ ರಹಿತನೇ
ಜಪತಪಾದಿಸತ್ಸಾಧನೆಯನಡೆಸಿ
ಕಾಪಾಡೊ ಸ್ವಾಮಿ ||

ಸುಫಲದಾಯಕನೇ ಸೂಕ್ಷ್ಮಜ್ಞಾನವನೆಯಿತ್ತು
ವಿಪುಲಭಕ್ತಿಯನಿತ್ತು ಕಾಪಾಡೊ ಹರಿಯೇ ॥೩॥
ಪತಿತಪಾವನ ದೇವ ಗತಿನೀನೇ ಸರ್ವರಿಗೆ ಎಂಬ
ಸದ್ಗತಿಯ ಮಾರ್ಗವನು ತೋರಿ ಕಾಪಾಡೊ ಸ್ವಾಮಿ ॥೩॥

89. ಸೀತಾಬಾಯಿ ರಾಮರಾವ್ ಅಂಕಿತ - **ಕಮಲಾಪತಿ ವಾಸುದೇವ ವಿಠಲ**

ಕಮಲಾಪತಿವಾಸುದೇವವಿಠಲನೆ ನೀನಿವರಿಗೆ ಆಯುರಾ
ರೋಗ್ಯ ಭಾಗ್ಯವನೆ ಕೊಟ್ಟು ಕಾಪಾಡೋ ಹರಿಯೇ ॥ಪ॥
ಜನ್ಮಾಂತರದ ದುಷ್ಕರ್ಮಗಳ ಪರಿಹರಿಸಿ ಮುಂದೆ।
ಸನ್ಮಾರ್ಗವನೆ ತೋರಿ ಕಾಪಾಡೊ ಹರಿಯೇ ॥ಅ.ಪ॥
ದುಷ್ಟಜನ ಸಂಗವನೆ ಪರಿಹರಿಸಿ ಶಿಷ್ಟಜನರೊಳಗಾಡಿಸಿ
ಕಷ್ಟಗಳ ಬಿಡಿಸಿ ಕಾಪಾಡೊ ಹರಿಯೇ ॥
ಕೃಷ್ಣಮೂರುತಿ ನೀನಿವರ ಮೇಲೆ ನಿನ್ನ ಕೃಪಾ
ದೃಷ್ಟಿಯನೆ ಇಟ್ಟು ನಿತ್ಯದಲಿ ಕಾಪಾಡ ಬೇಕೊ ಹರಿಯೇ ॥೧॥
ಜ್ಞಾನದಾಯಕ ಸ್ವಾಮಿ ನೀನಿವರ ಅಜ್ಞಾನವನೆ ಪರಿಹರಿಸಿ।
ಸುಜ್ಞಾನವನೆ ಕೊಟ್ಟು ಕಾಪಾಡೊ ಹರಿಯೇ ॥
ಶ್ರೀನಿವಾಸನೆ ದೇವ ಸಾನುರಾಗದಿ ನೀನಿವರ
ಕರಗಳ ಪಿಡಿದು ನಿತ್ಯದಲಿ ಕಾಪಾಡೊ ಹರಿಯೇ ॥೨॥
ವಾಸುದೇವನೆ ನೀನಿವರಿಗೆ ಬೇಡಿದ ಇಷ್ಟಾರ್ಥವನೆ ಕೊಟ್ಟು
ಸಾಸಿರನಾಮದೊಡೆಯನೆ ನೀ ಸಲಹಬೇಕೊ ಹರಿಯೇ ॥
ಶ್ರೀಶನರಹರಿಯೆ ತಂದೆ ಮುದ್ದುಮೋಹನ್ನ ವಿಠಲನೆ
ನಿನ್ನ ಪದಸೇವೆಯನೆ ಕೊಟ್ಟು ಕಾಪಾಡೊ ಹರಿಯೇ ॥೩॥

90. ಶ್ರೀಮತಿ ಚೂಡಮ್ಮ ಅಡ್ವೊಕೇಟ್ ಪ್ರಹ್ಲಾದರಾಯರ ಕುಟುಂಬ ಚಿತ್ರದುರ್ಗ ಅಂಕಿತ- **ಮಧುರಾನಾಥ ವಿಠಲ**

ಮಧುರಾನಾಥವಿಠಲನೆ ನೀನಿವರಿಗೆ।
ವಿಧ ವಿಧ ಸೌಖ್ಯವನಿತ್ತು ಕಾಪಾಡೋ ಹರಿಯೇ ॥ಪ॥
ವಿಧಿಭವಾದಿಗಳಿಂದ ವಂದ್ಯ ವಿವೇಕಮತಿಯುನೆಯಿತ್ತು।
ಪದುಮನಾಭನೆ ದೇವ ಕಾಪಾಡೊ ಸ್ವಾಮೀ ॥ಅ.ಪ॥

ದಾನವಾಂತಕ ನಿನ್ನ ನಾಮಸ್ಮರಣೆಯಿತ್ತು ।
ನೀನೆ ಗೋಚರನಾಗಿ ಕಾಪಾಡೊ ಸ್ವಾಮೀ ॥೧॥
ಸುಖತೀರ್ಥವರದನೆ ಸುಜ್ಞಾನವನೆಯಿತ್ತು
ಲಕುಮಿವಲ್ಲಭ ಕೃಷ್ಣ ಕಾಪಾಡೊ ಹರಿಯೇ ॥೨॥
ಸುರವರನೆ ಶ್ರೀ ತಂದೆ ಮುದ್ದು ಮೋಹನ ವಿಠಲ
ಗುರುವರದ ಪತಿದ್ವಾರ ನೀನೊಲಿದು ಕಾಪಾಡೊ ಹರಿಯೇ ॥೩॥

91. ಹೆಸರು - **ರತ್ನಮ್ಮ** ಡಾ॥ ಸಿ. ಎನ್. ಸ್ವಾಮಿರಾಯರ ಕುಟುಂಬ
ಅಂಕಿತ - **ಸದಾನಂದಕೃಷ್ಣ ವಿಠಲ**

ಸದಾನಂದಕೃಷ್ಣವಿಠ್ಠಲನೆ ನೀನಿವರಿಗೆ ।
ಸದಾನಂದವನೆ ಕೊಟ್ಟು ಕಾಪಾಡೊ ಹರಿಯೇ ॥ಪ॥
ಸದಾಕಾಲದಲಿ ಸದ್ಬುದ್ಧಿಯನೆ ಕೊಟ್ಟು ನಿನ್ನ
ಪದಾಬ್ಜದಲಿ ಸದ್ಭಕ್ತಿಯನೆ ಕೊಟ್ಟು ಕಾಪಾಡೊ ಹರಿಯೇ ॥ಅ॥

ಅಪಾರಮಹಿಮನೆ ಸ್ವಾಮಿ ಅಪಾರ ಜನ್ಮದ
ಪಾಪರಾಶಿಗಳ ಪರಿಹರಿಸಿ ಕಾಪಾಡೊ ಹರಿಯೇ ॥
ಕೋಪಾದಿಗಳ ಪರಿಹರಿಸಿ ಶ್ರೀಪತಿಯ ಯೇಕಾಂತದಲಿ
ಅಪಾರಮಹಿಮೆಯ ತೋರಿ ಕಾಪಾಡೊ ಹರಿಯೆ ॥೧॥
ಇಂದಿರೇಶನೆ ಕೃಷ್ಣ ಹಿಂದೆ ಮುಂದೆಡಬಲದಿ
ಕಂದರ್ಪಜನಕನೆ ಸ್ವಾಮಿ ಕಂದನಂದದಿ ಸಲಹ ಬೇಕೊ ಹರಿಯೆ ॥
ಮಂದರೋದ್ಧರಸ್ವಾಮಿ ಮಾಮಮೋಹರ ದೇವ ।
ಮಂದಮತಿಯನೆ ಬಿಡಿಸಿ ನೀನಿವರ ಸಲಹಬೇಕೊ ಹರಿಯೇ ॥೨॥
ಪರಮ ಪೂಜ್ಯನೆ ಕೃಷ್ಣ ಪರಮಸೌಭಾಗ್ಯವನೆ ಕೊಟ್ಟು
ಪರಿಪರಿಯ ಸುಖಗಳನಿತ್ತು ನಿರುತ ಕಾಪಾಡೊ ಹರಿಯೆ ॥
ಪರಮಪುರುಷನೆ ಸ್ವಾಮಿ ಶಿರಿ ತಂದೆ ಮುದ್ದು ಮೋಹನವಿಠಲನೆ
ನೀನಿವರಿಗೆ ಜ್ಞಾನ ಭಕ್ತ್ಯಾದಿಗಳನೆ ಕೊಟ್ಟು ಸತತ ಕಾಪಾಡ ಬೇಕೊ
ಹರಿಯೇ ॥೩॥

92. ಕೃಷ್ಣಮ್ಮ (ಸರಸಮ್ಮನ ಅಕ್ಕ) ಬಿ. ಕೆ. ರಾವ್, ಚಿತ್ರದುರ್ಗ, ಇವರ ಪತ್ನಿ ಅಂಕಿತ **ಮುರುಳೀಲೋಲ ವಿಠಲ**

ಮುರುಳೀಲೋಲ ವಿಠ್ಠಲನೆ ನೀನಿವರ ಪರಮಕಾರುಣ್ಯದಲಿ
ಕಾಪಾಡೊ ಹರಿಯೆ ||ಪ||
ಗುರುಭಕ್ತಿ ಸುಜ್ಞಾನವನೆಗೈಸಿ ವರತತ್ವಮತಿಯಿತ್ತು
ಕಾಪಾಡ ಬೇಕೊ ಹರಿಯೇ ||ಅ.ಪ||
ರಂಗನಾಥಸ್ವಾಮಿ ಹೃದಯ ಅಂತರಂಗದಲಿ ನೆಲಿಸಿ ನಿನ್ನ |
ಮಂಗಳರೂಪವನೆ ತೋರಿ ಕಾಪಾಡೊ ಹರಿಯೇ ||
ಗಂಗೆಪಿತ ಸಜ್ಜನರ ಸಂಗದೊಳಿರಿಸಿ ಬಹು |
ಭಂಗಗಳ ಪರಿಹರಿಸಿ ಕಾಪಾಡೊ ಹರಿಯೆ ||೧||
ಸರ್ವೋತ್ತಮನು ನೀನು ಸುರರೆಲ್ಲ ಕಿಂಕರರೆಂಬೊ
ವರತಾರತಮ್ಯ ಪಂಚಭೇದವನೆ ತಿಳಿಸಿ ಕಾಪಾಡೊ ಹರಿಯೆ ||೨||
ನರಮೃಗನೆ ವೈರಾಗ್ಯದಾರಢ್ಯವನೇ ಕೊಟ್ಟು ಗರ್ವಿಕೆಯ ಪರಿಹರಿಸಿ
ಪೂರ್ಣಬೋಧರಮತ ಪೂರ್ಣಜ್ಞಾನವನಿತ್ತು ಕಾಪಾಡೊ ಹರಿಯೇ ||೨||
ಕಾರುಣ್ಯನಿಧಿ ತಂದೆ ಮುದ್ದು ಮೋಹಲ ವಿಠಲ
ನೀನಿವರ ಕಾಪಾಡ ಬೇಕೊ ಹರಿಯೇ ||೩||

93. ಎಂ. ಶ್ರೀನಿವಾಸರಾವ್ ಚಿತ್ರದುರ್ಗ ಅಂಕಿತ - **ಉರುಗಾದ್ರಿವಾಸವಿಠಲ**

ಉರುಗಾದ್ರಿವಾಸವಿಠಲನೆ ನೀನಿವರ
ಪರಮಾದರದಿ ಕಾಪಾಡೊ ಹರಿಯೆ ||ಪ||
ಗುರುಕರುಣವನೆ ಪಡೆದು ಹರಿವಾಯು |
ಗುರುಗಳ ಸೇವೆಯುನಿತ್ತು ಕಾಪಾಡೊ ಹರಿಯೆ ||ಅ.ಪ||
ಗುರುಕರುಣವನು ಪಡೆಯದೆ ಸುರನರಾದ್ಯರಿಗೆ
ಹರಿಕರುಣ ದೊರೆಯದೆಂಬುದು
ನಿರುತ ದೃಢ ಮನದಿ ಕಾಪಾಡೊ ಹರಿಯೇ ||
ಹರಿ ನಿನ್ನ ದಾಸರದಾಸ್ಯವನಿತ್ತು
ಸತತ ಕಾಪಾಡೊ ಹರಿಯೇ ||
ಪರಮಭಾಗವತರ ಸಂಗದಲಿದ್ದು |
ಪರಮಕೃಪೆಯಿಂದ ರಕ್ಷಿಸೋ ಹರಿಯೇ ||೧||

ಪಂಚರೂಪಾತ್ಮಕನೆ ಪಂಚಭೇದವನರುಹಿ
ಸಂಚಿತಾ ಗಾಮಿಗಳ ಹರಿಸಿ ಮಿಂಚಿನಂದದಿ
ಪೊಳೇಯೋ ಹರಿಯೇ ||
ಗುರು ಶಿಷ್ಯ ಬಿಂಬ ಐಕ್ಯ ಚಿಂತನೆಯಿಂದ
ಹರಿವಾಯುಮತದಲ್ಲಿ ನಿರುತ ಕಾಪಾಡೊ ಹರಿಯೇ ||೨||
ಪರಮಭಾಗವತರನು ಹಿಂದೆ ರಕ್ಷಿಸಿದಂತೆ
ನೀನಿರುತ ಕಾಪಾಡೊ ಹರಿಯೆ ||
ಪರಮಭಾಗವತ ತಂದೆ ಮುದ್ದು ಮೋಹನ ವಿಠಲ
ನೀನಿವರಲಿ ಒಂದಂಶದಲಿ ಇದ್ದು
ಹೃದಯಾಂಬರದಲಿ ನಿನ್ನ ಬಿಂಬವ ತೋರಿ
ಕಾಪಾಡೊ ಹರಿಯೇ ||೨||

ತಂದೆ ಮುದ್ದು ಮೋಹನ ವಿಠಲದಾಸರ ನಂತರ ಇವರು ದಾಸಪೀಳಿಗೆಯನ್ನು ಮುಂದುವರಿಸಿದ್ದಾರೆ. ಇವರು ಅನೇಕರಿಗೆ ಅಂಕಿತೋಪದೇಶವನ್ನಿತ್ತಿದ್ದಾರೆ. (ದಿವಂಗತ -1964ರಲ್ಲಿ ಕಾರ್ತೀಕ ಬಹುಳ ದ್ವಾದಶಿ)

94. ಶ್ರೀ ರಘುನಾಥಾಚಾರ್, ಚಿತ್ರದುರ್ಗ (ಶ್ರೀ ದ್ವೈಪಾಯನಾಚಾರ್ಯರ ತಂದೆ) ಅಂಕಿತ **- ವಸುದೇವ ಸುತ ವಿಠಲ**

ವಸುದೇವಸುತವಿಠಲನೆ ನೀನಿವನ ವಶದೊಳಿದ್ದು ।
ವಸುಮತಿಯಲಿ ಕಾಯಬೇಕೊ ಹರಿಯೇ ||ಪ||
ಗುರುರಾಜರ ಕೃಪೆಯು ಇವನ ಮೇಲುಂಟಾಗಲಿ
ಸತತ ಹರಿಯೇ ||ಅ.ಪ||
ಆದಿಮೂರುತಿ ನೀನು ಪರಮಪುರುಷನೆ ಕೃಷ್ಣ
ಮೋದದಿಂದಲಿ ನಿರುತ ಉದ್ಧರಿಸಿ ಕಾಪಾಡೊ ಹರಿಯೆ ||
ಆದಿಮಧ್ಯಾಂತರಹಿತನೆ ನೀನು ಆದಿಮಧ್ಯಾಂತವನು
ಪರಿಹರಿಸಿ ಸಲಹ ಬೇಕೊ ಹರಿಯೇ ||೧||
ಅಚ್ಯುತಾನಂತ ಗೋವಿಂದ ಮಚ್ಛಾದ್ಯನೇಕ ರೂಪನೆ
ಸ್ವಚ್ಛಮನವನೆ ಕೊಟ್ಟು ಕಾಪಾಡೊ ಹರಿಯೆ ||
ಭಕುತಿ ವಿಜ್ಞಾನ ವೈರಾಗ್ಯವೆಂಬ ಮಾರ್ಗವ ತೋರಿ
ಮುಕ್ತಿಮಾರ್ಗದಲಿಟ್ಟು ಕಾಪಾಡ ಬೇಕೊ ಹರಿಯೆ ||೨||

ರಕ್ಕಸಾಂತಕ ತಂದೆ ಮುದ್ದು ಮೋಹನ ವಿಠಲನೆ ।
ಅಕ್ಕರೆಯಿಂದಲಿ ನೀನಿವನ ಹೃದಯದಲಿ
ನೆಲಿಸಿದ್ದು ಕಾಪಾಡೊ ಹರಿಯೇ ॥೩॥

95. **ಶ್ರೀ ರಘುನಾಥಾಚಾರ್ಯರ ಪತ್ನಿ , ಅರಸೀಕೆರೆ, ಅಂಕಿತ - ಪಾರ್ಥಸಾರಥಿ ವಿಠ್ಠಲ**

ಪಾರ್ಥಸಾರಥಿವಿಠ್ಠಲನೆ ನೀನಿವರ ಸಲಹ ಬೇಕೆಂದು
ಪ್ರಾರ್ಥನೆಯ ಕೈಕೊಂಡು ಕಾಪಾಡ ಬೇಕೊ ಹರಿಯೆ ॥ಪ॥
ತೀರ್ಥಪಾದನೆ ನೀನಿವರ ಪಾವನಗೊಳಿಸಿ ಕಾಪಾಡೊ
ಹರಿಯೇ ॥ಅ.ಪ॥
ಪರಮತತ್ವಗಳನು ತಿಳಿಸಿ ಪರಮಾತ್ಮಸರ್ವೋತ್ತಮನು
ಸಕಲಸುರರು ಶ್ರೀಹರಿಯ ಕಿಂಕರರೆಂಬ ತಿಳುವಳಿಕೆಯ
ನಿತ್ತು ಕಾಪಾಡೊ ಹರಿಯೇ ॥
ಗುರುಕರುಣವಿಲ್ಲದಲೆ ಹರಿಕೃಪೆಯವದಗಲಾರದು
ಕಾಣೊ ಹರಿಯೆ ಕೃಪೆಮಾಡಿ ಸಲಹಬೇಕೊ ಹರಿಯೆ ॥೧॥
ಅನಿಮಿತ್ತ ಬಂಧುವೆ ನೀನು ಸಕಲ ಕಾಲಗಳಲ್ಲಿ
ನಿನ್ನ ನಾಮಸ್ಮರಣೆಯನೆ ಕೊಟ್ಟು ಕಾಪಾಡೊ ಹರಿಯೆ ॥
ಅನಘ ಗೋಪಾಲ ಕೃಷ್ಣ ಮೂರುತಿ ನೀನು ಇವರ
ಅಘಗಳ ಪರಿಹರಿಸಿ ಕಾಪಾಡೊ ಹರಿಯೆ ॥೨॥
ವರಮಧ್ವಪತಿ ಶ್ರೀ ಹರಿಯೇ ನಿನ್ನ ಭಕ್ತರ
ಸಹವಾಸವನೆ ಕೊಟ್ಟು ಕಾಪಾಡಬೇಕೊ ಹರಿಯೆ ॥
ವರಪಂಚಬೇಧ ತಾರತಮ್ಯ ಜ್ಞಾನಾದಿಗಳನೆ ಕೊಟ್ಟು
ತಂದೆ ಮುದ್ದು ಮೋಹನ ವಿಠ್ಠಲನೆ ನೀನಿವರ
ಹೃದಯದೊಳು ನೆಲಿಸಿ ಕಾಪಾಡೊ ಹರಿಯೆ ॥೩॥

96. **ದ್ವೈಪಾಯನಾಚಾರ್ಯರು, ಚಿತ್ರದುರ್ಗ, ಅಂಕಿತ - ಪ್ರಹ್ಲಾದವರದ ವಿಠಲ**

ಪ್ರಹ್ಲಾದವರದ ವಿಠಲನೆ ನೀನಿವಗೆ ಪರಮಾಹ್ಲಾದ
ವನೆ ಕೊಟ್ಟು ಕಾಪಾಡೊ ಹರಿಯೆ ॥ಪ॥
ಸೊಲ್ಲು ಸೊಲ್ಲಿಗೆ ನಿನ್ನ ನಾಮವನೆ ನುಡಿಸಿ
ಪಾಲಿಸಲಿ ಬೇಕೊ ಸ್ವಾಮಿ ॥ಅ.ಪ॥
ಭಕುತ ಪಾಲನೆ ಶ್ರೀಶ ಹೊತ್ತು ಹೊತ್ತಿಗೆ ಮಾಳ್ಪ

ದುಷ್ಕೃತ್ಯಗಳನೆತರಿದು ಕಾಪಾಡೊ ಹರಿಯೆ ||
ಮುಕುತಿದಾಯಕ ಸ್ವಾಮಿ ಮಧ್ವಮುನಿವಂದ್ಯ
ನೀನಿವನಿಗೆ ಸರ್ವ ಶಕ್ತಿಯನೆ ಕೊಟ್ಟು ಕಾಪಾಡೊ ಹರಿಯೆ ||೧||
ಗುರುಭಕ್ತಿ ಗುರುಸೇವೆ ಹರಿಸೇವೆ ಮಾಳ್ಪಂಥ
ವರಭಕ್ತಿಯನೆ ಕೊಟ್ಟು ಕಾಪಾಡೊ ಹರಿಯೇ ||
ಕರಿವರದ ಶ್ರೀ ಕೃಷ್ಣ ಜಗದಿ ಇವನ ಕೀರ್ತಿ
ಮೆರೆಯಲೀ ಸತತ ಎಂತೆಂಬ ಮನಮಾಡಿ ಕಾಪಾಡೊ
ಹರಿಯೇ ||೨||
ಹಿಂದಿನಾಭಕ್ತರನು ಪೊರೆದಂದದಲಿ ನಿನಗಿವನು
ಕಂದನೆಂತೆಂದು ಕಾಪಾಡೊ ಹರಿಯೆ ||
ಕುಂದುಗಳೆಣಿಸದಲೆ ಸದ್ಭಕ್ತಿಯನೆ ಕೊಟ್ಟು |
ತಂದೆ ಮುದ್ದು ಮೋಹನ ವಿಠಲನೆ ಹೃದಯಾರ
ವಿಂದದಿ ನಿನ್ನ ರೂಪವನೆ ತೋರಿ ಕಾಪಾಡೊ ಹರಿಯೆ ||೩||

97. ಹೆಸರು - ಎಸ್. ಭೀಮರಾವ್, (Relired S-I. of Police) ತೀರ್ಥಂ P.O ಪಲ್ಮನೀರ್ ತಾಲ್ಲೂಕು ಅಂಕಿತ - ಶ್ರೀ ಸಿರಿಪ್ರಾಣಮಯ ವಿಠಲ

ಶ್ರೀಸಿರಿಪ್ರಾಣಮಯವಿಠಲನೆ ನೀನಿವರ ಅರಿಷಡ್ವರ್ಗಗಳ ಪರಿಹರಿಸಿ
ಕಾಪಾಡ ಬೇಕೊ ಹರಿಯೆ ||ಪ|| ಪರಮಪುರುಷನೆ ದೇವ | ನೀನಿವರ
ಪುರುಷಾರ್ಥಗಳ ಪೂರೈಸಿ ಕೃಪೆ ಮಾಡಬೇಕೊ ಹರಿಯೇ ||ಅ.ಪ||
ಅಪಾರಮಹಿಮನೆ ದೇವ | ನೀನವರ ಅಪಾರಕರ್ಮದ ತೊಡಕನು ಬಿಡಿಸಿ |
ಸಲಹ ಬೇಕೊ ಹರಿಯೆ || ಅಗಣಿತಮಹಿಮನೆ ದೇವ | ನೀನಿವರ |
ಅಗಾಧ ಪಾಪಗಳ ಪರಿಹರಿಸಿ ಕಾಪಾಡೊ ಹರಿಯೇ ||೧||
ಅರವಿಂದನಾಭನೆ ದೇವ | ನೀನಿವರ | ಅರಘಳಿಗೆ ಬಿಡದಂದದಲಿ
ಸರ್ವತ್ರಸಲಹಬೇಕೊ ಹರಿಯೆ ||
ಮಾರಮಣನೆ ದೇವ | ನೀನಿವರ | ಮಮಕಾರಗಳ ಬಿಡಿಸಿ ಕೃಪೆಮಾಡೊ
ಹರಿಯೆ ||೨||
ಸರ್ವಗುಣ ಪರಿಪೂರ್ಣ | ನೀನಿವರಿಗೆ | ನಿನ್ನ ಅಗಾಧ
ಮಹಿಮೆಗಳ ತೋರಿ ಕೃಪೆಮಾಡ ಬೇಕೊ ಹರಿಯೇ ||
ಸರ್ವಾಬೀಷ್ಟದಾಯಕ | ಸಿರಿ ತಂದೆ ಮುದ್ದು ಮೋಹನ ವಿಠಲನೆ |
ನೀನಿವರಿಗೆ ನಿನ್ನ ನಿಜರೂಪವನೆ ತೋರಿ ಸಲಹಬೇಕೊ ಹರಿಯೇ ||೩||

98. ಶ್ರೀ ಬಿ. ಎಸ್. ಸತ್ಯನಾರಾಯಣರಾವ್ (Railways)
ಅಂಕಿತ - ಶ್ರೀ ಗುರು ಜಯಾನಾಥ ವಿಠಲ

ಶ್ರೀಗುರುಜಯಾನಾಥವಿಠಲನೆ ನೀನಿವರ ಪರಮ ಸಂತೋಷದಲಿ
ಕಾಪಾಡೊ ಹರಿಯೆ ||ಪ||
ಗುರುಭಕ್ತಿ ಮೊದಲಾದ ಸದ್ಗುಣವನೇ
ಕೊಟ್ಟು ಸರಸಿಜಾಕ್ಷನೇ ದೇವ ಕಾಪಾಡೊ ಹರಿಯೆ ||ಅ.ಪ||
ದುರ್ಜನರ ಸಂಗವನೆ ದೊರಗೈಸುತ ಸಕಲ ಸಜ್ಜನರ
ಸಂಗದೊಳಿಟ್ಟು ಸಲಹ ಬೇಕೊ ಸ್ವಾಮೀ ||
ಹೆಜ್ಜೆ ಹೆಜ್ಜೆಗೆ ನಿನ್ನ ನಾಮಾಮೃತವನೇ ಕೊಟ್ಟು
ಸಲಹೊ ಬೇಕೋ ಸ್ವಾಮಿ ||೧||
ಹಿಂದೆ ಮಾಡಿದ ಪಾಪಗಳನ್ನೆಲ್ಲಾ ಪರಿಹರಿಸಿ ಮುಂದೆ
ಸುಜ್ಞಾನ ಮಾರ್ಗವನೇ ಕೊಟ್ಟು ಕಾಪಾಡೊ ಹರಿಯೆ ||
ಹಿಂದೆ ಮುಂದೆ ಎಡಬಲ ಬಳಹೊರಗೆ ನೀನಿದ್ದು
ಛಂದದಿಂದಲಿ ಇವನ ಸಲಹೊ ಬೇಕೋ ಸ್ವಾಮಿ |
ಸಚ್ಚಿತಾನಂದಸ್ವಾಮಿ ಸಕಲ ತತ್ವಸಾರವನೇ
ಬಿಚ್ಚಿ ತೋರಲಿಮನದಿ ಹರಿವಾಯುಗಳ
ಕೃಪೆಯಿಂದ ಸ್ವಾಮಿ ||೨||
ಅಚ್ಚುತಾ ಹರಿ ತಂದೆ ಮುದ್ದು
ಮೋಹನ ವಿಠಲನೇ ನೀನಿವನ ಮನದ ಮುಚ್ಚಳವನೇ ತೆಗೆದು
ನಿನ್ನ ರೂಪವನೇ ತೋರಿ ಸಲಹಬೇಕೋ ಸ್ವಾಮಿ ||೩||

99. ಬಿ. ಪದ್ಮಾವತಿಬಾಯಿ ಅಂಕಿತ - ಶ್ರೀ ರಮಾಲೋಲ ವಿಠಲ

ಶ್ರೀ ರಮಾಲೋಲವಿಠಲನೇ ನೀನಿವರ
ಪರಮಾನುರಾಗದಲಿ ಕಾಪಾಡೊ ಹರಿಯೇ ||
ಕ್ಷಮಾದಿ ಗುಣವಿತ್ತು ಪಾಪಗಳ ಪರಿಹರಿಸಿ ಕಮಲನಾಭನೆ ಭಕ್ತಿ ಸುಜ್ಞಾನ
ವನೆ ಇತ್ತು ಕಾಪಾಡೊ ಹರಿಯೇ ||
ಆನಂದ ತೀರ್ಥರ ಮತದಸಾರತತ್ವವ ತಿಳಿಸಿ ಅನಂದವನೇ ತೋರಿ
ಅನವರತ ನೀನಿವರ ಕಾಪಾಡೋ ಹರಿಯೇ ||
ಶ್ರೀನಿವಾಸನೇ ನಿನ್ನ ದಾಸಸಂಗದೊಳಿಟ್ಟು ಮಾನಾಪ
ಮಾನಗಳು ಮನಕೆ ತೋರದೆ ಮತಿ ಇತ್ತು ಕಾಪಾಡೊ ಹರಿಯೇ ||

ಮಂಗಳಾಂಗನೆ ದೇವ ಸನ್ಮಂಗಳವನೇ
ಕೊಟ್ಟು ಅಂತರಂಗದಿನೆಲೆಸಿ ಕಾಪಾಡೋ ಹರಿಯೇ
ಹರಿಯ ನೆನೆವಂತೆ ಸನ್ಮತಿಯನೇ ಇತ್ತು ಕಾಪಾಡೊ ಹರಿಯೇ||
ರಂಗನಾಥನೇ ಸಕಲ ಭವದುಃಖಗಳ ಬಿಡಿಸಿ ಗಂಗೆ ಪಿತನೇ ಪತಿಯ
ಅಂತರಂಗವನೇ ತಿಳಿದು ನಡೆಯುವಂತೆ ಸನ್ಮತಿಯಿತ್ತು ಕಾಪಾಡೋ ಹರಿಯೇ||
ಉದಯಾಸ್ತ ಪರಿಮಾನ ನಿನ್ನ ನಾಮಸ್ಮರಣೆ ಸದಾಕಾಲದಲ್ಲಿ
ಮತಿಯಿತ್ತು ಮಧುಸೂಧನನೇ ದೇವ
ಗುರುಸೇವೆಯನು ಕೊಟ್ಟು ಕಾಪಾಡೊ ಹರಿಯೇ ||
ವಿಧಿಪಿತನೆ ತಂದೆ ಮುದ್ದು ಮೋಹನ್ನ ವಿಠ್ಠಲನೆ |
ನೀನಿವರ ಹೃದಯಾರವಿಂದದಲಿ ನಿನ್ನ ಬಿಂಬರೂಪವ
ತೋರಿ ಕಾಪಾಡೋ ಹರಿಯೇ ||

100. ಬಿ. ಎಸ್. ಸತ್ಯಬೋಧರಾವ್. ಶಿವಮೊಗ್ಗ, ಅಂಕಿತ - ಶ್ರೀರಂಗಮೂರ್ತಿವಿಠಲ

ಶ್ರೀ ರಂಗಮೂರ್ತಿವಿಠಲನೆ ನೀನಿವರ ಕರುಣಾಂತರಂಗದಿ ನೋಡಿ
ಕಾಪಾಡಬೇಕೊ ಹರಿಯೇ ||
ಲಿಂಗದೊಳಗಡೆ ಇರುವ ನಿತ್ಯರೂಪವ ತೋರಿ ಮಂಗಳಾಂಗನೆ
ಕೃಷ್ಣ ಕಾಪಾಡ ಬೇಕೊ ಹರಿಯೇ ||
ಭಕ್ತ ವತ್ಸಲ ದೇವ ಭಕ್ತಿ ಮಾರ್ಗವ ತೋರಿ
ಮುಕ್ತರೊಡನಾಡುವಂದದಲಿ ಪಾಪಮುಕ್ತನ ಮಾಡಿ
ಕಾಪಾಡಬೇಕೋ ಹರಿಯೇ ||೧||
ಪೂರ್ಣಪ್ರಜ್ಞರ ಮತದ ಸಾರತತ್ವವ ತಿಳಿಸಿ ಸಂಪೂರ್ಣ
ಕಾರುಣ್ಯದಲಿ ಕೈಪಿಡಿದು ಉದ್ಧರಿಸ ಬೇಕೊ ಹರಿಯೆ ||
ಪೂರ್ಣವಾಗಲಿ ಸಕಲ ಮನದಿಚ್ಛೆ ಇವನಿಗೆ ಕಾರುಣ್ಯ
ಮೂರುತಿಯೇ | ಸರ್ವಬಾಂಧವನಾಗಿ ನಿನ್ನ ವರಪುತ್ರನೆಂದೆನಿಸಿ
ಕಾಪಾಡ ಬೇಕೊ ಹರಿಯೇ ||೨||
ಹಿಂದಿನ ಭಕ್ತರನು ಪೊರೆವಂದದಲಿ
ನೀನಿವನ ಮಂದಮತಿಯನೆ ಬಿಡಿಸಿ ಆನಂದವನೆ
ಕೊಟ್ಟು ಕಾಪಾಡ ಬೇಕೋ ಹರಿಯೇ || ಇಂದಿರೇಶನೆ ತಂದೆ ಮುದ್ದು ಮೋಹನ್ನ
ವಿಠ್ಠಲನೆ ನೀನಿವನ ಹೃದಯಾರವಿಂದದಲಿ ನಿನ್ನ
ಬಿಂಬರೂಪವ ತೋರಿ ಸಲಹ ಬೇಕೊ ಹರಿಯೇ ||೩||

101. ಈರೋಡು ರಾಘವೇಂದ್ರರಾವ್, ಅಂಕಿತ - **ಕರುಣಾರಸ ಪೂರ್ಣವಿಠಲ**

ಕರುಣಾರಸಪೂರ್ಣವಿಠಲನೆ ನೀನಿವರ ।
ಕರುಣಾ ಕಟಾಕ್ಷದಿ ನೋಡಿ ಸತತ ಕಾಪಾಡೋ ಹರಿಯೇ ।।ಪ।।
ಕಮಲನಾಭನೆ ಕೃಷ್ಣ । ಅಜ್ಞಾನವನೆ ಪರಿಹರಿಸಿ
ನಿತ್ಯದಲಿ ಕಾಪಾಡೊ ಹರಿಯೇ ।।ಅ.ಪ।।
ನಿಗಮ ವೇದ್ಯನೆ ಕೃಷ್ಣ ಅಗಣಿತ ಮಹಿಮ
ಸನ್ಮುನಿಗಣಾರಾಧಿತ । ನಿನ್ನ ಪಾದಭಜನೆಯ ಕೊಟ್ಟು
ನಿತ್ಯದಲಿ ಕಾಪಾಡೊ ಹರಿಯೇ ।।೧।।
ಖಗರಾಜ ಗಮನ ನರಹರಿಯೇ । ದೇವರ ದೇವ
ಸಕಲಪಾಪರಾಶಿಗಳ ಪರಿಹರಿಸಿ । ಕಾಪಾಡೋ ಹರಿಯೇ ।।೨।।
ಹರಿಗುರುಗಳಲಿ ಭಕ್ತಿ ವಿಷಯದಲಿ ವೈರಾಗ್ಯ
ಶಮದಮಾದಿ ಸದ್ಗುಣವನೆ ಕೊಟ್ಟು । ಕಾಪಾಡೊ ಹರಿಯೇ ।।೩।।
ಹರಿಯೆ ಸರ್ವೋತ್ತಮನು । ವಿರಂಚಿ ಮೊದಲಾದ
ಸುರರು ಶ್ರೀ ಹರಿಯ ಕಿಂಕರರು । ಎಂಬ ಸನ್ಮತಿಯನೇ ಕೊಟ್ಟು
ಕಾಪಾಡೋ ಹರಿಯೇ ।।೪।।
ಗಾನಲೋಲನೆ ಸ್ವಾಮಿ । ಮಮಕುಲ ದೈವ ಶ್ರೀ ಹರಿಯೆ
ಧ್ಯಾನಾದಿ ಸಾಧನೆಯ ಗೈಸಿ । ಸನ್ಮಾರ್ಗವನೆ ತೋರಿ
ಸಲಹ ಬೇಕೋ ಹರಿಯೇ ।।೫।।
ದಾನವಾಂತಕ ಶೌರಿ । ದಯಾಪಯೋನಿಧೆ । ತಂದೆ
ಮುದ್ದು ಮೋಹನ ವಿಠಲನೆ ನಿನ್ನ ಸೇವೆಯನೆ ಕೊಟ್ಟು
ಸತತ ಕಾಪಾಡೋ ಹರಿಯೇ ।।೬।।

102. ಹೆಸರು - **ನಾಗರಾಜರಾಯ,** ತಂದೆ ಮುದ್ದು ಮೋಹನದಾಸರ ಹಿರಿಯ ಮಗಳಾದ ಗುಂಡಮ್ಮನ ೨ನೆಯ ಮಗ ಅಂಕಿತ - **ಸನಾತನ ವಿಠ್ಠಲ**

ಸನಾತನವಿಠ್ಠಲನೆ ನೀನಿವನ । ಮನಮೊದಲಾದ
ಸಕಲೇಂದ್ರಿಯಗಳ ಸೇವೆಯ ಕೈಕೊಂಡು ಕಾಪಾಡೊ ಹರಿಯೇ ।।
ಅನಾಥರಕ್ಷಕನೆ ಅಖಿಲ ಜಗದ್ವ್ಯಾಪಕನೆ ಅನುದಿನ ನಿನ್ನವರ
ಸಹವಾಸವನೆ ಕೊಟ್ಟು ಕಾಪಾಡೊ ಹರಿಯೇ ।।
ಹಿರಿಯರ ಮಾರ್ಗವನನುಸರಿಸಿ ನಾನಿತ್ತೆನಂಕಿತವ
ಜರಿಸದಲೆ ನಿನ್ನವರ ಜ್ಞಾನಭಕ್ತಿಯನಿತ್ತು ಕಾಪಾಡೊ ಹರಿಯೆ ।।
